ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 24 ಸೋಮವಾರ 2024

₹4

ಸಂಪುಟ: 45 | ಸಂಚಿಕೆ: 69 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಸೂರಜ್ ರೇವಣ್ಣ ಪ್ರಕರಣ: ಪೊಲೀಸರಿಂದ ನಿಷ್ಪಕ್ಷಪಾತ ತನಿಖೆ, ಇದರಲ್ಲಿ ಷಡ್ಯಂತ್ರವಿಲ್ಲ

ಮೈಸೂರು, ಜೂ.23(ಬಿಎಲ್‌ಯು)– ಸೂರಜ್ ರೇವಣ್ಣ ಪ್ರಕರಣದಲ್ಲಿ ಪೊಲೀಸರು ನಿಷ್ಪಕ್ಷಪಾತ ತನಿಖೆ ನಡೆಸುತ್ತಿದ್ದು, ಯಾವುದೇ ಷಡ್ಯಂತ್ರ ನಡೆದಿಲ್ಲ ಎಂದು ಕಾಂಗ್ರೆಸ್ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ತಿಳಿಸಿದರು.


ಡಾ.ಯತೀಂದ್ರ

ಮೈಸೂರಿನ ಆಲನಹಳ್ಳಿಯ ಕುದೇರು ಮಠದ ಕಾರ್ಯಕ್ರಮದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಪೊಲೀಸರ ತನಿಖೆಯಿಂದ ಸತ್ಯಾಸತ್ಯತೆ ಹೊರಬರಲಿದೆ. ಲೈಂಗಿಕ ದೌರ್ಜನ್ಯ ಆಗಿರುವ ಬಗ್ಗೆ ಯುವಕನೊಬ್ಬ ಪೊಲೀಸರಿಗೆ ದೂರು ಕೊಟ್ಟಿದ್ದು, ಈ ಬಗ್ಗೆ ತನಿಖೆ ನಡೆಯುತ್ತಿದೆ. ಯಾರೇ ತಪ್ಪು ಮಾಡಿದ್ದರೂ ಅದು ತಪ್ಪೆ ಎಂದರು.

ಚನ್ನಪಟ್ಟಣದ ಉಪ ಚುನಾವಣೆಗೆ ಅಭ್ಯರ್ಥಿ ಆಯ್ಕೆಗಾಗಿ ಪಕ್ಷದ ವರಿಷ್ಠರು ಸ್ಥಳೀಯ ಕಾರ್ಯಕರ್ತರ ಜೊತೆ ಚರ್ಚೆ ಮಾಡಿ ತೀರ್ಮಾನ ಮಾಡುತ್ತಾರೆ ಎಂದರು. ದೇಶದಲ್ಲಿ ತೈಲ ಬೆಲೆ ಏರಿಕೆಗೆ ಕೇಂದ್ರದ ಬಿಜೆಪಿ ಸರ್ಕಾರವೇ ಕಾರಣ. ಇದರಿಂದ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ಮಾಡುವ ನೈತಿಕ ಹಕ್ಕು ಬಿಜೆಪಿಗಿಲ್ಲ ಎಂದು ಡಾ.ಯತೀಂದ್ರ ತಿರುಗೇಟು ನೀಡಿದರು.

ಆರೋಗ್ಯವೇ ಭಾಗ್ಯ: ಡಾ.ಆರ್.ರಾಘವೇಂದ್ರ


ಬಾಬುರಾಯನಕೊಪ್ಪಲು ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಸಕಾರಾತ್ಮಕ ಆಲೋಚನೆಯ ಬಗ್ಗೆ ಅರಿವು ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೈಸೂರು, ಜೂ. 23–ಕಿರಂಗೂರು ಗ್ರಾಮ ಪಂಚಾಯಿತಿ ಹಾಗೂ ಬಾಬುರಾಯನಕೊಪ್ಪಲು ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಮೈಸೂರಿನ ವಿದ್ಯಾವರ್ಧಕ ಸ್ನಾತಕೋತ್ತರ ಕೇಂದ್ರದ ವತಿಯಿಂದ ಸಕಾರಾತ್ಮಕ ಆಲೋಚನೆಯ ಬಗ್ಗೆ ಅರಿವು ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೈಸೂರಿನ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನ ದೈಹಿಕ ನಿರ್ದೇಶಕ ಡಾ.ರಾಘವೇಂದ್ರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಉತ್ತಮ ಆರೋಗ್ಯ ಕಾಪಾಡಿಕೊಳ್ಳುವುದರ ಜೊತೆಗೆ ಸಕಾರಾತ್ಮಕ ಚಿಂತನೆಗಳ ಮೂಲಕ ವಿದ್ಯಾಭ್ಯಾಸದ ಕಡೆ ಗಮನಹರಿಸಿ ದುಶ್ಚಟಗಳಿಂದ ದೂರವಿರಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಿರಂಗೂರು ಗ್ರಾಪಂ ಅಭಿವೃದ್ಧಿ ಅಧಿಕಾರಿ ಪ್ರಶಾಂತ್‌ಬಾಬು, ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ವಿದ್ಯಾಭ್ಯಾಸವೇ ಬಂಡವಾಳವಾಗಿದ್ದು, ಪ್ರಸ್ತುತ ಸ್ಟಾಕ್ ಮಾರುಕಟ್ಟೆ ಬಂಡವಾಳ ಹೂಡಿಕೆಗಿಂತ ಮಿಗಿಲಾಗಿದೆ ಎಂದು ನುಡಿದರು.

ವಿದ್ಯಾವರ್ಧಕ ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥೆ ಡಾ.ಪೂರ್ಣಿಮಾ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕು.ಚೈತ್ರ ಪ್ರಾರ್ಥಿಸಿ, ಅತಿಥಿಗಳು ಹಾಗೂ ಸಭಿಕರನ್ನು ಸ್ವಾಗತಿಸಿದರು. ಕು. ರಂಜಿತ ವಂದಿಸಿದರೆ, ಕು. ನಿಶ್ಚಿತ ನಿರೂಪಿಸಿದರು. ಸಹಾಯಕ ಪ್ರಾಧ್ಯಾಪಕ ಪ್ರಶಾಂತ್‌ಕುಮಾರ್, ಶ್ರೀಮತಿ ಅನುಷಾ ಹಾಗೂ ಸುನಿಲ್ ಹಾಜರಿದ್ದರು. ಅಂದಾಜು 130ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಯುಜಿಸಿ-ನೆಟ್ ಪರೀಕ್ಷೆಯಲ್ಲಿ ಅಕ್ರಮ: ಎಐಡಿವೈಓ ಖಂಡನೆ

ಮೈಸೂರು, ಜೂ.23–ಜೂನ್ 18ರಂದು ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿಯು (ಎನ್‌ಟಿಎ) ನಡೆಸಿದ ಯುಜಿಸಿ–ನೆಟ್ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂದು ದೂರುಗಳು ಬಂದ ಹಿನ್ನೆಲೆಯಲ್ಲಿ ಪರೀಕ್ಷೆಯನ್ನು ರದ್ದು ಮಾಡಲಾಗಿದೆ. ಹಾಗೂ ತನಿಖೆಯನ್ನು ಸಿಬಿಐಗೆ ಒಪ್ಪಿಸಲಾಗಿದೆ. ನೀಟ್, ಯುಜಿಸಿ ನೆಟ್ ಸೇರಿದಂತೆ ಎನ್‌ಟಿಎ ನಡೆಸುವ ಹಲವಾರು ಪರೀಕ್ಷೆಗಳಲ್ಲಿ ಅನೇಕ ಲೋಪಗಳಾಗಿವೆ. ಲಕ್ಷಾಂತರ ಪರೀಕ್ಷಾರ್ಥಿಗಳ ಶ್ರಮವನ್ನು ಹಾಳು ಮಾಡಿದ ತಪ್ಪಿತಸ್ಥರನ್ನು ಕೂಡಲೇ ಬಂಧಿಸಬೇಕೆಂದು ಎಐಡಿವೈಓ ಜಿಲ್ಲಾ ಕಾರ್ಯದರ್ಶಿ ಎಸ್.ಸುಮಾ ಆಗ್ರಹಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಮಂಗಳವಾರದಂದು ಯುಜಿಸಿ–ನೆಟ್ ಪರೀಕ್ಷೆಯನ್ನು ದೇಶದಾದ್ಯಂತ 317 ನಗರಗಳಲ್ಲಿ 1205 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗಿತ್ತು. 9 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಈ ವರ್ಷದಿಂದ ಪಿಹೆಚ್.ಡಿ ಪ್ರವೇಶಕ್ಕೂ ನೆಟ್ ಪರೀಕ್ಷೆ ಪಾಸಾಗುವುದು ಕಡ್ಡಾಯ ಮಾಡಿದ್ದರಿಂದಾಗಿ ಪಿಹೆಚ್.ಡಿ ಪ್ರವೇಶಕ್ಕಾಗಿ ಕಾದು ಕುಳಿತ ವಿದ್ಯಾರ್ಥಿಗಳು ಹಾಗೂ ಮಹಾವಿದ್ಯಾಲಯಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಹತೆ ಪಡೆಯುವುದಕ್ಕಾಗಿ ಸ್ನಾತಕೋತ್ತರ ಪದವಿ ಮುಗಿಸಿದ ವಿದ್ಯಾರ್ಥಿಗಳು ಈ ಪರೀಕ್ಷೆಗೆ ಹಾಜರಾಗಿದ್ದರು. ಆದರೆ ಎಲ್ಲಾ ನೇಮಕಾತಿಗಳಲ್ಲೂ ನಡೆಯುವ ಭ್ರಷ್ಟಾಚಾರದ ಭೂತ ಈಗ ಈ ಪರೀಕ್ಷೆಗೂ ಆವರಿಸಿಕೊಂಡಿದೆ. ಇತ್ತೀಚಿನ ದಿನಗಳಲ್ಲಿ ನೇಮಕಾತಿಗಾಗಲಿ, ಉನ್ನತ ವ್ಯಾಸಂಗಕ್ಕೆ ಆಗಲಿ ಪ್ರವೇಶ ಪರೀಕ್ಷೆಗಳು ನಡೆದಾಗ ಅವುಗಳಲ್ಲಿ ಅಕ್ರಮ ಸರ್ವೇ ಸಾಮಾನ್ಯ ಎನ್ನುವಂತಾಗಿದೆ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

ವಿಶ್ವಕರ್ಮ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಜೂ.23(ಪಿಎಂ)–ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ವತಿಯಿಂದ 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.65ಕ್ಕಿಂತ ಮೇಲ್ಪಟ್ಟು ಅಂಕ ಪಡೆದಿರುವ ವಿಶ್ವಕರ್ಮ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಮೈಸೂರು ನಗರ ಮತ್ತು ಮೈಸೂರು ಗ್ರಾಮಾಂತರ ಜಿಲ್ಲೆಯ ವಿದ್ಯಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದೆ. ಅರ್ಜಿ ಸಲ್ಲಿಸಲು ಕೊನೆ ದಿನ ಜೂ.30. ತದನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ನಂ.512, 80 ಅಡಿ ರಸ್ತೆ, ಸರ್ದಾರ್ ವಲ್ಲಭಭಾಯ್ ಪಟೇಲ್ ನಗರ, ಪೊಲೀಸ್ ಲೇಔಟ್ 2ನೇ ಹಂತ ಮೈಸೂರು ಇಲ್ಲಿಗೆ ಅಂಚೆ ಮೂಲಕ ತಲುಪಿಸಬೇಕು. ವಿದ್ಯಾರ್ಥಿಯ ಮತ್ತು ಪೋಷಕರ ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ, ವಿದ್ಯಾರ್ಥಿಯ ಮೂಲ ಅಂಕಪಟ್ಟಿಯ ಜೆರಾಕ್ಸ್ ಪ್ರತಿ, ವಿದ್ಯಾರ್ಥಿಯ ಇತ್ತೀಚಿಗಿನ ಪಾಸ್‌ಪೋರ್ಟ್ ಅಳತೆಯ ಒಂದು ಭಾವಚಿತ್ರ, ಪ್ರಸ್ತುತ ಚಾಲ್ತಿಯಲ್ಲಿರುವ ಮೊಬೈಲ್ ನಂಬರ್ ಅನ್ನು ಅರ್ಜಿಯೊಂದಿಗೆ ಲಗತ್ತಿಸಿ ಕಳುಹಿಸಬೇಕು. ಮಾಹಿತಿಗೆ 91088 14433, 97434 89608, 97398 09952 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಜು.2ರಂದು ಪೆನ್‌ಷನ್ ಅದಾಲತ್

ಮೈಸೂರು.ಜೂ.23– ಅಂಚೆ ಇಲಾಖೆ ವತಿಯಿಂದ ಮೈಸೂರು ವಿಭಾಗದ ಅಂಚೆ ಇಲಾಖೆ ಹಿರಿಯ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಜು.2ರಂದು ಬೆಳಗ್ಗೆ 11ಕ್ಕೆ ಪೆನ್‌ಷನ್ ಅದಾಲತ್ ಏರ್ಪಡಿಸಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಪಿಂಚಣಿದಾರರು ತಮ್ಮ ಅಹವಾಲುಗಳೇನಾದರೂ ಇದ್ದಲ್ಲಿ ಜೂ.27ರೊಳಗೆ ಮೈಸೂರು ವಿಭಾಗದ ಅಂಚೆ ಇಲಾಖೆ ಹಿರಿಯ ಅಂಚೆ ಅಧೀಕ್ಷಕರ ಕಚೇರಿಗೆ ಸಲ್ಲಿಸಬಹುದು. ಇಚ್ಛೆಯುಳ್ಳ ಪಿಂಚಣಿದಾರರು ಅದಾಲತ್‌ನಲ್ಲಿ ಭಾಗವಹಿಸಬಹುದು ಎಂದು ಮೈಸೂರು ವಿಭಾಗದ ಹಿರಿಯ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಾಯತ್ರಿಪುರಂನ ಮಹಿಳೆ ನಾಪತ್ತೆ



ಮೈಸೂರು, ಜೂ.23(ಎಸ್‌ಪಿಎನ್)–ಮೈಸೂರು ಗಾಯತ್ರಿಪುರಂ ನಿವಾಸಿ ಗೃಹಿಣಿ, 19 ವರ್ಷದ ಕೆ.ಹರ್ಷಿತಾ ಎಂಬುವರು ಜೂನ್ 14ರಂದು ಮನೆಯಿಂದ ಕಾಣೆಯಾಗಿದ್ದು, ಈ ಸಂಬಂಧ ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇವರ ಬಗ್ಗೆ ಯಾರಿಗಾದರೂ ಸುಳಿವು ಸಿಕ್ಕಲ್ಲಿ ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಮೊ. ಸಂ:94808– 02233, ದೂ.ಸಂ: 0821–2418308 /112 ಅನ್ನು ಸಂಪರ್ಕಿಸಬಹುದು ಎಂದು ಪೊಲೀಸರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ



ಪ್ರಮೀಳಾ

ಸುತ್ತೂರು: ನಂಜನಗೂಡು ತಾಲೂಕಿನ ಬೊಕ್ಕಹಳ್ಳಿ ಗ್ರಾಮದ ಪ್ರಮೀಳಾ (52) ಅವರು ನಿಧನರಾದರು. ಮೃತರು ಪತಿ ವಕೀಲ ಸಿದ್ದನಾಯಕ, ಮೂವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಭಾನುವಾರ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.

'ಕೇಳದ ಕಿವಿಗಳು ಹೇಳಿದ ಕಥೆಗಳು' ಕೃತಿ ಲೋಕಾರ್ಪಣೆ


ಮೈಸೂರಿನ ಕುವೆಂಪುನಗರದ ರಂಗಾಂತರಂಗದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕೆ.ಎಸ್.ಸುಚೇತ ರಚನೆಯ 'ಕೇಳದ ಕಿವಿಗಳು ಹೇಳಿದ ಕಥೆಗಳು' ಕೃತಿಯನ್ನು ಹಿರಿಯ ವಿಮರ್ಶಕ ಪ್ರೊ.ಓ.ಎಲ್.ನಾಗಭೂಷಣ ಭಾನುವಾರ ಬಿಡುಗಡೆಗೊಳಿಸಿದರು.

ಮೈಸೂರು,ಜೂ.23(ಜಿಎ)–ಮೈಸೂರಿನ ಕುವೆಂಪುನಗರದ ರಂಗಾಂತರಂಗದಲ್ಲಿ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಸಮಾಜವಾದಿ ಅಧ್ಯಯನ ಕೇಂದ್ರ ಹಾಗೂ ರಂಗಾಂತರಂಗ ಸಹಯೋಗದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕೆ.ಎಸ್.ಸುಚೇತ ರಚನೆಯ ಕೇಳದ ಕಿವಿಗಳು ಹೇಳಿದ ಕಥೆಗಳು ಕೃತಿಯನ್ನು ಹಿರಿಯ ವಿಮರ್ಶಕ ಪ್ರೊ.ಓ.ಎಲ್.ನಾಗಭೂಷಣ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, ಸಾಮಾನ್ಯ ಮನುಷ್ಯರು ಅಂಧರ ಕಣ್ಣಿನಲ್ಲಿ ಲೋಕ ನೋಡುವುದು, ಶ್ರವಣ ದೋಷವುಳ್ಳವರ ಕಿವಿಯಲ್ಲಿ ಕೇಳುವುದನ್ನು ಕಲ್ಪಿಸಿಕೊಳ್ಳಬೇಕು. ಹಾಗೇ ನೋಡಲು, ಕೇಳಲು ಸಾಧ್ಯವಾದರೇ ಮನುಷ್ಯ ದುರಹಂಕಾರವನ್ನು ಬಿಟ್ಟು ಬದುಕಬೇಕು. ವಿಶೇಷಚೇತನರು ಅನಾಥ ಭಾವವನ್ನು ಅನುಭವಿಸುತ್ತಾರೆ. ಅವರಿಗೆ ಹೆಚ್ಚಿನ ಮುತುವರ್ಜಿ ವಹಿಸಬೇಕು. ಅವರ ವೈಫಲ್ಯವನ್ನು ಸಂವೇದನಶೀಲರನ್ನಾಗಿ ಅರಿಯಬೇಕು. ಕೆ.ಎಸ್. ಸುಚೇತ ಅವರ ಕೇಳದ ಕಿವಿಗಳು ಹೇಳಿದ ಕತೆಗಳು ಪುಸ್ತಕ ಮನುಷ್ಯನ ಅಹಂಕಾರಕ್ಕೆ ಚುಚ್ಚಲಿದೆ ಎಂದು ಹೇಳಿದರು.

ಸುಚೇತನವರ ಬರವಣಿಗೆಯಲ್ಲಿ ಕೇಳಿದ್ದೆಲ್ಲವೂ ನೆನಪು ಮಾತ್ರವಲ್ಲ. ನೋಡಿದ ಆಧಾರದ ಮೇಲೆ ಮಾತುಗಳನ್ನು ಕಲ್ಪಿಸಿಕೊಳ್ಳುತ್ತಾರೆ. ವಿಜ್ಞಾನ ಏನೇ ಹೇಳಿದರೂ ಅನುಭವದ ಮಾತು ತಟ್ಟಿದಂತೆ ಮನಸ್ಸಿಗೆ ತಟ್ಟುವುದಿಲ್ಲ. 1968ರಲ್ಲಿ ಕನ್ನಡದಲ್ಲಿ ರಾಜಕುಮಾರ್ ಅಭಿನಯದ ನಾಂದಿ ಎಂಬ ಸಿನಿಮಾ ಇಡೀ ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಶ್ರವಣದೋಷವುಳ್ಳವರ ಕಥೆ ಆಧರಿತ ಸಿನಿಮಾ. ಇದರ ಪ್ರೇರಣೆಯಿಂದ ಹಿಂದಿಯಲ್ಲಿ ಕೋಶಿಷ್ ಸಿನಿಮಾ ಬಂತು. ಇದನ್ನು ಪ್ರತಿಯೊಬ್ಬರು ನೋಡಬೇಕು ಎಂದರು.

ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಗಳ ನಿರ್ದೇಶಕಿ ಪ್ರೊ.ಎಂ.ಪುಷ್ಪಾವತಿ ಮಾತನಾಡಿ, ಕನ್ನಡ ಸಾಹಿತ್ಯದಲ್ಲಿ ವಿಶೇಷಚೇತನರಿಗೆ ಅನೇಕ ಕೃತಿಗಳು ಬಂದಿವೆ. ಅದರಲ್ಲಿ ಈ ಕೃತಿ ವಿಶೇಷವಾಗಿದೆ. ಶ್ರವಣದೋಷವುಳ್ಳವರ ಅನುಭವಗಳನ್ನು ಕೃತಿ ಹೇಳಲಿದೆ ಎಂದ ಅವರು, ಅಂಗವಿಕಲರು, ಕಿವುಡರು, ಕುರುಡರು ಎಂದು ವಿಶೇಷಚೇತನರನ್ನು ಕರೆಯಬೇಡಿ. ಈ ರೀತಿ ಕರೆಯುವುದರಿಂದ ಅವರ ಮನಸ್ಸಿಗೆ ನೋವಾಗಲಿದೆ ಎಂದರು.

ಕೃತಿಯೂ ಮನುಷ್ಯನ ಅಹಂಕಾರಕ್ಕೆ ಚುಚ್ಚಲಿದೆ

ಕಾರ್ಯಕ್ರಮದಲ್ಲಿ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಕನ್ನಡ ಸಹಾಯಕ ಅಧ್ಯಾಪಕ ಡಾ.ಪಿ.ಎ. ನಾಗರಾಜ, ಮಹಿಳಾ ಹೋರಾಟಗಾರರಾದ ಡಾ.ಇ.ರತಿರಾವ್, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್‌ನ ಪ್ರಕಾಶನದ ಬಿ.ಕೆ.ಸುರೇಶ್, ಲೇಖಕ ನಾ.ದಿವಾಕರ್, ಧನಂಜಯ ಎಲಿಯೂರು ಸೇರಿದಂತೆ ಇನ್ನಿತರರು ಹಾಜರಿದ್ದರು.


ಚನ್ನಪಟ್ಟಣ ಉಪಚುನಾವಣೆಯಲ್ಲಿ ಡಿ.ಕೆ.ಶಿವಕುಮಾರ್ ಸೇರಿ ಯಾರೇ ಸ್ಪರ್ಧಿಸಿದರೂ ಎದುರಿಸುತ್ತೇವೆ

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸವಾಲು

ಮೈಸೂರು, ಜೂ.23(ಬಿಎಲ್‌ಯು)– ಚನ್ನಪಟ್ಟಣದ ಉಪಚುನಾವಣೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ಯಾರನ್ನೇ ಅಭ್ಯರ್ಥಿಯಾಗಿ ಕಣಕ್ಕಿಳಿಸಿದರೂ ನಾವು ಎದುರಿಸುತ್ತೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ಸವಾಲು ಹಾಕಿದರು.

ಮೈಸೂರಿನ ಆಲನಹಳ್ಳಿಯ ಕುದೇರು ಮಠದ ಕಾರ್ಯಕ್ರಮದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಉಪಚುನಾವಣೆಯ ಅಭ್ಯರ್ಥಿ ಆಯ್ಕೆ ಸಂಬಂಧ ಜೆಡಿಎಸ್ ಹಾಗೂ ನಾವು ಒಟ್ಟಾಗಿ ಸೇರಿ ತೀರ್ಮಾನ ಮಾಡುತ್ತೇವೆ ಎಂದರು.

ಚನ್ನಪಟ್ಟಣ ಉಪಚುನಾವಣೆ ಸಂಬಂಧ ಸೀಟು ಬಿಟ್ಟು ಕೊಡುವ ಅಥವಾ ತೆಗೆದುಕೊಳ್ಳುವ ಬಗ್ಗೆ ಈ ತನಕ ಯಾವುದೇ ತೀರ್ಮಾನಗಳಾಗಿಲ್ಲ. ಆದರೆ ಈ ಬಗ್ಗೆ ಮಾತುಕತೆ ನಡೆಸಲು ನಾಳೆ ದೆಹಲಿಗೆ ತೆರಳುತ್ತಿದ್ದು, ಅಲ್ಲಿ ವರಿಷ್ಠರ ಜೊತೆ ಈ ಬಗ್ಗೆ ಚರ್ಚೆ ನಡೆಸುತ್ತೇನೆ ಎಂದರು.


ವಿಜಯೇಂದ್ರ

ತಾವೆ ಸ್ಪರ್ಧೆ ಮಾಡುತ್ತಿರುವುದಾಗಿ ಡಿ.ಕೆ.ಶಿವಕುಮಾರ್ ನೀಡಿರುವ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಜನರು ಮನಸ್ಸು ಮಾಡಿದರೆ ಎಂತಹ ಫಲಿತಾಂಶ ಬರುತ್ತದೆ ಎಂಬುದಕ್ಕೆ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಜನರ ಕೊಟ್ಟ ತೀರ್ಪು ಸ್ಪಷ್ಟ ನಿದರ್ಶನ. ಯಾರು ಎಷ್ಟೇ ಬಲಾಢ್ಯರಾದರೂ ಜನರ ತೀರ್ಮಾನವೇ ಅಂತಿಮ ಎಂದು ವಿಜಯೇಂದ್ರ ಹೇಳಿದರು.

ಬಳ್ಳಾರಿಯ ಗಣಿಗಾರಿಕೆಗೆ ರಾಜ್ಯ ಸರ್ಕಾರ ಅನುಮತಿ ನೀಡಲು ನಿರಾಕರಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ವಿಜಯೇಂದ್ರ, ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಪ್ರತಿ ನಿರ್ಧಾರದಲ್ಲೂ ಮೊಸರಲ್ಲಿ ಕಲ್ಲು ಹುಡುಕುವಂತೆ ವರ್ತಿಸುತ್ತಿದೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಒಂದೇ ಒಂದು ಕೈಗಾರಿಕೆ ಕರ್ನಾಟಕಕ್ಕೆ ಬರಲಿಲ್ಲ. ಅಭಿವೃದ್ಧಿ ದೃಷ್ಟಿಯಿಂದ ಕೇಂದ್ರ ಸರ್ಕಾರ ಕೈಗಾರಿಕೆ ಸ್ಥಾಪನೆ ಮಾಡಲು ಹೊರಟರೆ ಅದಕ್ಕೂ ತಕರಾರು ತೆಗೆಯುತ್ತಿದೆ. ಎಲ್ಲಾ ವಿಚಾರದಲ್ಲೂ ರಾಜಕಾರಣ ಮಾಡುತ್ತಾ ಹೊರಟರೆ ರಾಜ್ಯ ಹೇಗೆ ಅಭಿವೃದ್ಧಿಯಾಗುತ್ತದೆ? ಎಂದು ಪ್ರಶ್ನಿಸಿದರು.

ಸೂರಜ್ ರೇವಣ್ಣ ಬಂಧನ ಪ್ರಕರಣದ ಬಗ್ಗೆ ಕೇಳಿದ ಪ್ರಶ್ನೆಗೆ ಯಾವುದೇ ಪ್ರತಿಕ್ರಿಯೆ ನೀಡದ ಬಿ.ವೈ.ವಿಜಯೇಂದ್ರ, ಕೈ ಮುಗಿದು ಮುನ್ನಡೆದರು.

ವಿದ್ಯಾವರ್ಧಕ ಕಾಲೇಜಲ್ಲಿ ಯೋಗ ದಿನಾಚರಣೆ



ಮೈಸೂರು, ಜೂ. 23– ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣದಲ್ಲಿ ಅಂತರರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎನ್.ಸಿ.ಸಿ ಕ್ಯಾಪ್ಟನ್ ಡಾ. ಶ್ರೀಹರ್ಷ, ಯೋಗದ ಐತಿಹಾಸಿಕ ಮಹತ್ವ ಮತ್ತು ಆಧುನಿಕ ಕಾಲದಲ್ಲಿ ಅದರ ಚಿರಸ್ಥಾಯಿ ಮಹತ್ವವನ್ನು ಒತ್ತಿ ಹೇಳಿದರು. ಯೋಗವನ್ನು ತಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಆರೋಗ್ಯ ಮತ್ತು ಸ್ವಾಸ್ಥ್ಯದ ಮೇಲೆ ಅದರ ಸಕಾರಾತ್ಮಕ ಪರಿಣಾಮವನ್ನು ಉಲ್ಲೇಖಿಸಿದರು.

ಪ್ರಾಂಶುಪಾಲ ಡಾ.ಎಸ್.ಮರಿಗೌಡ, ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಕೆ.ಎನ್.ಹರಿಪ್ರಸಾದ್, ವಿದ್ಯಾರ್ಥಿಗಳು ಯೋಗ ತಂತ್ರಗಳನ್ನು ಪ್ರದರ್ಶಿಸಿದರು.

ಪರಮಾಣು ಇಂಧನದಿಂದ ವಿದ್ಯುತ್ ಉತ್ಪಾದನೆ ಅತ್ಯಂತ ಸುರಕ್ಷ

- ಬಿಎಆರ್‌ಸಿ ಪ್ರಭಾರ ಅಧಿಕಾರಿ ಚಂದ್ರಶೇಖರ್ ಅಭಿಮತ
- ಸಾಂಪ್ರದಾಯಿಕ ಇಂಧನ ಮೂಲಗಳಿಂದಲೇ ಬೇಡಿಕೆಯಂತೆ ವಿದ್ಯುತ್ ಉತ್ಪಾದನೆ ಅಸಾಧ್ಯ


'ಪರಮಾಣು ಶಕ್ತಿ–ಅನ್ವಯಗಳು–ವಿಕಿರಣ ಸುರಕ್ಷತೆ ಅಂಶಗಳು' ಕುರಿತ ವಿಶೇಷ ಉಪನ್ಯಾಸದಲ್ಲಿ ಬಾಬಾ ಪರಮಾಣು ಸಂಶೋಧನಾ ಕೇಂದ್ರದ ಪ್ರಭಾರ ಅಧಿಕಾರಿ ಡಾ.ಎ.ಚಂದ್ರಶೇಖರ್ ಹಾಗೂ ಇನ್ನಿತರಿದ್ದರು.

ಮೈಸೂರು,ಜೂ.23(ಎಸ್‌ಪಿಎನ್)–ಮುಂಬರುವ ದಿನಗಳಲ್ಲಿ ಪರಮಾಣು ಇಂಧನದ ಉಪಯೋಗ ಇಂಧನ, ಆರೋಗ್ಯ, ಕೃಷಿ, ರಕ್ಷಣೆ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಹೆಚ್ಚಾಗಲಿದೆ ಎಂದು ಬಾಬಾ ಪರಮಾಣು ಸಂಶೋಧನಾ ಕೇಂದ್ರದ (ಬಿಎಆರ್‌ಸಿ) ಪ್ರಭಾರ ಅಧಿಕಾರಿ ಡಾ.ಎ.ಚಂದ್ರಶೇಖರ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಮೈಸೂರು ಕೇಂದ್ರ ಹಾಗೂ ಇಂಡಿಯನ್ ಸೊಸೈಟಿ ಆಫ್ ಹೀಟಿಂಗ್ ರೆಫ್ರಿಜರೇಟಿಂಗ್ ಅಂಡ್ ಏರ್ ಕಂಡೀಷನರಿ ಎಂಜಿನಿಯರ್ಸ್ ಸಹಯೋಗದೊಂದಿಗೆ ಆಯೋಜಿಸಿದ್ದ 'ಪರಮಾಣು ಶಕ್ತಿ–ಅನ್ವಯಗಳು ಮತ್ತು ವಿಕಿರಣ ಸುರಕ್ಷತೆ ಅಂಶಗಳು' ಕುರಿತು ಮಾತನಾಡಿದರು. ಪರಮಾಣು ಶಕ್ತಿಯು ಕಲ್ಲಿದ್ದಲು ಹಾಗೂ ಇತರೆ ನೈಸರ್ಗಿಕ ಶಕ್ತಿಗಳಿಗಿಂತ ಕಡಿಮೆ ಅಪಾಯ ಹೊಂದಿವೆ. ಹಾಗಾಗಿ ಅದರ ಬಳಕೆ ದಿನೇದಿನೆ ಹೆಚ್ಚಾಗಬೇಕಾಗಿದೆ. ಭಾರತ 2047ರೊಳಗೆ ಪ್ರತಿ ಮನೆಗೆ 5 ಸಾವಿರ ಯೂನಿಟ್ ವಿದ್ಯುತ್ ಪೂರೈಕೆ ಮಾಡುವ ಗುರಿ ಹೊಂದಿದೆ. ಆದರೆ, ಈಗಿನಂತೆ ನೈಸರ್ಗಿಕ ಇಂಧನಗಳನ್ನು ಅವಲಂಬಿಸಿ ವಿದ್ಯುತ್ ಉತ್ಪಾದಿಸಿದರೆ, ಈ ಗುರಿ ಮುಟ್ಟಲು ಸಾಧ್ಯವಿಲ್ಲ ಎಂದರು.

ಪರಮಾಣು ಶಕ್ತಿ ಹಾಗೂ ವಿಕಿರಣಗಳನ್ನು ವಿದ್ಯುತ್ ಉತ್ಪಾದನೆ, ಕೈಗಾರಿಕೆ, ವೈದ್ಯಕೀಯ, ಆಹಾರ ಮತ್ತು ಕೃಷಿ ಕ್ಷೇತ್ರದಲ್ಲಿ ಬಳಸಲಾಗುತ್ತಿದೆ. ಈ ಕ್ಷೇತ್ರಗಳಿಗೆ ನೈಸರ್ಗಿಕ ಇಂಧನ ಮೂಲಗಳಿಂದ ವಿದ್ಯುತ್ ಪೂರೈಕೆ ಕಷ್ಟ ಸಾಧ್ಯ. ಹಾಗಾಗಿ ಅಣು ವಿಕಿರಣಗಳನ್ನು ಉಪಯೋಗಿಸಿ ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡಬೇಕಾಗಿದೆ ಎಂದು ಹೇಳಿದರು.

ಪರಮಾಣು ಶಕ್ತಿ ಬಳಕೆ ಅಸುರಕ್ಷಿತ ಎಂಬ ಅಭಿಪ್ರಾಯಗಳು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿವೆ. ಈ ಮಾತನ್ನು ನಿಜವೆಂದು ಒಪ್ಪಿಕೊಂಡರೂ ಅಪಾಯದ ಪ್ರಮಾಣ ಕಡಿಮೆ. ಪರಮಾಣು ಹಾಗೂ ಕಲ್ಲಿದ್ದಲು ಶಕ್ತಿಕೇಂದ್ರದ ಸ್ಫೋಟದ ಅಂಕಿ ಅಂಶ ಗಮನಿಸಿದಾಗ ನಮಗೆ ಸ್ಪಷ್ಟ ಚಿತ್ರಣ ದೊರೆಯುತ್ತವೆ. ಮೂರು ಕಡೆಗಳಲ್ಲಿ ಮಾತ್ರವೇ ಪರಮಾಣು ಸ್ಥಾವರ ಸ್ಫೋಟವಾಗಿದೆ. ಸಾವಿನ ಪ್ರಮಾಣ ಕಡಿಮೆ ಇದೆ. ಆದರೆ, ಕಲ್ಲಿದ್ದಲು ಗಣಿಗಳಲ್ಲಿ ದುರಂತ ಸಂಭವಿಸಿ ಅಪಾರ ಸಂಖ್ಯೆಯ ಜನ ಮೃತಪಟ್ಟ ಘಟನೆ ವರದಿಯಾಗಿದೆ ಎಂದರು.

ಪರಮಾಣು ಶಕ್ತಿ ಬಳಕೆಯಿಂದ ಉತ್ಪತ್ತಿಯಾಗುವ ವಿಕಿರಣಗಳ ತ್ಯಾಜ್ಯವನ್ನು ಮನುಷ್ಯರಿಗೆ ಯಾವುದೇ ಹಾನಿಯಾಗದಂತೆ ವಿಲೇವಾರಿ ಮಾಡುವ ವ್ಯವಸ್ಥೆಯಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಕ್ಯಾನ್ಸರ್ ರೋಗ ನಿವಾಹರಣೆಗೆ ಥೆರಪಿ ಚಿಕಿತ್ಸೆಯಲ್ಲಿ ಪರಮಾಣು ವಿಕಿರಣಗಳನ್ನು ಬಳಕೆ ಮಾಡಲಾಗುತ್ತದೆ. ಅಂತೆಯೇ ಕೃಷಿ, ಆರೋಗ್ಯ, ಕೈಗಾರಿಕೆ, ತಂತ್ರಜ್ಞಾನ ಕ್ಷೇತ್ರದಲ್ಲಿ ನಿರಂತರ ವಿದ್ಯುತ್ ಪೂರೈಕೆಗೆ ನೈಸರ್ಗಿಕ ಇಂಧನವನ್ನು ಬಳಸಿ ಪೂರೈಕೆ ಮಾಡುವುದು ಕಷ್ಟ ಸಾಧ್ಯ. ಬದಲಾಗಿ ಪರಮಾಣು ವಿಕಿರಣಗಳನ್ನು ಬಳಸಿ ವಿದ್ಯುತ್ ಪೂರೈಕೆ ಮಾಡಬಹುದು ಸುಲಭ ಎಂದು ಸ್ಪಷ್ಟನೆ ನೀಡಿದರು.

ವೇದಿಕೆಯಲ್ಲಿ ಎಂಜಿನಿಯರ್‌ಗಳ ಸಂಸ್ಥೆಯ ಅಧ್ಯಕ್ಷ ಡಾ.ಆರ್.ದೀಪು, ಕಾರ್ಯದರ್ಶಿ ಡಾ.ಮೋಹನ ಕೃಷ್ಣ, ಇಂಡಿಯನ್ ಸೊಸೈಟಿ ಆಫ್ ಹೀಟಿಂಗ್ ರೆಫ್ರಿಜರೇಟಿಂಗ್ ಅಂಡ್ ಏರ್ ಕಂಡೀಷನರಿ ಎಂಜಿನಿಯರ್ಸ್ ಸಂಸ್ಥೆ ಪದಾಧಿಕಾರಿಗಳಾದ ಅರುಣಿ ಶ್ರೀನಿವಾಸ, ಎನ್.ನಾಗಭೂಷಣ್, ಭಾಸ್ಕರ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

24.06.2024 ಸೋಮವಾರ, ಮಳೆ ನಕ್ಷತ್ರ: ಆರಿದ್ರಾ 22.06.2024ರಿಂದ 05.07.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಉಷಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಮೈಸೂರು ಆರ್ಟ್ ಗ್ಯಾಲರಿ, ಕನ್ನಡ ಸಾಹಿತ್ಯ ಕಲಾಕೂಟ:** ಕಲಾವಿದ ಎಲ್.ಶಿವಲಿಂಗಪ್ಪ ಅವರು ರಚಿಸಿರುವ ಕದಳಿ ವನದಲ್ಲಿ ಅಕ್ಕ ಮಹಾದೇವಿ ಕಲಾಕೃತಿ ಲೋಕಾರ್ಪಣೆ ಮತ್ತು ಅಕ್ಕ ಮಹಾದೇವಿ ಜಯಂತಿ, ಕೃತಿಗಳ ಲೋಕಾರ್ಪಣೆ: ಖ್ಯಾತ ಬಸವ ತತ್ವ ಪ್ರವಚನಕಾರರಾದ ಡಾ.ಮಾತೆ ಬಸವಾಂಜಲಿ ದೇವಿ, ಕಲಾಕೃತಿ ಕುರಿತು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ (ಮಾನಸಗಂಗೋತ್ರಿ)ಯ ನಿರ್ದೇಶಕರಾದ ಡಾ.ಎನ್.ಕೆ.ಲೋಲಾಕ್ಷಿ, ಅಧ್ಯಕ್ಷತೆ: ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ರಾಮಾನುಜ ರಸ್ತೆ, ಬೆಳಗ್ಗೆ 11 ಗಂಟೆಗೆ.
- **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಪಾಲಿಟೆಕ್ನಿಕ್, ಮೈಸೂರು :** ಡಿಪ್ಲೊಮಾ ಇನ್ ಇಂಜಿನಿಯರಿಂಗ್ ಪ್ರಥಮ ವರ್ಷದ ಪ್ರವೇಶ ಕಾರ್ಯಕ್ರಮ, ಸ್ಥಳ: ಸಾಹುಕಾರ್ ಚೆನ್ನಯ್ಯ ಆಡಿಟೋರಿಯಂ, ವಿವಿಸಿಇ ಕ್ಯಾಂಪಸ್, ಬೆಳಗ್ಗೆ 10.30ಕ್ಕೆ.
- **ಓಟಿಕೇರ್ ಸ್ಪೀಚ್–ಲಾಂಗ್ವೇಜ್ ಅಂಡ್ ಹಿಯರಿಂಗ್ ಕ್ಲಿನಿಕ್:** ಉಚಿತ ವಾಕ್ ಮತ್ತು ಶ್ರವಣ ತಪಾಸಣಾ ಕ್ಯಾಂಪ್, ಸ್ಥಳ: ಓಟಿಕೇರ್ ಆಸ್ಪತ್ರೆ, ರಾಮಾನುಜ ರಸ್ತೆ, ಬೆಳಗ್ಗೆ 11ರಿಂದ ಮಧ್ಯಾಹ್ನ 3 ಗಂಟೆವರೆಗೆ.
- **ಕರ್ನಾಟಕ ಭೀಮ್ ಸೇನೆ :** ಸಂಘಟನೆಯ 2ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಮಾಜಿ ಸಂಸದರಾದ ವಿ.ಶ್ರೀನಿವಾಸಪ್ರಸಾದ್, ಆರ್.ಧ್ರುವನಾರಾಯಣ್ ಮತ್ತು ಕೆ.ಶಿವರಾಮ್ ಅವರಿಗೆ ನುಡಿನಮನ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಗಾಂಧಿನಗರದ ಉರಿಲಿಂಗಿ ಪೆದ್ದಿಮಠದ ಪೀಠಾಧಿಪತಿ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ವಿವೇಕಾನಂದ, ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಅನಿಲ್ ಚಿಕ್ಕಮಾದು, ಶ್ರೀವತ್ಸ, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಎಸ್.ಎ.ರಾಮದಾಸ್, ಸಾ.ರಾ.ಮಹೇಶ್, ಸ್ಥಳ: ಟೌನ್‌ಹಾಲ್, ಬೆಳಗ್ಗೆ 10 ಗಂಟೆಗೆ.
- **ಧನ್ಯ ಸ್ಕೂಲ್ ಆಫ್ ಯೋಗ ಮತ್ತು ಮುದ್ರಾ ಪ್ರಾಣಾಯಾಮ ರಿಸರ್ಚ್ ಸೆಂಟರ್:** ಮುದ್ರಾ ಪ್ರಾಣಾಯಾಮ ಶಿಬಿರ, ಸ್ಥಳ: ಮಹಿಳಾ ಸಮಾಜ, ಜೆಎಲ್‌ಬಿ ರಸ್ತೆ, ಬೆಳಗ್ಗೆ 6.30ರಿಂದ 7.30, ಸಂಜೆ 6.30ರಿಂದ 7.30ರವರೆಗೆ.
- **ಮೈಸೂರು ಜಿಲ್ಲಾ ಆಸ್ಪತ್ರೆ :** ಉಪಾಹಾರ ಕ್ಯಾಂಟೀನ್ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಟಿ.ಅಮರ್‌ನಾಥ್, ಸ್ಥಳ: ಆಸ್ಪತ್ರೆ ಆವರಣ, ಮೇಟಗಳ್ಳಿ, ಬೆಳಗ್ಗೆ 10 ಗಂಟೆಗೆ.
- **ಕ್ರೆಡಾಯ್ ಮೈಸೂರು:** ರಾಜ್ಯ ಮಟ್ಟದ ಕ್ರೆಡಾಯ್ ಸಮಾವೇಶ–2024, ಉದ್ಘಾಟನೆ: ಸಮಾಜ ಕಲ್ಯಾಣ ಡಾ.ಹೆಚ್.ಸಿ.ಮಹದೇವಪ್ಪ, ಮುಖ್ಯ ಅತಿಥಿಗಳು: ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್, ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ಸಿ.ಎನ್.ಮಂಜೇಗೌಡ, ಮುಡಾ ಅಧ್ಯಕ್ಷ ಕೆ.ಮರೀಗೌಡ, ಸ್ಥಳ: ಸೈಲೆಂಟ್ ಶೋರ್ಸ್ ರೆಸಾರ್ಟ್, ಹೂಟಗಳ್ಳಿ, ಬೆಳಗ್ಗೆ 10.30ಕ್ಕೆ.
- **ಪಿ.ಕೃಷ್ಣಯ್ಯ ಚೆಟ್ಟಿ ಗ್ರೂಪ್ಸ್ ಆಫ್ ಜ್ಯುವೆಲ್ಲರ್ಸ್:** ಜ್ಯುವೆಲ್ಲರಿ ಪ್ರದರ್ಶನ ಮತ್ತು ಮಾರಾಟ, ಸ್ಥಳ: ರೀಜೆಂಟ್ ಹಾಲ್, ಗ್ರ್ಯಾಂಡ್ ಮರ್ಕ್ಯೂರ್, ಬೆಳಗ್ಗೆ 10ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ–ಶ.ಮಂ.ಕೃಷ್ಣರಾಯ, 6.15–ಗೀತಾರಾಧನ, 6.35./6.10 ಅಂಚೆ–ಅಂಕನ''– ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್.ವಿಜಯಲಕ್ಷ್ಮಿ ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40 "ನಾನು ನ.ರತ್ನ" ಬಾನುಲಿ ಸರಣಿ. ಖ್ಯಾತ ನಾಟಕಕಾರ ಹಾಗೂ ವಾಕ್ ಶ್ರವಣ ತಜ್ಞ ಡಾ.ನ.ರತ್ನ ಅವರ ಜೀವನಗಾಥೆ ಅವರದೇ ಧ್ವನಿಯಲ್ಲಿ, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ): ಹಿರಿಯ ಸಾಹಿತಿ ತ.ಸು.ಶ್ಯಾಮರಾಯರೊಂದಿಗೆ ಡಾ.ಹೆಚ್.ತಿಪ್ಪೇರುದ್ರಸ್ವಾಮಿ ಅವರು ನಡೆಸಿದ್ದ ಸಂವಾದ. 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಬಿ.ವಿ.ದುರ್ಗಾಭವಾನಿ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್ ಬಿ, 12.30–ದೇವರನಾಮ–ಪುರಂದರದಾಸರ ರಚನೆಗಳು, 12.45–ನಮ್ಮ ಆರೋಗ್ಯ, ಅನ್ಯುರಿಸಂ (Aneurysm) ಕುರಿತು ನರ ಹಾಗೂ ರಕ್ತನಾಳ ತಜ್ಞರಾದ ಡಾ.ರೂಪಾ ಶೇಷಾದ್ರಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.20 ಭಾವಗೀತೆಗಳು–ನಿಖಿಲಾ ಬಿ.ವಿ, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಕೆ.ಸತ್ಯನಾರಾಯಣ–ಕೀಬೋರ್ಡ್ ವಾದನ, 4.00–ಮಹಿಳಾರಂಗ–"ನಾನು ನನ್ನ ಕಂಪನಿ', ವಿಷಯ: ಮಣ್ಣಿನ ಆಭರಣಗಳನ್ನು ತಯಾರಿಸುವ ಉದ್ಯಮಿಗಳಾದ ನೀಲಿ ಲೋಹಿತ್, ಜ್ಯೋತಿ ಮತ್ತು ಶುಭ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನಾ. ಆರ್, 4.45–ಹಿಂದಿ ಪಾಠ– ಅನುರಾಧಾ ಮೂರ್ತಿ, 5.30–"Pashudhan Se Behthar Jeevan"–ಪ್ರಾಯೋಜಕರು: ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಸಚಿವಾಲಯ, 5.45–ನಾನು ನ.ರತ್ನ ಬಾನುಲಿ ಸರಣಿ. ಖ್ಯಾತ ನಾಟಕಕಾರ ಹಾಗೂ ವಾಕ್ ಶ್ರವಣ ತಜ್ಞ ಡಾ.ನ.ರತ್ನ ಅವರ ಜೀವನಗಾಥೆ ಅವರದೇ ಧ್ವನಿಯಲ್ಲಿ. 6.50–ಕೃಷಿರಂಗ: ಮುಂಗಾರಿಗೆ ಕೃಷಿ ಇಲಾಖೆ ಯೋಜನೆಗಳನ್ನು ಕುರಿತ ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುತ್ತಾರೆ: ಮೈಸೂರು ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 ಟಿ–20 ವಿಶ್ವ ಕಪ್ ಅಂಗವಾಗಿ ಭಾರತ ಹಾಗೂ ಆಸ್ಟ್ರೇಲಿಯಾ ತಂಡಗಳ ನಡುವೆ ಡೇರನ್ ಸ್ಯಾಮಿ, ಗ್ರಾಸ್ ಇಸ್ಲೆಟ್, ಸೇಂಟ್ ಲುಸಿಯಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯುವ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 24 ಸೋಮವಾರ 2024

ಸಂಪುಟ: 45 | ಸಂಚಿಕೆ: 69 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಸೂರಜ್ ಪ್ರಕರಣ ತನಿಖೆ ಸಿಐಡಿಗೆ ವರ್ಗಾವಣೆ

ಗೃಹ ಸಚಿವ ಡಾ. ಜಿ.ಪರಮೇಶ್ವರ್

ಬೆಂಗಳೂರು, ಜೂ.23– ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಪ್ರಕರಣ ತನಿಖೆಯನ್ನು ಸಿಐಡಿಗೆ ವಹಿಸಲಾಗುವುದು ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದ್ದಾರೆ. ಬೆಂಗಳೂರಿನಲ್ಲಿಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು, ಗಂಭೀರವಾದ ಆರೋಪ ಪ್ರಕರಣವಾಗಿರುವುದರಿಂದ ಕೂಲಂಕಷವಾಗಿ ತನಿಖೆ ಮಾಡುತ್ತೇವೆ. ಸೂರಜ್ ರೇವಣ್ಣ ದಾಖಲಿಸಿರುವ ದೂರಿನ ಬಗ್ಗೆ ಸಹ ಪೊಲೀಸರು ತನಿಖೆ ಮಾಡುತ್ತಾರೆ ಎಂದರು. ಇದರ ಬೆನ್ನಲ್ಲೇ ಸೂರಜ್ ರೇವಣ್ಣ ವಿರುದ್ಧ ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾವಣೆ ಮಾಡಿ ಕಾನೂನು ಸುವ್ಯವಸ್ಥೆಯ ಎಡಿಜಿಪಿ ಹಿತೇಂದ್ರ ಅವರು ಆದೇಶ ಹೊರಡಿಸಿದ್ದಾರೆ.



ಈ ಸಂಬಂಧ ಅವರು ಹಾಸನ ಎಸ್‌ಪಿ, ಸಿಐಡಿ ಡಿಜಿಪಿಗೆ ಪತ್ರ ಬರೆದಿದ್ದಾರೆ. ಖುದ್ದು ಸಿಐಡಿ ಕಚೇರಿಗೆ ತೆರಳಿ ಕೇಸ್ ಫೈಲ್ ನೀಡುವಂತೆ ಸೂಚನೆ ನೀಡಿದ್ದಾರೆ. ಅಲ್ಲದೇ ತನಿಖೆಗೆ ತಯಾರಿ ಮಾಡಿಕೊಳ್ಳಲು ಸಿಐಡಿ ಅಧಿಕಾರಿಗಳಿಗೆ ಸಹ ಸೂಚಿಸಿದ್ದಾರೆ.

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಪುತ್ರ, ವಿಧಾನಪರಿಷತ್ ಸದಸ್ಯ

ಸೂರಜ್ ರೇವಣ್ಣ ಜೈಲಿಗೆ

ಜೆಡಿಎಸ್ ಕಾರ್ಯಕರ್ತನ ಮೇಲೆ ಅಸಹಜ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ

ಹಾಸನ, ಜೂ.23– ಹಾಸನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಜೈಲು ಸೇರಿರುವ ಬೆನ್ನಲ್ಲೇ ಅವರ ಸಹೋದರ ವಿಧಾನಪರಿಷತ್ ಸದಸ್ಯ ಸೂರಜ್ ರೇವಣ್ಣ ಜೆಡಿಎಸ್ ಕಾರ್ಯಕರ್ತನ ಮೇಲೆ ಅಸಹಜ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇರೆಗೆ ಇಂದು ಜೈಲು ಸೇರಿದ್ದಾರೆ.

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಪುತ್ರನಾಗಿರುವ ಸೂರಜ್ ರೇವಣ್ಣ ಜೂನ್ 16ರಂದು ಚನ್ನರಾಯಪಟ್ಟಣ ತಾಲೂಕು ಗನ್ನಿಗಡದಲ್ಲಿರುವ ಅವರ ತೋಟದ ಮನೆಯಲ್ಲಿ ತನ್ನ ಮೇಲೆ ಅಸಹಜ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು ಅರಕಲಗೂಡು ಜೆಡಿಎಸ್ ಕಾರ್ಯಕರ್ತ ಕೆಲ ದಿನಗಳ ಹಿಂದೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರು, ಗೃಹ ಸಚಿವರು ಹಾಗೂ ಹಾಸನ ಎಸ್ಪಿಯವರಿಗೆ ಇ–ಮೇಲ್ ಮಾಡಿ ದೂರು ಸಲ್ಲಿಸಿದ್ದರು.

ಈ ವಿಷಯ ತಿಳಿಯುತ್ತಿದ್ದಂತೆಯೇ ಸೂರಜ್ ರೇವಣ್ಣ ಬ್ರಿಗೇಡ್ ಖಜಾಂಚಿ ಶಿವಕುಮಾರ್ ಅವರು ಸಂತ್ರಸ್ತ ಯುವಕ ಸೂರಜ್ ರೇವಣ್ಣ ಅವರಿಗೆ 5 ಕೋಟಿ ರೂ. ಕೊಡಿಸುವಂತೆಯೂ, ಇಲ್ಲದಿದ್ದರೆ ಪೊಲೀಸರಿಗೆ ದೂರು ● 7ನೇ ಪುಟಕ್ಕೆ



ವಿಧಾನಪರಿಷತ್ ಸದಸ್ಯ ಸೂರಜ್ ರೇವಣ್ಣರನ್ನು ಬಂಧಿಸಿ ಕರೆದೊಯ್ಯುತ್ತಿರುವ ಪೊಲೀಸರು.

ನಮ್ಮ ಕುಟುಂಬದ ವಿರುದ್ಧ ರಾಜಕೀಯ ಷಡ್ಯಂತ್ರ

ಬೆಂಗಳೂರು, ಜೂ.23– ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಬಂಧಿತನಾಗಿರುವ ವಿಧಾನಪರಿಷತ್ ಸದಸ್ಯ ಸೂರಜ್ ರೇವಣ್ಣ ಪರ ತಂದೆ ಹಾಗೂ ಮಾಜಿ ಸಚಿವ ಹೆಚ್.ಡಿ ರೇವಣ್ಣ ಬ್ಯಾಟ್ ಬೀಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿ ವಾಹಿನಿ ಜೊತೆಗೆ ಮಾತನಾಡಿದ ಅವರು, ನಮ್ಮ ಕುಟುಂಬದ ವಿರುದ್ಧ ರಾಜಕೀಯ ಷಡ್ಯಂತ್ರ ಮಾಡುತ್ತಿದ್ದಾರೆ. ಸೂರಜ್‌ಗೆ ಹಾಸನದಲ್ಲಿ ಮೆಡಿಕಲ್ ಟೆಸ್ಟ್ ಮಾಡಿಸದೇ ಬೆಂಗಳೂರಿಗೆ ಯಾಕೆ ಕರೆತಂದರು ಎಂದು ಪ್ರಶ್ನಿಸಿದ್ದಲ್ಲದೆ, ಇದೆಲ್ಲಾ ನಮ್ಮನ್ನು ಹೆದರಿಸಲು ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ.



ಮೊದಲು ದೂರು ಕೊಟ್ಟಿರುವುದು ಸೂರಜ್ ರೇವಣ್ಣ. ಸೂರಜ್ ತಪ್ಪು ಮಾಡಿದ್ದರೆ ಯಾಕೆ ದೂರು ಕೊಡೋಕೆ ಹೋಗುತ್ತಿದ್ದರು ಎಂದ ಅವರು, ಈಗ ಏನೂ ಹೇಳಲ್ಲ. ಟೈಂ ಬಂದಾಗ ಹೇಳುತ್ತೇನೆ. ನಾವು ತಪ್ಪು ಮಾಡಿದ್ದರೆ ಓಡಿ ಹೋಗುತ್ತಿದ್ದೆವು. ನಮ್ಮ ಕುಟುಂಬವನ್ನು ಯಾರು ಟಾರ್ಗೆಟ್ ಮಾಡುತ್ತಿದ್ದಾರೆ, ಅವೆಲ್ಲವನ್ನು ದೇವರಿಗೆ ಬಿಡುತ್ತೇನೆ ಎಂದು ರೇವಣ್ಣ ಹೇಳಿದರು.

ಇಳಿವಯಸ್ಸಲ್ಲೂ ದೇವೇಗೌಡರಿಗೆ ಕೊಡಬಾರದ ನೋವು ಕೊಡುತ್ತಿದ್ದಾರೆ



ಚನ್ನಪಟ್ಟಣ, ಜೂ.23– ಇಳಿವಯಸ್ಸಲ್ಲೂ ದೇವೇಗೌಡರಿಗೆ ಕೊಡಬಾರದ ನೋವು ಕೊಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿ ಅಳಲು ತೋಡಿಕೊಂಡರು. ಚನ್ನಪಟ್ಟಣದಲ್ಲಿ ಸೂರಜ್ ರೇವಣ್ಣ ಬಂಧನ ವಿಚಾರವನ್ನು ಪ್ರಸ್ತಾಪಿಸದೇ ಪರೋಕ್ಷವಾಗಿ ಮಾತನಾಡಿದ ಅವರು, ನಮ್ಮನ್ನು ಮುಗಿಸಲು ಏನೇನೋ ಕೆಲಸ ಮಾಡುತ್ತಾರೆ. ಇಳಿವಯಸ್ಸಿನಲ್ಲಿಯೂ ದೇವೇಗೌಡರಿಗೆ ಕೊಡಬಾರದ ನೋವು ಕೊಡುತ್ತಿದ್ದಾರೆ. ಮಕ್ಕಳು ತಪ್ಪು ಮಾಡಿದರೆ ದೊಡ್ಡವರು ಏನು ಮಾಡುತ್ತಾರೆ? ನಿಮ್ಮ ಮನೆಯಲ್ಲಿ ಮಕ್ಕಳಿಲ್ಲವೇ? ಇದರಲ್ಲಿ ದೇವೇಗೌಡರಿಗೆ ಯಾಕೆ ಪ್ರಶ್ನೆ ಮಾಡುತ್ತೀರಿ. ಅವನ್ಯಾರೋ ಮಾಧ್ಯಮದವನು ದೇವೇಗೌಡರಿಗೆ ಏಕವಚನದಲ್ಲಿ ಮಾತನಾಡುತ್ತಾನೆ ಎಂದು ಅವರು ಹರಿಹಾಯ್ದರು. ಇದ್ಯಾವುದಕ್ಕೂ ನಾವು ಕುಗ್ಗಲ್ಲ. ನಮ್ಮ ಅಧಿಕಾರಿಗಳು ಗುಲಾಮರಾಗಿ ಕೆಲಸ ಮಾಡಲು ಇತಿಮಿತಿ ಇದೆ. ಇವತ್ತಲ್ಲ ನಾಳೆ ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದೇ ಬರುತ್ತದೆ. ಅಧಿಕಾರಿಗಳು ಈ ಗುಲಾಮತನ ಬಿಟ್ಟು, ಎಚ್ಚರಿಕೆಯಿಂದ ಕೆಲಸ ಮಾಡಿ ಎಂದು ಎಚ್ಚರಿಕೆಯ ಸಂದೇಶ ರವಾನಿಸಿದರು.

ಮೈಸೂರಲ್ಲಿ ಯುದ್ಧ ಸ್ಮಾರಕ ಸೆಪ್ಟೆಂಬರ್ ವೇಳೆಗೆ ಪೂರ್ಣ

- ಶಿಲ್ಪಿ ಅರುಣ್ ಯೋಗಿರಾಜ್ ನೇತೃತ್ವದಲ್ಲಿ ಭರದಿಂದ ನಡೆಯುತ್ತಿರುವ ಕೆತ್ತನೆ
- ಲೋಹದ ಸಿಂಹ ಲಾಂಛನ ತಯಾರಿಯೂ ಪ್ರಗತಿಯಲ್ಲಿದೆ
- ಯುದ್ಧ ಟ್ಯಾಂಕರ್, ಗನ್‌ಗಾಗಿ ಸ್ಟೇಟ್‌ಮೆಂಟ್ ಆಫ್ ಕೇಸ್ ಸಲ್ಲಿಕೆ



ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಪಕ್ಕದ ಎನ್‌ಸಿಸಿ ಕವಾಯತು ಮೈದಾನದಲ್ಲಿ ಯುದ್ಧಸ್ಮಾರಕ ನಿರ್ಮಾಣಕ್ಕಾಗಿ ಕಲ್ಲು ಕೆತ್ತನೆ ಕಾರ್ಯವನ್ನು ಹಿರಿಯ ಅಧಿಕಾರಿ ಸಿ.ಎಲ್.ಆನಂದ್ ಪರಿಶೀಲಿಸುತ್ತಿರುವುದು.

"ಯುದ್ಧ ಸ್ಮಾರಕದ ಕಲ್ಲು ಕೆತ್ತನೆಯ ಟೆಂಡರ್ ಗುರಯ್ಯ ನಿಂಬಲ್‌ಗುಂಡಿ ಎನ್ನುವವರಿಗೆ ಆಗಿತ್ತು. ಈ ಕೆತ್ತನೆಯನ್ನು ಅರುಣ್ ಯೋಗಿರಾಜ್ ನೇತೃತ್ವದಲ್ಲಿ ನಡೆಸಲಾಗುತ್ತಿದೆ. ಸ್ಮಾರಕದ ಮೇಲೆ 7 ಅಡಿ ಎತ್ತರದ ಲೋಹದಲ್ಲಿ ಸಿಂಹ ಲಾಂಛನ ತಯಾರಿಸುವ ಕಾರ್ಯವನ್ನು ಅರುಣ್ ಯೋಗಿರಾಜ್ ಮಾಡುತ್ತಿದ್ದಾರೆ. ಇದಕ್ಕೆ 10 ಲಕ್ಷ ರೂ. ವೆಚ್ಚವಾಗಲಿದ್ದು, ದಾನಿಯೊಬ್ಬರು ಸಹಕಾರ ನೀಡಿದ್ದಾರೆ. ಸ್ಮಾರಕ ನಿರ್ಮಾಣದ ಬಳಿಕ ಸುತ್ತಲೂ ಉದ್ಯಾನ ಅಭಿವೃದ್ಧಿ ಮಾಡುವುದಕ್ಕೆ ಮೈಸೂರು ಮಹಾನಗರ ಪಾಲಿಕೆ ಹಾಗೂ ಮುಡಾದಿಂದ ತಲಾ ಒಂದೂವರೆ ಕೋಟಿ ರೂ. ನೀಡಲು ಮುಂದಾಗಿದೆ.

- ಸಿ.ಎಲ್.ಆನಂದ್ (ಮಾಜಿ ಸೈನಿಕರು), ಮಂಗಳೂರು ಮಹಾನಗರ ಪಾಲಿಕೆ ಆಯುಕ್ತ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಜೂ.23– ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಪಕ್ಕದ ಎನ್‌ಸಿಸಿ ಕವಾಯತ್ ಮೈದಾನದಲ್ಲಿ ನಿರ್ಮಿಸಲು ಉದ್ದೇಶಿಸಿದ್ದ 'ಯುದ್ಧ ಸ್ಮಾರಕ' ಕಲ್ಲು ಕೆತ್ತನೆಯ ಕಾರ್ಯ ಭರದಿಂದ ಸಾಗುತ್ತಿದ್ದು, ಸೆಪ್ಟೆಂಬರ್ ವೇಳೆಗೆ ಯುದ್ಧ ಸ್ಮಾರಕ ಕಾಮಗಾರಿ ಪೂರ್ಣಗೊಳ್ಳಲಿದೆ.

ಭಾರತೀಯ ಸೇನೆಯ ಬಗ್ಗೆ ಯುವಜನರಲ್ಲಿ ಅರಿವು ಮೂಡಿಸುವುದರೊಂದಿಗೆ ಸೈನಿಕರಿಗೆ ಗೌರವ ಸಮರ್ಪಿಸುವ ನಿಟ್ಟಿನಲ್ಲಿ ಮೈಸೂರಲ್ಲಿ ಯುದ್ಧ ಸ್ಮಾರಕ ಮಾಡುವುದಕ್ಕೆ ನಿವೃತ್ತ ಸೈನಿಕರ ಸಂಘದ ಆಶಯದಂತೆ ಯುದ್ಧ ಸ್ಮಾರಕ ನಿರ್ಮಾಣದ ಅಂತಿಮ ಹಂತದ ಕಾಮಗಾರಿ ಬಿರುಸಾಗಿ ನಡೆಯುತ್ತಿರುವುದರಿಂದ ಶೀಘ್ರದಲ್ಲಿಯೇ ಯುದ್ಧ ಸ್ಮಾರಕ ಲೋಕಾರ್ಪಣೆಗೊಂಡು ಮೈಸೂರು ಭಾಗದ ಯುವಜನರಲ್ಲಿ ದೇಶಭಕ್ತಿ ಹೆಚ್ಚಿಸಿ, ಸೇನೆ ಸೇರುವುದಕ್ಕೆ ಪ್ರೇರಣೆ ನೀಡಲಿದೆ.

ಯುದ್ಧ ಸ್ಮಾರಕ ನಿರ್ಮಾಣಕ್ಕೆ ಕಳೆದ ವರ್ಷ ಶಂಕುಸ್ಥಾಪನೆ ನೆರವೇರಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಬೇಸ್‌ಮೆಂಟ್ ನಿರ್ಮಾಣ ಕಾರ್ಯವೂ ಪೂರ್ಣಗೊಂಡು ಆರು ತಿಂಗಳು ಕಳೆದಿತ್ತು. ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಸ್ಮಾರಕ ನಿರ್ಮಾಣದ ಕಲ್ಲು ಕೆತ್ತನೆಯ ಕಾರ್ಯಕ್ಕೆ ಟೆಂಡರ್ ನೀಡಿರಲಿಲ್ಲ. ಇದೀಗ ಕಲ್ಲು ಕೆತ್ತನೆಗೆ ಟೆಂಡರ್ ಗುರಯ್ಯ ನಿಂಬಲ್‌ಗುಂಡಿ ಎನ್ನುವವರಿಗೆ ಗುತ್ತಿಗೆ ಆಗಿದ್ದು, ಕೆತ್ತನೆ ಕಾರ್ಯವನ್ನು ಹೆಸರಾಂತ ಶಿಲ್ಪಿ ಅರುಣ್ ಯೋಗಿರಾಜ್ ನೇತೃತ್ವದಲ್ಲಿ ಆರಂಭಿಸಲಾಗಿದೆ. ಸ್ಮಾರಕಕ್ಕೆ ಬಳಸುವ ದೊಡ್ಡ ಕಲ್ಲುಗಳಿಗೆ ರೂಪ ನೀಡಲು ಕೆತ್ತನೆ ಕಾರ್ಯ ಇನ್ನು ಎರಡು ತಿಂಗಳು ನಡೆಯುವುದರಿಂದ ಸೆಪ್ಟೆಂಬರ್ ವೇಳೆಗೆ ಕೆತ್ತನಾ ಕಾರ್ಯ ಪೂರ್ಣಗೊಳ್ಳಲಿದೆ. ● 7ನೇ ಪುಟಕ್ಕೆ

ನೀಟ್ ಅಕ್ರಮ ಪ್ರಕರಣ ಸಿಬಿಐ ತನಿಖೆಗೆ: ಎಫ್‌ಐಆರ್ ದಾಖಲು

ನವದೆಹಲಿ, ಜೂ.23– ನೀಟ್ ಅಕ್ರಮಕ್ಕೆ ಸಂಬಂಧಿಸಿದ ಪ್ರಕರಣವನ್ನು ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ವಹಿಸಲಾಗಿದ್ದು, ಈ ಸಂಬಂಧ ಅಧಿಕಾರಿಗಳು ಎಫ್‌ಐಆರ್ ದಾಖಲಿಸಿದ್ದಾರೆ.

ಮೇ5 ರಂದು ನೀಟ್ ಪರೀಕ್ಷೆಗಳು ನಡೆದಿತ್ತು. ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಆರೋಪ ಕೇಳಿಬಂದಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ತನಿಖೆಗೆ ಆದೇಶಿಸಿತ್ತು. ಅಕ್ರಮದ ಕುರಿತು ತನಿಖೆ ನಡೆಸಲು ಹಲವಾರು ನಗರಗಳಲ್ಲಿ ಪ್ರತಿಭಟನೆ ನಡೆಸುತ್ತಿರುವ ವಿದ್ಯಾರ್ಥಿಗಳ ಬೇಡಿಕೆಗಳನ್ನು ಸಚಿವಾಲಯ ಪರಿಗಣಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೇ 5 ರಂದು ನಡೆಸಲಾದ ನೀಟ್ ಪರೀಕ್ಷೆಯಲ್ಲಿ ಕೆಲವು ಅಕ್ರಮಗಳು, ವಂಚನೆ, ಸೋಗು ● 7ನೇ ಪುಟಕ್ಕೆ

ದೇವದಾರಿ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆಗೆ ಒಪ್ಪಿಗೆ

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ನಿರ್ಧಾರಕ್ಕೆ ರಾಜ್ಯ ಸರ್ಕಾರ ಆಕ್ಷೇಪ



ಬೆಂಗಳೂರು, ಜೂ.23– ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ದೇವದಾರಿ ಕಬ್ಬಿಣದ ಅದಿರು ಗಣಿ ಕಾರ್ಯಾಚರಣೆಗೆ ಸಂಬಂಧಿಸಿದ ಕುದುರೆಮುಖ ಕಬ್ಬಿಣದ ಅದಿರು ಕಂಪನಿಯ ಕಡತಕ್ಕೆ ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಒಪ್ಪಿಗೆ ನೀಡಿ, ಕಡತಕ್ಕೆ ಸಹಿ ಹಾಕಿರುವುದಕ್ಕೆ ರಾಜ್ಯ ಸರ್ಕಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ದೇವದಾರಿ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆಗೆ ಸರ್ಕಾರ ಅನುಮತಿ ನಿರಾಕರಣೆ ಮಾಡಿದ್ದು, ಉದ್ದೇಶಿತ ಗಣಿ ಪ್ರದೇಶ ಸ್ವಾಮಿಮಲೈ ಮೀಸಲು ಅರಣ್ಯ ವ್ಯಾಪ್ತಿಯಲ್ಲಿದೆ. ಇಲ್ಲಿ ಗಣಿಗಾರಿಕೆಯಿಂದ 99,330 ಮರಗಳು ಕಡಿದು ನಾಶವಾಗಲಿದೆ ಎಂದು ಅರಣ್ಯ ಸಚಿವ ● 7ನೇ ಪುಟಕ್ಕೆ

ನನ್ನ ಮೇಲಿನ ಸಿಟ್ಟಿನಿಂದ ಗಣಿಗಾರಿಕೆಗೆ ಆಕ್ಷೇಪ: ಹೆಚ್.ಡಿ. ಕುಮಾರಸ್ವಾಮಿ

ರಾಮನಗರ, ಜೂ.23– ದೇವದಾರಿ ಬೆಟ್ಟದಲ್ಲಿ ಗಣಿಗಾರಿಕೆಗೆ ಅನುಮತಿ ನಿರಾಕರಣೆ ವಿಚಾರ ಸದ್ಯ ರಾಜ ರಾಜಕೀಯದಲ್ಲಿ ಸಾಕಷ್ಟು ಚರ್ಚೆ ಆಗುತ್ತಿದೆ. ಇನ್ನು ದೇವದಾರಿ ಬೆಟ್ಟದಲ್ಲಿ ಅದಿರು ಗಣಿಗಾರಿಕೆಗೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಒಪ್ಪಿಗೆ ಕೂಡ ನೀಡಿದ್ದಾರೆ. ಅವರ ವಿರುದ್ಧ ಪರಿಸರವಾದಿಗಳು ಕಿಡಿಕಾರಿದ್ದರು. ಈ ವಿಚಾರವಾಗಿ ಮಾತನಾಡಿರುವ ಹೆಚ್.ಡಿ. ಕುಮಾರಸ್ವಾಮಿ, ನನ್ನ ಮೇಲಿನ ಸಿಟ್ಟಿನಿಂದ ಈ ರೀತಿ ಮಾಡಿಕೊಂಡು ಹೋಗುತ್ತಿದ್ದಾರೆ. ಜನರ ಮಧ್ಯೆ ನಾನೇ ಮಾಡಿರುವ ರೀತಿ ಬಿಂಬಿಸಿಕೊಳ್ಳುತ್ತಿದ್ದಾರೆ ಎಂದು ಹೇಳಿದ್ದಾರೆ.


ಜಿಲ್ಲೆಯ ಚನ್ನಪಟ್ಟಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಗಣಿಗಾರಿಕೆಗೆ ಅವಕಾಶ ಕೊಟ್ಟಿದ್ದಕ್ಕೂ ನನಗೂ ಯಾವ ಸಂಬಂಧವಿಲ್ಲ. ಆ ಕಂಪನಿ ಚಟುವಟಿಕೆ ಮುಂದುವರಿಸಲು ನಾನು ಸಹಿ ಹಾಕಿರುವುದು. 1738 ಕೋಟಿ ರೂ. ಅವಶ್ಯಕತೆ ಇದೆ. ಆ ಹಣವನ್ನು ಕ್ರೋಡೀಕರಿಸಬೇಕಲ್ಲ. ಅದಕ್ಕೆ ಅವರು ಎರಡು ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಳ್ಳುತ್ತಿದ್ದಾರೆ. ಸಾಲ ಪಡೆಯಲು ಆರ್ಥಿಕ ಇಲಾಖೆಯಿಂದ ಒಪ್ಪಿಗೆ ಪಡೆಯಬೇಕು. ಆ ಒಪ್ಪಿಗೆಗೆ ನಾನು ಆ ಫೈಲ್ ಕಳುಹಿಸಿದ್ದೇನೆ ಎಂದರು.

ಮರು ಬಳಕೆ ಉಡಾವಣೆ ವಾಹನ 'ಪುಷ್ಪಕ್' ಸುರಕ್ಷಿತ ಲ್ಯಾಂಡಿಂಗ್

ಚಿತ್ರದುರ್ಗ, ಜೂ.23– ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಭಾನುವಾರ ಮರುಬಳಕೆ ಮಾಡಬಹುದಾದ ಲಾಂಚ್ ವೆಹಿಕಲ್ ಅಥವಾ ಪುಷ್ಪಕ್ ಲ್ಯಾಂಡಿಂಗ್ ಪ್ರಯೋಗದಲ್ಲಿ ಸತತ ಮೂರನೇ ಯಶಸ್ಸನ್ನು ಸಾಧಿಸಿದೆ.

ಎಲ್‌ಇಎಕ್ಸ್ ಸರಣಿಯ ಮೂರನೇ ಮತ್ತು ಅಂತಿಮ ಪರೀಕ್ಷೆಯನ್ನು ಭಾರತೀಯ ಕಾಲಮಾನ ಇಂದು ಬೆಳಗ್ಗೆ 7.10ಕ್ಕೆ ಚಿತ್ರದುರ್ಗದಲ್ಲಿರುವ ಏರೋನಾಟಿಕಲ್ ಟೆಸ್ಟ್ ರೇಂಜ್‌ನಲ್ಲಿ ನಡೆಸಲಾಯಿತು ಎಂದು ಇಸ್ರೋ ಪ್ರಕಟಣೆ ತಿಳಿಸಿದೆ.

ಸತತ ಮೂರನೇ ಯಶಸ್ಸು ಸಾಧಿಸಿದ ಇಸ್ರೋ




15 ತಿಂಗಳ ಅವಧಿಯಲ್ಲಿ ಇಸ್ರೋ ತನ್ನ ಬಾಹ್ಯಾಕಾಶ ವಿಮಾನ 'ಪುಷ್ಪಕ್'ನ ಎಲ್ಲಾ ಮೂರು ಸ್ವಾಯತ್ತ ಲ್ಯಾಂಡಿಂಗ್ ಪರೀಕ್ಷೆಗಳನ್ನು ಪೂರ್ಣಗೊಳಿಸಿದೆ. ಇಂದು ಬೆಳಗ್ಗೆ 7.10 ಕ್ಕೆ ಮೂರನೇ ಮತ್ತು ಅತ್ಯಂತ ಸಂಕೀರ್ಣವಾದ ಲ್ಯಾಂಡಿಂಗ್ ಪರೀಕ್ಷೆಯನ್ನು ಪೂರ್ಣಗೊಳಿಸುವುದರೊಂದಿಗೆ, ಮಾರ್ಪಡಿಸಿದ ರಾಕೆಟ್‌ನಲ್ಲಿ ಬಾಹ್ಯಾಕಾಶಕ್ಕೆ ಈ ಬಾಹ್ಯಾಕಾಶ ವಿಮಾನದ ದೊಡ್ಡ ಆವೃತ್ತಿಯನ್ನು ಉಡಾವಣೆ ಮಾಡಲು, ಭೂಮಿಯ ಕಕ್ಷೆಯಲ್ಲಿ ವಿಮಾನವನ್ನು ಪರೀಕ್ಷಿಸಲು ಮತ್ತು ಅದರ ಸಾಮರ್ಥ್ಯವನ್ನು ಪ್ರದರ್ಶಿಸಲು ಇಸ್ರೋ ಈಗ ಕೆಲಸ ಮಾಡಬೇಕಾಗಿದೆ. ಮತ್ತೆ ವಾತಾವರಣಕ್ಕೆ ಪ್ರವೇಶಿಸಿ, ರನ್‌ವೇ ಲ್ಯಾಂಡಿಂಗ್‌ಗೆ ಸುರಕ್ಷಿತವಾಗಿ ಭೂಮಿಗೆ ಹಿಂತಿರುಗುವಂತೆ ವರದಿ ಮಾಡಿದೆ. 4.5 ಕಿಮೀ ಎತ್ತರದಲ್ಲಿ ● 7ನೇ ಪುಟಕ್ಕೆ

ಸಾಲು ಮರದ ತಿಮ್ಮಕ್ಕ ವೃಕ್ಷೋದ್ಯಾನದ ಕಾಂಪೌಂಡ್ ಒಡೆದು ಅತಿಕ್ರಮ ಪ್ರವೇಶ

- ಪಾರ್ಕ್‌ನಲ್ಲಿ ಗುಂಡಿ ತೋಡಿ, ಕಂಭ ನೆಟ್ಟು, ಸ್ಲ್ಯಾಬ್ಸ್ ಅಳವಡಿಕೆ
- ಅತಿಕ್ರಮಣಕಾರರ ವಿರುದ್ಧ ಅರಣ್ಯ ಇಲಾಖೆಯಿಂದ ಪೊಲೀಸರಿಗೆ ದೂರು
- ವೃಕ್ಷೋದ್ಯಾನ ಅಭಿವೃದ್ಧಿ ಸಮಿತಿಯಿಂದ ಅತಿಕ್ರಮಣದ ವಿರುದ್ಧ ಪ್ರತಿಭಟನೆ

ಮೈಸೂರು, ಜೂ.23(ಜಿಎ)– ಮೈಸೂರಿನ ಮಳಲವಾಡಿಯಲ್ಲಿರುವ ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನದ ಕಾಂಪೌಂಡ್ ಒಡೆದು ಅತಿಕ್ರಮ ಪ್ರವೇಶ ಮಾಡಿ, ಕಾನೂನು ಬಾಹಿರವಾಗಿ ಕಾಮಗಾರಿ ಕೈಗೊಂಡ ಘಟನೆ ನಡೆದಿದ್ದು, ಈ ಸಂಬಂಧ ಅರಣ್ಯ ಇಲಾಖೆ ಅಧಿಕಾರಿಗಳು ಅಶೋಕಪುರಂ ಠಾಣೆಗೆ ದೂರು ಸಲ್ಲಿಸಿದ್ದರೆ, ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನ ಅಭಿವೃದ್ಧಿ ಸಮಿತಿಯು ಅತಿಕ್ರಮಣಕಾರರ ವಿರುದ್ಧ ಪ್ರತಿಭಟನೆ ನಡೆಸಿದೆ. ಮಳಲವಾಡಿ ಸರ್ವೆ ನಂ.31ರಲ್ಲಿ 33.2 ಎಕರೆ ಪ್ರದೇಶವನ್ನು ಸರ್ಕಾರ ರಕ್ಷಿತ ಅರಣ್ಯವೆಂದು 2017ರ ನ.24ರಂದು ಘೋಷಿಸಿದ್ದು, ಈ ಪ್ರದೇಶ ಮೈಸೂರು ನಗರ ಹಸಿರೀಕರಣ ವಲಯದ ವ್ಯಾಪ್ತಿಗೆ ಒಳಪಡುತ್ತದೆ. ಈ ಪ್ರದೇಶವನ್ನು ಅರಣ್ಯ ಇಲಾಖೆಯು ಸಾಲುಮರದ ತಿಮ್ಮಕ್ಕ ಹೆಸರಿನಲ್ಲಿ ಉದ್ಯಾನವನವಾಗಿ ಅಭಿವೃದ್ಧಿಪಡಿಸಿ, ಸುತ್ತಲೂ ಕಾಂಪೌಂಡ್ ನಿರ್ಮಿಸಿ ಚೈನ್ ಲಿಂಕ್ ಮೆಷ್ ಅಳವಡಿಸಿ ಸಾರ್ವಜನಿಕರು ವಾಯುವಿಹಾರ, ಜಿಮ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅಲ್ಲದೇ ಮಕ್ಕಳ ಆಟಿಕೆಗಳನ್ನು ಅಳವಡಿಸಲಾಗಿದೆ.



ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನ ಅತಿಕ್ರಮಿಸಿ ಕಾಮಗಾರಿ ನಡೆಸಿರುವುದು.

ಆದರೆ ಜೂ.22ರಂದು ಮಧ್ಯಾಹ್ನ ಸುಮಾರು 40 ರಿಂದ 50 ಜನರ ಗುಂಪು ಜೆಸಿಬಿ (ಕೆಎ 09 ಎಂ.ಹೆಚ್. 5547) ಮೂಲಕ ಈ ಪಾರ್ಕ್‌ನ ಈಶಾನ್ಯ ಭಾಗದ ಕಾಂಪೌಂಡ್ ಒಡೆದು ಅತಿಕ್ರಮ ಪ್ರವೇಶ ಮಾಡಿದೆ. ಟ್ರ್ಯಾಕ್ಟರ್‌ಗಳು ಮತ್ತು ನೀರಿನ ಟ್ಯಾಂಕರ್‌ನೊಂದಿಗೆ ಒಳನುಗ್ಗಿದ ಅತಿಕ್ರಮಣಕಾರರು ಪಾರ್ಕ್‌ನಲ್ಲಿ ಒಂದೂವರೆ ಅಡಿ ಆಳದ 43 ಗುಂಡಿಗಳನ್ನು ತೆಗೆದು ಅವುಗಳಲ್ಲಿ 5 ಗುಂಡಿಗಳಿಗೆ ಸಿಮೆಂಟ್ ಕಂಬಗಳನ್ನು ನೆಟ್ಟು, ಸ್ಲ್ಯಾಬ್‌ಗಳನ್ನು ಅಳವಡಿಸಿದ್ದಾರೆ.

ಈ ವಿಷಯ ತಿಳಿಯುತ್ತಿದ್ದಂತೆಯೇ ಆರ್‌ಎಫ್‌ಓ ಎಂ.ಆರ್.ಧನ್ಯಾಶ್ರೀ ಅವರು ಸ್ಥಳಕ್ಕೆ ಭೇಟಿ ನೀಡಿದ್ದು, ಕ್ರಮಕ್ಕೆ ಮುಂದಾದಾಗ ಅಲ್ಲಿದ್ದ ಮೈಸೂರಿನ ಜಯನಗರದ ಸಿದ್ದಪ್ಪ ಮತ್ತು ವಿಜಯನಗರದ ಬಿ.ವಿ.ರಾಜೀವ್ ಅವರುಗಳು, ಸರ್ವೆ ನಂ.31/2ರ ಜಮೀನಿನ ಪೈಕಿ 2.01 ಎಕರೆ ಪ್ರದೇಶವು ಬಿ.ರಾಮಚಂದ್ರ ಎಂಬುವರಿಗೆ ಸೇರಿದ್ದು, ಅವರು ನಮಗೆ ಜಿಪಿಎ ಕೊಟ್ಟಿದ್ದಾರೆ ಎಂದು ಧನ್ಯಾಶ್ರೀ ಅವರಿಗೆ ತಿಳಿಸಿದ್ದಾರೆ. ಧನ್ಯಾಶ್ರೀ ಅವರು ಅತಿಕ್ರಮಣಕಾರರು ತಂದಿದ್ದ ಪರಿಕರಗಳನ್ನು ವಶಪಡಿಸಿಕೊಂಡು ಅವರ ವಿರುದ್ಧ ನೀಡಿದ ದೂರಿನನ್ವಯ ಅಶೋಕಪುರಂ ಪೊಲೀಸ್ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 447, 427, 149ರಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅತಿಕ್ರಮಣಕಾರರ ವಿರುದ್ಧ ಪ್ರತಿಭಟನೆ

ಮೈಸೂರು, ಜೂ.23– ಮೈಸೂರಿನ ಜಯನಗರದಲ್ಲಿರುವ ಅರಣ್ಯ ಇಲಾಖೆ ವ್ಯಾಪ್ತಿಗೆ ಒಳಪಡುವ ಮಳಲವಾಡಿ ಕೆರೆಯ ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನವನ್ನು ಭೂಗಳ್ಳರು ಕಬಳಿಸಲು ಮುಂದಾಗಿದ್ದಾರೆ ಎಂದು ಆರೋಪಿಸಿ ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನ ಅಭಿವೃದ್ಧಿ ಸಮಿತಿ ಭಾನುವಾರ ಉದ್ಯಾನವನದ ಮುಂಭಾಗ ಪ್ರತಿಭಟನೆ ನಡೆಸಿತು.



ಈ ವೇಳೆ ಸಮಿತಿಯ ಪೋಷಕರು ಹಾಗೂ ಮಾಜಿ ಉಪಮೇಯರ್ ಆದ ವಿ.ಶೈಲೇಂದ್ರ ಮಾತನಾಡಿ, ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಈ ಸ್ಥಳದಲ್ಲಿ ತಾಲೂಕು ಕಚೇರಿ ನಿರ್ಮಿಸುವ ಚಿಂತನೆ ನಡೆಸಿ, ನಂತರ ಅರಣ್ಯ ಪ್ರದೇಶವೆಂದು ಘೋಷಿಸಿದರು. ಇಲಾಖೆಗೂ ಹಸ್ತಾಂತರಿಸಲಾಯಿತು. ಸುಮಾರು 33 ಎಕರೆ ಸ್ಥಳವನ್ನು ಅರಣ್ಯ ಇಲಾಖೆ ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನವನ್ನು ನಿರ್ಮಿಸಿದೆ ಎಂದರು.

ಉದ್ಯಾನವನ ನಿರ್ಮಾಣಗೊಂಡ ನಂತರ ಸಾರ್ವಜನಿಕರು ಇಲಾಖೆಯೊಂದಿಗೆ ಜೊತೆಗೂಡಿ ವೃಕ್ಷೋದ್ಯಾನವನ್ನು ಅಭಿವೃದ್ಧಿಪಡಿಸಲು ಸಹಕಾರ ನೀಡಿದ್ದು, ಉದ್ಯಾನವನದಲ್ಲಿ ಉತ್ತಮ ವಾತಾವರಣ ನಿರ್ಮಾಣವಾಗಿದೆ. 1,800 ಮರಗಳನ್ನು ಪೋಷಿಸಲಾಗಿದೆ. ವಾಕಿಂಗ್ ಪಾತ್, ಮಕ್ಕಳಿಗೆ ಆಟೋಟ ಉಪಕರಣ ಹಾಗೂ ಜಿಮ್ ಅಳವಡಿಸಲಾಗಿದ್ದು, ಹೀಗೆ ಅರಣ್ಯ ಇಲಾಖೆ ಮತ್ತು ಸಾರ್ವಜನಿಕರು ವೃಕ್ಷೋದ್ಯಾನದ ನಿರ್ವಹಣೆಯಲ್ಲಿ ತೊಡಗಿದ್ದೇವೆ ಎಂದು ವಿವರಿಸಿದರು. ಹೀಗಿರುವಾಗ ಜೂ.22ರಂದು ಮಧ್ಯಾಹ್ನ 12 ಗಂಟೆಗೆ ವೃಕ್ಷೋದ್ಯಾನದ ತಡೆಗೋಡೆಯನ್ನು ಒಡೆದು ಹಾಕಿ ಅಕ್ರಮವಾಗಿ ಜೆಸಿಬಿ ನುಗ್ಗಿಸಿ, ಪ್ರವೇಶ ಪಡೆದ ಭೂಮಾಫಿಯಾದವರು ಜಲ್ಲಿಕಲ್ಲು, ಎಂ ಸ್ಯಾಂಡ್, ಕಾಂಕ್ರೀಡ್ ಹಲಗೆ, ಕಾಂಕ್ರೀಟ್ ಗೋಡೆಗಳನ್ನು ತಂದು ಏಕಾಏಕಿ ಗುಂಡಿಗಳನ್ನು ತೋಡಿ ಗೋಡೆ ನಿರ್ಮಿಸಲು ಮುಂದಾಗಿದ್ದು, ಸಾರ್ವಜನಿಕರು ಅರಣ್ಯ ಇಲಾಖೆಯ ಗಮನಕ್ಕೆ ತಂದ ತಕ್ಷಣ ಅಧಿಕಾರಿಗಳು ಗೋಡೆ ನಿರ್ಮಾಣವನ್ನು ಸ್ಥಗಿತಗೊಳಿಸಿ, ಅರಣ್ಯ ಇಲಾಖೆಯು ಸ್ಥಳದಲ್ಲಿ ಗೋಡೆ ನಿರ್ಮಾಣ ಮಾಡಲು ಅನುಮತಿ ನೀಡಿದವರು ಯಾರು ಎಂದು ಪ್ರಶ್ನಿಸಿದ್ದಾರೆ.

ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನವನ್ನಾಗೆ ಉಳಿಸಿಕೊಳ್ಳಲು, ಭೂಗಳ್ಳರಿಂದ ಕಾಪಾಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳು ಅನುವು ಮಾಡಿಕೊಡಬೇಕು ಹಾಗೂ ಭೂಗಳ್ಳರ ಮೇಲೆ ಉನ್ನತ ಮಟ್ಟದ ತನಿಖೆ ಮಾಡಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮವನ್ನು ಜರುಗಿಸಬೇಕೆಂದು ಆಗ್ರಹಿಸಿದರು.

ನಕ್ಕರೆ ಅದೇ ಸ್ವರ್ಗ

ಮಗ : ಅಪ್ಪಾ ಮದುವೆ ಆದರೆ ಎಷ್ಟು ಖರ್ಚಾಗುತ್ತೆ?

ತಂದೆ : ಗೊತ್ತಿಲ್ಲ, ನಾನಂತೂ ಇನ್ನೂ ಖರ್ಚು ಮಾಡ್ತಾನೆ ಇದೀನಿ...

ಮೈಸೂರು ಮಿತ್ರ

ಸೋಮವಾರ, 24 ಜೂನ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಸಮುದ್ರ ಎಲ್ಲರಿಗೂ ಒಂದೇ, ಆದರೆ... ಈಜು ಬಂದವನಿಗೆ ಮುತ್ತುಗಳು ಸಿಗುತ್ತವೆ, ಬಲೆ ಹಾಕಲು ಬಂದವನಿಗೆ ಮೀನು ಸಿಗುತ್ತದೆ, ನಿಂತು ನೋಡುವವನ ಕಾಲು ಮಾತ್ರ ಒದ್ದೆಯಾಗುತ್ತದೆ, ಜೀವನ ಕೂಡ ಅಷ್ಟೇ.... ಎಲ್ಲರಿಗೂ ಒಂದೇ, ಆದರೆ, ಇಲ್ಲಿ ನಮ್ಮ ಪ್ರಯತ್ನ ಮಾತ್ರ ನಮ್ಮ ಬಲ ಆಗಿರುತ್ತದೆ...

ವೇದ ಸುಳ್ಳಾದರೂ { ಹೊಲ ಬಿತ್ತಿ ನೋಡು,
ಗಾದೆ ಸುಳ್ಳಾಗದು { ನೆಲ ಸಾರಿಸಿ ನೋಡು

ನಿಮ್ಮ ಪತ್ರಗಳು

ಯೋಗದಿಂದ ನಮ್ಮ ಗುರಿ ತಲುಪಬಹುದೇ?

ಮಾನ್ಯರೆ,

ಈ ಪ್ರಶ್ನೆ ನಮ್ಮ ತಲೆಯನ್ನು ಒಂದು ರೀತಿ ಚಿಂತನೆಗೆ ಒಳಪಡಿಸುತ್ತದೆ. ನಾವು ಯೋಚಿಸಿದಾಗ ಇದು ಸಾಧ್ಯವೇ ಎಂಬ ಮನೋಭಾವನೆ ನಮ್ಮಲ್ಲಿ ಮೂಡುತ್ತದೆ. ಹಿಂದೆ ಯೋಗಿಗಳು ದಿನವಿಡೀ ಧ್ಯಾನದಲ್ಲಿ ನಿರತರಾಗಿ ತಮ್ಮ ಮನೋಲ್ಲಾಸ ಪಡಿಸಿಕೊಳ್ಳುತ್ತಿದ್ದರು ಅಲ್ಲವೇ?. ತಮ್ಮ ಮನಸಿನಲ್ಲಿ ಯಾವುದೇ ಚಿಂತನೆಗಳಿಗೆ ಆಸ್ಪದ ಕೊಡದೇ ಕೇವಲ ಧ್ಯಾನದಲ್ಲಿ ನಿರತರಾದಾಗ ಮಾತ್ರ ನಾವು ಅಂದುಕೊಂಡ ಗುರಿ ತಲುಪಲು ನಮಗೆ ಆರೋಗ್ಯಕರವಾದ ವಾತಾವರಣ ದೊರಕಬಹುದು.

ಇತ್ತೀಚಿನ ದಿನಮಾನಗಳಲ್ಲಿ ಚಿಕ್ಕವಯಸ್ಸಿನಿಂದ ಹಿಡಿದು ವಯೋವೃದ್ಧರವರೆಗೂ ಸಮಸ್ಯೆಗಳ ಹಾಗೂ ಚಿಂತನೆಗಳ ಸರಮಾಲೆಯನ್ನು ಮನಸ್ಸಿನೊಳಗೆ ತುಂಬಿಸಿಕೊಂಡು ದಿನವಿಡೀ ತೊಳಲಾಡುತ್ತಿರುತ್ತೇವೆ. ಇವುಗಳ ಮಧ್ಯೆ ನಮಗೆ ನಮ್ಮ ಮನಸ್ಸು ಒಂದೇ ಸ್ಥಿತಿಯನ್ನು ಕಾಯ್ದುಕೊಳ್ಳುವುದು ತುಂಬಾ ಕಷ್ಟವೇ ಸರಿ. ಈ ಸಮಸ್ಯೆಗಳ ಸುಳಿಯಿಂದ ಅಲ್ಪ ನೆಮ್ಮದಿ ಹಾಗೂ ನಮ್ಮ ಮನಸ್ಸನ್ನು ನಮ್ಮ ಗುರಿಯತ್ತ ಕೊಂಡೊಯ್ಯಲು ಇರುವ ಏಕೈಕ ಅಸ್ತ್ರವೆಂದರೆ ಅದುವೇ ಯೋಗ ಮಾತ್ರ ಎನ್ನಬಹುದು. ಯೋಗದಿಂದ ಆರೋಗ್ಯ ಭೋಗ ಎಂದರೆ ತಪ್ಪಾಗಲಾರದು. ನಾವು ಯಾವುದೇ ಕೆಲಸ ಮಾಡುವ ಮುನ್ನ ಒಂದೆರಡು ನಿಮಿಷಗಳ ಕಾಲ ಕಣ್ಣು ಮುಚ್ಚಿ ಧ್ಯಾನ ಮಾಡಿ ನಂತರ ಕೆಲಸ ಆರಂಭಿಸಿದರೆ ಸಾಕು ಅದರಲ್ಲಿ ಅರ್ಧ ಯಶಸ್ಸು ಲಭಿಸುತ್ತದೆ. ಆದರೆ ವಿಪರ್ಯಾಸವೆಂದರೆ ಧ್ಯಾನ ಮಾಡುವುದೇ ಒಂದು ಹರಸಾಹಸವಾಗಿದೇ ಇತ್ತೀಚಿನ ದಿನಗಳಲ್ಲಿ ಅಲ್ಲವೇ?.

ಹೀಗೆ ನಾವು ನಮ್ಮ ಗುರಿಯನ್ನು ತಲುಪಬೇಕಾದರೇ ಯೋಗ ನಮಗೆ ಅತೀ ಮುಖ್ಯವಾದ ಕೆಲಸವನ್ನು ನಿರ್ವಹಿಸುತ್ತದೆ. ಈ ಯೋಗ ತೋರಿಕೆಯಾಗಬಾರದು. ನಮಗಾಗಿ, ನಮ್ಮ ಆರೋಗ್ಯಕ್ಕಾಗಿ ಹಾಗೂ ನಮ್ಮ ಯಶಸ್ಸಿಗಾಗಿ ಯೋಗ ಮಾಡೋಣ, ಆರೋಗ್ಯ ಭಾಗ್ಯ ಹೊಂದೋಣ?!

–ಅನಿಲ್ ರಾಜ, ಸಹ ಶಿಕ್ಷಕರು, ಮೈಸೂರು.

ಕಸದ ರಾಶಿಯಿಂದ ಮುಕ್ತಿ ಯಾವಾಗ?

ಮಾನ್ಯರೆ,

ಮೈಸೂರಿನ ವಿಶ್ವೇಶ್ವರನಗರದ ತಪೋವನ ಅಪಾರ್ಟ್‌ಮೆಂಟ್ ಪಕ್ಕದಲ್ಲಿಯೇ (ರಾಜರಾಜೇಶ್ವರಿ ದೇವಸ್ಥಾನದ ಎದುರು) ಇತ್ತೀಚೆಗೆ ಕೆಲವು ತಿಂಗಳುಗಳಿಂದ ರಸ್ತೆಯ ಪಕ್ಕದಲ್ಲಿಯೇ ಅಕ್ಕಪಕ್ಕದ ನಿವಾಸಿಗಳು ಹಸಿ ಹಾಗೂ ಒಣ ಕಸಗಳನ್ನು ತಂದು ಸುರಿಯುತ್ತಿದ್ದು, ಇದರಿಂದ ಈ ಭಾಗದಲ್ಲಿ ನೆಲೆಸಿರುವ ನಿವಾಸಿಗಳು ಇನ್ನಿಲ್ಲದ ತೊಂದರೆ ಅನುಭವಿಸುತ್ತಿದ್ದಾರೆ.

ಇದರಿಂದ ವಿಪರೀತ ಸೊಳ್ಳೆ ಮತ್ತು ಇನ್ನಿತರ ಕ್ರಿಮಿ ಕೀಟಗಳಿಂದ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗಿ ಪಡಬಾರದ ಕಷ್ಟಗಳನ್ನು ಅನುಭವಿಸುವ ಪರಿಸ್ಥಿತಿ ಉದ್ಭವಿಸಿದೆ. ಈ ರಸ್ತೆಯಲ್ಲಿ ಅನೇಕ ಅಪಾರ್ಟ್‌ಮೆಂಟ್‌ಗಳು, ಶಾಲಾ ಕಾಲೇಜುಗಳು, ದೇವಸ್ಥಾನ ಹಾಗೂ ಜಾಕಿ ಕಂಪನಿಯ ರೆಡಿಮೇಡ್ ಬಟ್ಟೆಗಳ ಕಾರ್ಖಾನೆ ಇದ್ದು ಸದಾ ಜನಸಂಚಾರ ಹಾಗೂ ವಾಹನ ಸಂಚಾರದ ದಟ್ಟಣೆಯಿಂದ ಕೂಡಿದೆ.

ರಸ್ತೆಯ ಬದಿಯಲ್ಲಿ ಕಸ ತಂದು ದಿನಂಪ್ರತಿ ಸುರಿಯುವುದರಿಂದ ಕಿರಿದಾದ ರಸ್ತೆಯಲ್ಲಿ ಸಂಚರಿಸುವುದು ನಿಜಕ್ಕೂ ಅಪಾಯವನ್ನು ಎದುರು ಹಾಕಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಉಳಿದ ಆಹಾರ ಪದಾರ್ಥಗಳನ್ನು ಸಹ ಎಗ್ಗಿಲ್ಲದೆ ಇಲ್ಲಿಯೇ ರಾತ್ರಿ ಸಮಯದಲ್ಲಿ ಬಿಸಾಡಿ ಹೋಗುವ ಕೆಲವರ ಹವ್ಯಾಸದಿಂದ ಅಕ್ಕಪಕ್ಕದಲ್ಲಿ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವ ಹಿರಿಯ ನಾಗರಿಕರು ಹಾಗೂ ರಸ್ತೆಯಲ್ಲಿ ಸಂಚರಿಸುವ ನಾಗರಿಕರಿಗೆ ಕೆಟ್ಟ ವಾಸನೆ ಬರುತ್ತದೆ. ಜೊತೆಗೆ ಬೀದಿನಾಯಿಗಳ ಕಾಟ ಬೇರೆ. ಇದಕ್ಕೆ ಮುಕ್ತಿ ದೊರೆಯುವುದು ಯಾವಾಗ ಎನ್ನುವುದೇ ದೊಡ್ಡ ಪ್ರಶ್ನೆ. ಕಾರಣ ಈ ಬಗ್ಗೆ ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಕೊಟ್ಟರೂ ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಮುಂದಾದರೂ ಸಂಬಂಧಪಟ್ಟವರು ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಆದಷ್ಟು ಬೇಗ ಇಲ್ಲಿಂದ ಕಸ ವಿಲೇವಾರಿ ಮಾಡಿ ಮತ್ತು ಇಲ್ಲಿ ಕಸ ತಂದು ಸುರಿಯದ ರೀತಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಇಲ್ಲಿಯ ನಾಗರಿಕರ ಕಳಕಳಿಯ ಮನವಿ.

–ಜಿ.ಎಸ್.ಗಣೇಶ್‌ರಾವ್, ವಿಶ್ವೇಶ್ವರನಗರ, ಮೈಸೂರು.

ನಗರ ಸಾರಿಗೆ ಸಿಬ್ಬಂದಿ ವರ್ತನೆ ಸರಿಯೇ...

ಮಾನ್ಯರೆ,

ನಾನು ನನ್ನ ಇಬ್ಬರು ಹೆಣ್ಣುಮಕ್ಕಳೊಂದಿಗೆ ಭಾನುವಾರ ರಾಮಸ್ವಾಮಿ ಸರ್ಕಲ್‌ನಿಂದ ಸಂಸ್ಕೃತ ಪಾಠಶಾಲೆಗೆ ಹೋಗಲು ನಗರ ಸಾರಿಗೆ ಬಸ್ (KA09 F 4961) ಹತ್ತಿದ್ದೆ. ಬಸ್ ಪಾಠಶಾಲೆ ಸರ್ಕಲ್ ಬರುವ ವೇಳೆಗೆ ಟ್ರಾಫಿಕ್ ಸಿಗ್ನಲ್ ಬಿಟ್ಟಿದ್ದರಿಂದ ಮುಂದೆ ಬಸ್ ನಿಲ್ಲಿಸುವಂತೆ ಹೇಳಿದರೂ ಚಾಲಕ ಹಾಗೂ ನಿರ್ವಾಹಕರು ಇಲ್ಲೇ ಇಳಿಯಿರಿ ಎಂದು ತಾಕೀತು ಮಾಡಿದರು. ಸಿಗ್ನಲ್ ಬಿಟ್ಟಿರುವುದರಿಂದ ಹಾಗೂ ಪಾಠಶಾಲೆ ಸರ್ಕಲ್‌ನಲ್ಲಿ ಫ್ರೀ ಲೆಫ್ಟ್ ಇರುವುದರಿಂದ ಹಿಂದಿನಿಂದ ವಾಹನಗಳು ಬರುತ್ತಿವೆ. ಅಪಘಾತವಾದರೆ ಯಾರು ಹೊಣೆ ಎಂದು ನಾನು ನಿರ್ವಾಹಕನಿಗೆ ಹೇಳಿದರೂ ಕೇಳದೇ ಡೋರ್ ಲಾಕ್ ಮಾಡಿ. ನಮ್ಮನ್ನು ಅಲ್ಲಿಯೇ ಇಳಿಸಿದರು. ಇದರಿಂದ ನಮಗೆ ಸಮಯ ವ್ಯರ್ಥವಾಯಿತು. ಸಂಚಾರ ನಿಯಮಗಳ ಪ್ರಕಾರ ಟ್ರಾಫಿಕ್ ಸಿಗ್ನಲ್ ಬಿಟ್ಟಿದ್ದಾಗ ಪ್ರಯಾಣಿಕರ ಹಿತ ದೃಷ್ಟಿಯಿಂದ ಬಸ್ ಅನ್ನು ಮುಂದೆ ನಿಲ್ಲಿಸಬೇಕು. ಈ ಸಾಮಾನ್ಯ ಜ್ಞಾನವೂ ಬಸ್ ಚಾಲಕ ಹಾಗೂ ನಿರ್ವಾಹಕರಿಗೆ ಇಲ್ಲವೇ. ಅಪಘಾತವಾಗಿ ಪ್ರಯಾಣಿಕರು ಮೃತಪಟ್ಟರೆ ಯಾರು ಹೊಣೆ? ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮೈಸೂರು ನಗರ ಘಟಕದ ಅಧಿಕಾರಿಗಳು ಪ್ರಯಾಣಿಕರೊಂದಿಗೆ ದುರ್ವರ್ತನೆ ತೋರುವ ಇಂತಹ ಬಸ್ ಚಾಲಕ, ನಿರ್ವಾಹಕರ ವಿರುದ್ಧ ಕ್ರಮ ಕೈಗೊಳ್ಳಬೇಕು. **–ವಾರುಣಿ ಜಿ.**

ಎಪಿಎಲ್ ಕಾರ್ಡ್‌ದಾರರ ಭವಣೆ

ಮಾನ್ಯರೆ,

ಸ್ವಾಮಿ, ನಾನೊಬ್ಬ APL ರೇಷನ್ ಕಾರ್ಡ್‌ದಾರ. ನನಗೆ ಜಯನಗರದಲ್ಲಿರುವ ಡಿಪೋ ತನಕ ನಡೆಯಲು ಆಗದಿದ್ದರಿಂದ, ಪಡಿತರ ಪಡೆಯಲಿಲ್ಲ. ಈಗ 2 ತಿಂಗಳ ಹಿಂದೆ ಹೋಗಿ ಕೇಳಿದರೆ, APL ಕಾರ್ಡ್‌ದಾರರಿಗೆ ಪಡಿತರ ನಿಲ್ಲಿಸಿದ್ದಾರೆ ಎಂದು ಹೇಳಿದರು. ನಿನ್ನೆ ಆಯುಷ್ಮಾನ್ ಭಾರತ್ ಕಾರ್ಡ್ ಮಾಡಿಸೋಣ ಎಂದು ಹೋಗಿದ್ದೆ. ನಿಮ್ಮ ರೇಷನ್ ಕಾರ್ಡ್ ಪಟ್ಟಿಯಲ್ಲಿ ಇಲ್ಲ. ಆದ್ದರಿಂದ ಆಯುಷ್ಮಾನ್ ಭಾರತ್ ಕಾರ್ಡ್ ಆಗುವುದಿಲ್ಲ. ಎಂದರು. ಈ ಅವ್ಯವಸ್ಥೆಗೆ ಯಾರು ಕಾರಣ. APL ಕಾರ್ಡ್‌ದಾರರು ಆಯುಷ್ಮಾನ್ ಕಾರ್ಡ್‌ಗೆ ಅರ್ಹರಲ್ಲವೇ? ಆದರೂ ಆ ಅಂಗಡಿಯವರು NATIONAL HEALTH AUTHORITY ಹೆಸರಿನಲ್ಲಿ ಒಂದು ಕಾರ್ಡ್ ಮಾಡಿ ರೂ 150/– ತೆಗೆದುಕೊಂಡರು. ಇದರ ಬಗ್ಗೆ ಪೇಪರ್, ಟಿವಿಯಲ್ಲಿ ಪ್ರಚಾರವೇ ಇಲ್ಲ. ಹೀಗಾಗಿ ಜನಗಳಿಗೆ ಸಿಗಬೇಕಾದ ಸವಲತ್ತುಗಳು ಶಬ್ದವಿಲ್ಲದೆ ಸಾಯುತ್ತಿವೆ. ಜಿಲ್ಲಾಧಿಕಾರಿಗಳು ಇದರ ಬಗ್ಗೆ ಗಮನಹರಿಸಬೇಕಾಗಿದೆ.


–ಅಕ್ಕಿ ಹೆಬ್ಬಾಳು ವೆಂಕಟೇಶ್, ಕುವೆಂಪುನಗರ.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಬೆರಗು

ರೈತ ದೇವೋ ಭವ..... ಯೋಧ ದೇವೋ ಭವ.....



> ಒಬ್ಬ ಕ್ರಿಕೆಟ್ ಪಟು, ಸಿನೆಮಾ ನಟ, ಸಾಹಿತಿ, ರಾಜಕಾರಣಿ ನಿಧನ ಹೊಂದಿದರೆ ದೇಶಕ್ಕೆ ತುಂಬಲಾರದ ನಷ್ಟ ಎಂದು ದೊಡ್ಡ ಜನರು ಮೈಕ್ ಮುಂದೆ ಬಂದು ಹೇಳುತ್ತಾರೆ. ಆದರೆ ರೈತ ಆತ್ಮಹತ್ಯೆ ಮಾಡಿಕೊಂಡು ಸತ್ತಾಗ ಮಾತ್ರ ಮೌನಕ್ಕೆ ಜಾರುತ್ತಾರೆ. ದೇಶಕ್ಕೆ ನಿಜವಾದ ನಷ್ಟವಾಗುವುದು ರೈತನ ಸಾವಿನಿಂದ. ಇಂದು ರೈತರ ಸಂಕಷ್ಟವನ್ನು ಅರಿತ ಯುವ ಪೀಳಿಗೆ ಕೃಷಿಕಾಯಕಕ್ಕೆ ಗುಡ್ ಬೈ ಹೇಳಿ, ಪಟ್ಟಣ ಹಾಗೂ ನಗರ ಪ್ರದೇಶಗಳಲ್ಲಿ ಕೂಲಿ ಕೆಲಸಕ್ಕೆ, ಸೆಕ್ಯುರಿಟಿ ಮತ್ತಿತರ ಕೆಲಸಕ್ಕೆ ಸೇರ್ಪಡೆಗೊಳ್ಳುತ್ತಿದ್ದಾರೆ. ಹೀಗೆ ಮುಂದುವರಿದರೆ ಮುಂದೊಂದು ದಿನ ಕೃಷಿ ಕೆಲಸ ಮಾಡುವವರ ಸಂಖ್ಯೆ ಕಡಿಮೆಯಾಗಿ ಆಹಾರದ ಕೊರತೆ ಉಂಟಾಗಬಹುದು. ಈ ವಿಚಾರವನ್ನು ಆಳುವ ಸರ್ಕಾರಗಳು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಜರುಗಿಸಬೇಕು. ಅಗತ್ಯ ಯೋಜನೆಗಳನ್ನು ಸಿದ್ಧಪಡಿಸಿ ರೈತರ ಸುಸ್ಥಿರ ಬದುಕಿಗೆ ನಾಂದಿ ಹಾಡಬೇಕು. ಇಲ್ಲವಾದಲ್ಲಿ ಹಸಿರು ಕ್ರಾಂತಿ ಎಂಬುದು ಮರೆಯಾಗಿ ಬರೀ ಭ್ರಾಂತಿಯಾಗುವ ಸಂಭವವಿದೆ.

ಭಾರತೀಯ ಪರಂಪರೆಯಲ್ಲಿ ಗುರುಹಿರಿಯರನ್ನು ದೇವರಂತೆ ಪೂಜಿಸುವ, ಗೌರವಿಸುವ ಸಂಸ್ಕೃತಿ ಇದೆ. ಆ ಕಾರಣಕ್ಕೆ ಮಾತೃದೇವೋ ಭವ, ಪಿತೃ ದೇವೋಭವ, ಆಚಾರ್ಯ ದೇವೋ ಭವ, ಅತಿಥಿ ದೇವೋಭವ ಎಂದು ಹೆತ್ತ ತಾಯಿ, ತಂದೆ, ನಂತರ ಗುರುಗಳು ಹಾಗೂ ಅತಿಥಿಗಳನ್ನು ಪೂಜ್ಯ ಭಾವದಿಂದ ನೆನಿಸಿಕೊಳ್ಳುವುದು ಒಂದು ಸಂಪ್ರದಾಯದಂತೆ ಆಗಿಬಿಟ್ಟಿದೆ. ಆದರೆ ಇವರೊಟ್ಟಿಗೆ ಬಹುಮುಖ್ಯವಾಗಿ ಇಬ್ಬರು ಮಹನೀಯರನ್ನು ಮರೆತಿದ್ದೇವೆ ಎನಿಸುತ್ತದೆ. ಭಾರತದ ಹೆಮ್ಮೆಯ ಎರಡನೇ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರೀಜಿ ಅವರು ಈ ಮಹನೀಯರ ಮಹತ್ವವನ್ನು ತಮ್ಮ ಘೋಷಣೆಯೊಂದರ ಮೂಲಕ ಜನಪ್ರಿಯಗೊಳಿಸಿದ್ದಾರೆ. ಆ ಇಬ್ಬರು ಮಹನೀಯರ ಮಹತ್ವವನ್ನು ಇಡೀ ದೇಶಕ್ಕೆ ತೋರಿಸಿಕೊಟ್ಟ ಕೀರ್ತಿ ಶಾಸ್ತ್ರೀಜಿ ಅವರಿಗೆ ಸಲ್ಲಬೇಕು. ಆ ಇಬ್ಬರು ಮಹನೀಯರೇ ಒಬ್ಬರು ರೈತರು, ಮತ್ತೊಬ್ಬರು ಸೈನಿಕರು. ಜೈ ಜವಾನ್.... ಜೈ ಕಿಸಾನ್..... ಎಂಬ ಘೋಷಣೆಯ ಮೂಲಕ ದೇಶದ ಬೆನ್ನೆಲುಬಾದ ರೈತರಿಗೆ ಹಾಗೂ ಸೈನಿಕರಿಗೆ ಗೌರವಿಸಿದ್ದಾರೆ.

ಕೆನಡಾ ದೇಶದ ಬ್ರೆಂಡಾ ಶೆಪ್ ಎಂಬ ಬರಹಗಾರ್ತಿ, ಪ್ರೇರಣಾತ್ಮಕ ಉಪನ್ಯಾಸಕಿ 'ಜೀವನದಲ್ಲಿ ಒಮ್ಮೊಮ್ಮೆ ವೈದ್ಯರನ್ನು, ಕೆಲವೊಮ್ಮೆ ವಕೀಲರನ್ನು, ಅಪರೂಪಕ್ಕೆ ಪೊಲೀಸ್‌ನ್ನು ಹಾಗೂ ಪ್ರವಚನಕಾರರನ್ನು ಭೇಟಿಯಾಗುವ ಅಗತ್ಯ ಬೀಳಬಹುದು, ಆದರೆ ಪ್ರತಿದಿನ, ಮೂರು ಹೊತ್ತು ನಮಗೆ ರೈತನ ಅಗತ್ಯ ಇದ್ದೇ ಇದೆ' ಎಂದು ಹೇಳಿದ್ದಾರೆ. ಬ್ರೆಂಡಾ ಅವರ ಈ ಮಾತು ಅಕ್ಷರಶಃ ಸತ್ಯ ಅಲ್ಲವೇ? ಯಾವುದೇ ದೇಶದಲ್ಲಿ ತೈಲ, ವಿದ್ಯುತ್, ಇತರೆ ತಂತ್ರಜ್ಞಾನದ ಕೊರತೆಯಾದರೆ ಕೆಲವು ವರ್ಷಗಳಾದರೂ ಬದುಕಬಹುದು, ಆದರೆ ಆಹಾರದ ಕೊರತೆಯಾದರೆ ಬದುಕುವುದಾದರೂ ಹೇಗೆ? ರೈತನಿಲ್ಲದಿದ್ದರೆ ಉಪವಾಸದಿಂದ ಸಾಯಬೇಕಾಗುತ್ತದೆ. ಕೊರೊನಾ ಸಂದರ್ಭದಲ್ಲಿ ಎಲ್ಲಾ ವೃತ್ತಿಯವರು ರಜೆ ಪಡೆದರು, ಆದರೆ ರೈತ ಮಾತ್ರ ರಜೆ ಪಡೆಯಲಿಲ್ಲ. ಮನೆಯಲ್ಲಿ ಕುಳಿತವರಿಗೆ ದಿನದ ಮೂರು ಹೊತ್ತು ಅನ್ನ ಒದಗಿಸಲು ಹಗಲಿರುಳು ಪರಿಶ್ರಮ ಪಡುತ್ತಲೇ ಇದ್ದ ಈ ಅನ್ನದಾತ.

ಮನುಷ್ಯನಿಗೆ ಇಂದು ಮೊಬೈಲ್ ಫೋನ್, ಮೋಟಾರು ವಾಹನಗಳು ಅಗತ್ಯ ವಸ್ತುಗಳು ಎನಿಸಬಹುದು. ಮದ್ಯವೂ ಮನುಷ್ಯನ ಶೋಕಿಗಳಲ್ಲಿ ಒಂದಾಗಿದೆ. ಆದರೆ ಇವುಗಳು ಇಲ್ಲದೆಯೂ ಮನುಷ್ಯ ಭೂಮಿಯ ಮೇಲೆ ಬದುಕಬಲ್ಲ, ಆದರೆ ರೈತ ಬೆಳೆದ ಬೆಳೆಯಿಲ್ಲದೆ ಬದುಕಲಾರ. ಆದರೆ ಮದ್ಯ, ವಾಹನ ಹಾಗೂ ಮೊಬೈಲ್ ತಯಾರಿಸುವವರು ಮಾತ್ರ ಐಷಾರಾಮಿ ಜೀವನ ನಡೆಸುತ್ತಿದ್ದಾರೆ. ಎಲ್ಲರಿಗೂ ಅನ್ನದಾತನಾದ ರೈತನ ಪರಿಸ್ಥಿತಿ ಮಾತ್ರ ಸುಧಾರಿಸಿಲ್ಲ. ಎಲ್ಲಾ ವಸ್ತುಗಳಿಗೂ ಎಂ.ಆರ್.ಪಿ ವಿಧಿಸಿ ಮಾರುಕಟ್ಟೆಯಲ್ಲಿ ನಿಗದಿತ ಬೆಲೆಗೆ ತೆಗೆದುಕೊಳ್ಳುವಂತೆ ಕಾನೂನು ರೂಪಿತವಾಗಿದೆ. ಆದರೆ ರೈತ ಬೆಳೆದ ಬೆಳೆಗೆ ಮಾತ್ರ ನಿಗದಿತ ಬೆಲೆ ಇಲ್ಲ. ಮಧ್ಯವರ್ತಿಗಳು ಆಡಿಸುವ ಆಟದ ಗೊಂಬೆ, ಅವರು ಕೇಳಿದ ಬೆಲೆಗೆ ನೀಡಬೇಕಾದ ದಯನೀಯ ಪರಿಸ್ಥಿತಿ ರೈತನದ್ದು. ಆಲ್ಕೋಹಾಲನ್ನು ಮಳಿಗೆಗೆ ಹೋಗಿ ಕ್ಯೂ ನಿಂತು ತೆಗೆದುಕೊಳ್ಳುವ ಜನ, ರೈತ ಹೈನುಗಾರಿಕೆ ಮಾಡಿ ನೀಡುವ ಹಾಲನ್ನು ಮನೆಯ ಮುಂದೆ ತಂದು ಹಾಕುವಂತೆ ತಾಕೀತು ಮಾಡುವುದು ದುರದೃಷ್ಟಕರ. ರೈತನ ಬೆಳೆಗೆ ಬೆಲೆ ಇಲ್ಲದಿರುವಂತೆ ರೈತನಿಗೆ ಬೆಲೆ ಇಲ್ಲದಿರುವುದು ನಿಜಕ್ಕೂ ವಿಷಾದನೀಯ ಸಂಗತಿ. ರೈತರ ಮಕ್ಕಳಿಗೆ ವಧು ದೊರಕದೆ ಸಾಮಾಜಿಕ ಸಮಸ್ಯೆಯನ್ನು ಹಳ್ಳಿಗಳಲ್ಲಿ ಎದುರಿಸುವ ಪರಿಸ್ಥಿತಿ ಉಂಟಾಗಿದೆ. ಅವರ ಸ್ಥಿತಿ ದೇವರಿಗೇ ಪ್ರೀತಿ.

ಅತಿವೃಷ್ಟಿ ಅನಾವೃಷ್ಟಿಗೆ ಬೇರೇ ಯಾವುದೇ ವೃತ್ತಿಯವರು ಅಷ್ಟಾಗಿ ತೊಂದರೆ ಅನುಭವಿಸುವುದಿಲ್ಲ. ಆದರೆ ರೈತರು ಮಾತ್ರ ಕಣ್ಣೀರಿನಲ್ಲಿ ಕೈತೊಳೆಯ ಬೇಕಾಗುತ್ತದೆ. ಇತ್ತೀಚೆಗೆ ಬಿರುಗಾಳಿಗೆ ಸಿಲುಕಿ, ಅತಿಯಾದ ಮಳೆಗೆ ಸಾವಿರಾರು ಎಕರೆ ಬಾಳೆ ನೆಲಕಚ್ಚಿದ್ದನ್ನು ಗಮನಿಸಿರಬಹುದು. ಕೈಗೆ ಬಂದ ಬೆಳೆ ಬಾಯಿಗೆ ಬರದೇ ಇದ್ದುದು ರೈತನನ್ನು ದುಸ್ಥಿತಿಗೆ ದೂಡುತ್ತದೆ. ಬೆಳೆಗೆ ಮಾಡಿದ ಸಾಲ ತೀರಿಸಲಾಗದೆ, ಮನೆಯ ಖರ್ಚುಗಳನ್ನು ನಿಭಾಯಿಸಲಾಗದೆ ರೈತ ಆಕಾಶ ನೋಡುವ ಪರಿಸ್ಥಿತಿ ಉಂಟಾಗುತ್ತಿದೆ. ಅನೇಕ ರೈತರ ಮೂರ್ನಾಲ್ಕು ಬೆಳೆಗಳು ನಿರಂತರವಾಗಿ ಹಾಳಾಗಿ ಅಥವಾ ಬೆಲೆ ಕುಸಿತಕ್ಕೆ ಸಿಲುಕಿ, ಮಾಡಿದ ಸಾಲವನ್ನು ತೀರಿಸಲಾಗದೆ ನೇಣಿಗೆ ಕೊರಳೊಡ್ಡಿದ, ಕ್ರಿಮಿನಾಶಕ ಸೇವಿಸಿದ ಸುದ್ದಿ ಬರುತ್ತಲೇ ಇರುತ್ತದೆ. ರೈತರ ಆತ್ಮಹತ್ಯೆ ನಿಜಕ್ಕೂ ದೇಶಕ್ಕೆ ಆಗುತ್ತಿರುವ ದೊಡ್ಡ ನಷ್ಟ, ಇದನ್ನು ಯಾವುದೇ ಮಾಧ್ಯಮ ಗಂಭೀರವಾಗಿ ಪರಿಗಣಿಸದೇ ಇರುವುದು ದುರದೃಷ್ಟಕರ.

ಒಬ್ಬ ಕ್ರಿಕೆಟ್ ಪಟು, ಸಿನೆಮಾ ನಟ, ಸಾಹಿತಿ, ರಾಜಕಾರಣಿ ನಿಧನ ಹೊಂದಿದರೆ ದೇಶಕ್ಕೆ ತುಂಬಲಾರದ ನಷ್ಟ ಎಂದು ದೊಡ್ಡ ಜನರು ಮೈಕ್ ಮುಂದೆ ಬಂದು ಹೇಳುತ್ತಾರೆ. ಆದರೆ ರೈತ ಆತ್ಮಹತ್ಯೆ ಮಾಡಿಕೊಂಡು ಸತ್ತಾಗ ಮಾತ್ರ ಮೌನಕ್ಕೆ ಜಾರುತ್ತಾರೆ. ದೇಶಕ್ಕೆ ನಿಜವಾದ ನಷ್ಟವಾಗುವುದು ರೈತನ ಸಾವಿನಿಂದ. ಇಂದು ರೈತರ ಸಂಕಷ್ಟವನ್ನು ಅರಿತ ಯುವ ಪೀಳಿಗೆ ಕೃಷಿಕಾಯಕಕ್ಕೆ ಗುಡ್ ಬೈ ಹೇಳಿ, ಪಟ್ಟಣ ಹಾಗೂ ನಗರ ಪ್ರದೇಶಗಳಲ್ಲಿ ಕೂಲಿ ಕೆಲಸಕ್ಕೆ, ಸೆಕ್ಯುರಿಟಿ ಮತ್ತಿತರ ಕೆಲಸಕ್ಕೆ ಸೇರ್ಪಡೆಗೊಳ್ಳುತ್ತಿದ್ದಾರೆ. ಹೀಗೆ ಮುಂದುವರಿದರೆ ಮುಂದೊಂದು ದಿನ ಕೃಷಿ ಕೆಲಸ ಮಾಡುವವರ ಸಂಖ್ಯೆ ಕಡಿಮೆಯಾಗಿ ಆಹಾರದ ಕೊರತೆ ಉಂಟಾಗಬಹುದು. ಈ ವಿಚಾರವನ್ನು ಆಳುವ ಸರ್ಕಾರಗಳು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಜರುಗಿಸಬೇಕು. ಅಗತ್ಯ ಯೋಜನೆಗಳನ್ನು ಸಿದ್ಧಪಡಿಸಿ ರೈತರ ಸುಸ್ಥಿರ ಬದುಕಿಗೆ ನಾಂದಿ ಹಾಡಬೇಕು. ಇಲ್ಲವಾದಲ್ಲಿ ಹಸಿರು ಕ್ರಾಂತಿ ಎಂಬುದು ಮರೆಯಾಗಿ ಬರೀ ಭ್ರಾಂತಿಯಾಗುವ ಸಂಭವವಿದೆ.

ಇನ್ನು ದೇಶದ ಗಡಿ ಕಾಯುವ ಯೋಧರ ಕುರಿತು ಹೇಳುವುದಾದರೆ ತ್ಯಾಗದ ಮೂರ್ತಿಗಳು ಇವರು. ದೇಶದ ಜನರ ಸೌಖ್ಯಕ್ಕಾಗಿ ಹಗಲಿರುಳು ದೇಶ ರಕ್ಷಣೆ ಮಾಡುತ್ತಾರೆ. ತಿಂಗಳುಗಟ್ಟಲೆ ಕುಟುಂಬ ಸದಸ್ಯರಿಂದ ದೂರ ಉಳಿದು, ದೇಶದ ಜನರು ನೆಮ್ಮದಿಯಾಗಿ ನಿದ್ರಿಸಲು ಅವರು ನಿದ್ರೆಯಿಂದ ವಂಚಿತರಾಗುತ್ತಿರುತ್ತಾರೆ. ದುರ್ಗಮ ಪ್ರದೇಶಗಳಲ್ಲಿ ಅತಿಹೆಚ್ಚು ಬಿಸಿಲಿನ ತಾಪವಾಗಲಿ, ಕನಿಷ್ಠ ತಾಪಮಾನವೇ ಇರಲಿ ಯಾವುದಕ್ಕೂ ಎದೆಗುಂದದೆ, ಶತ್ರು ರಾಷ್ಟ್ರಗಳ ದಿಢೀರ್ ದಾಳಿಗೆ ಸದಾ ಎಚ್ಚರದಿಂದ ಎದುರಿಸಲು ಎದೆ ಒಡ್ಡಿ ನಿಂತಿರುತ್ತಾರೆ. ಜೀವ ಹಾಗೂ ಜೀವನ ಎರಡೂ ಅವರಿಗೆ ಅನಿಶ್ಚಿತತೆ ಇರುತ್ತದೆ. ಶತ್ರು ಸೈನಿಕರ ಗುಂಡಿಗೆ ಎದೆ ಒಡ್ಡುವ ಗುಂಡಿಗೆ ಯೋಧರಿಗೆ ಮಾತ್ರ ಇರುವುದು. ದೇಶಸೇವೆಯಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲುವ ಯೋಧರಿಗೆ ಎಷ್ಟು ನಮಿಸಿದರೂ ಕಡಿಮೆಯೇ!

ಯೋಧನಾಗುವುದು ಎಂದರೆ ಸರ್ಕಾರಿ ಸವಲತ್ತನ್ನು ಪಡೆಯುವುದು ಎಂದು ತುಂಬಾ ಜನ ತಪ್ಪು ತಿಳಿದಿದ್ದಾರೆ. ಯೋಧರ ಹುದ್ದೆಗೆ ಅಷ್ಟು ಸುಲಭವಾಗಿ ಆಯ್ಕೆ ಮಾಡುವುದಿಲ್ಲ. ಆಯ್ಕೆಯಾದರೂ ಕಠಿಣ ತರಬೇತಿ ಪಡೆಯಬೇಕಾಗಿರುತ್ತದೆ. ರಕ್ಷಣಾ ಇಲಾಖೆ ಸೂಚಿಸುವ ಸ್ಥಳಕ್ಕೆ ನಿಯೋಜನೆಗೊಂಡು ಮೈಯೆಲ್ಲಾ ಕಣ್ಣಾಗಿ ಸೇವೆ ಸಲ್ಲಿಸುವ ಅನಿವಾರ್ಯತೆ ಇರುತ್ತದೆ. ಯೋಧನಾಗುವುದು ಹೆಮ್ಮೆಯ ಸಂಗತಿಯೇ ಸರಿ.

ಯೋಧರ ಹೋರಾಟ, ಕಷ್ಟದ ಪರಿಸ್ಥಿತಿ, ಪ್ರಾಣ ತ್ಯಾಗದ ಕುರಿತು ಹೇಳಬೇಕಾದರೆ ಇಬ್ಬರು ಮಹನೀಯರನ್ನು ನೆನೆಯಬೇಕು. ಒಬ್ಬರು ಕ್ಯಾಪ್ಟನ್ ಅಭಿನಂದನ್, ಮತ್ತೊಬ್ಬರು ಕರ್ನಾಟಕದವರೇ ಆದ ಶ್ರೀ ಹನುಮಂತಪ್ಪ ಕೊಪ್ಪದ್. ಕ್ಯಾಪ್ಟನ್ ಅಭಿನಂದನ್ ವಾಯುಸೇನೆಯ ಪೈಲಟ್. ಅನುಭವಿ ಯೋಧರಾದ ಇವರು 2019ರಲ್ಲಿ ಪಾಕಿಸ್ತಾನದ ಗಡಿರೇಖೆ ಮೀರಿ ಏರ್‌ಸ್ಟ್ರೈಕ್ ನಡೆಸಿ ಶತ್ರು ರಾಷ್ಟ್ರದ ಎದೆ ನಡುಗುವಂತೆ ಮಾಡಿದವರು. ಅಚಾನಕ್ ಆಗಿ ವಿಮಾನ ಪತನವಾದ ಕಾರಣಕ್ಕೆ ಪಾಕಿಸ್ತಾನ ಸೈನಿಕರ ಕೈಗೆ ಸಿಕ್ಕಿ ಬೀಳುತ್ತಾರೆ. ಇವರನ್ನು ಕಳುಹಿಸುವಂತೆ ಭಾರತ ಸರ್ಕಾರ ಪಾಕಿಸ್ತಾನದ ಮೇಲೆ ಒತ್ತಡ ಹಾಕುತ್ತದೆ. ಭಾರತ ರಕ್ಷಣಾ ಪಡೆಯ ಶಕ್ತಿ ಅರಿತಿದ್ದ ಆ ರಾಷ್ಟ್ರದ ಸೇನಾ ಮುಖ್ಯಸ್ಥರು ಸುರಕ್ಷಿತವಾಗಿ ಅಭಿನಂದನ್ ಅವರನ್ನು ಭಾರತಕ್ಕೆ ಒಪ್ಪಿಸುತ್ತಾರೆ. ಶತ್ರು ರಾಷ್ಟ್ರದ ನೆಲೆಯ ಮೇಲೆ ಹಾರಾಟ ನಡೆಸಿ ದಾಳಿ ನಡೆಸುವುದು ಎಂಬುದು ಸುಲಭದ ಮಾತಲ್ಲ. ಈ ಧೈರ್ಯ ತೋರಿದ ಅಭಿನಂದನ್ ಅವರಿಗೆ 'ವೀರ ಚಕ್ರ' ಪ್ರಶಸ್ತಿ ಪ್ರದಾನ ಮಾಡಿ ಭಾರತ ಸರ್ಕಾರವು ಗೌರವಿಸುತ್ತದೆ. ಸೇನೆಯಲ್ಲಿನ ಹೋರಾಟ ಎಂದರೆ ಸಾವು ಬದುಕಿನ ನಡುವೆ ಸೆಣಸಾಟ. ಅಭಿನಂದನ್ ಅವರ ಹೋರಾಟ ಹಾಗೂ ಸಾಧನೆ ನಿಜಕ್ಕೂ ಅಭಿನಂದನೀಯ.

ಹಾಗೆಯೆ 2016ರಲ್ಲಿ ಸಿಯಾಚಿನ್ ಗಡಿ ಪ್ರದೇಶದಲ್ಲಿ ಹಿಮಪಾತಕ್ಕೆ ಸಿಲುಕಿ 6 ದಿನಗಳ ಕಾಲ ಹಿಮದಲ್ಲಿ ಹೂತು ಹೋಗಿದ್ದವರು ಯೋಧ ಹನುಮಂತಪ್ಪ ಕೊಪ್ಪದ. ಇವರು ಕರ್ನಾಟಕ ರಾಜ್ಯದ ಹುಬ್ಬಳ್ಳಿಯ ಬೆಟದೂರಿನವರು ಎಂಬುದು ಹೆಮ್ಮೆಯ ವಿಷಯ. ಸೇನಾಕಾರ್ಯದಲ್ಲಿ ನಿರತರಾಗಿದ್ದ ಸಂದರ್ಭದಲ್ಲಿ ಅನಿರೀಕ್ಷಿತ ಹಿಮಪಾತಕ್ಕೆ ಸಿಲುಕಿದ ಹನುಮಂತಪ್ಪ ಹಿಮದ ಅಡಿಯಲ್ಲಿ ಸಿಲುಕುತ್ತಾರೆ. ಇವರು ಹುದುಗಿ ಹೋಗಿದ್ದ ಸ್ಥಳವನ್ನು ಗುರುತಿಸಿ ಹೊರಗೆ ತೆಗೆಯಲು ಸುಮಾರು 6 ದಿನಗಳು ಹಿಡಿಯುತ್ತದೆ. 6 ದಿನಗಳ ಕಾಲ ಉಸಿರನ್ನು ಬಿಗಿ ಹಿಡಿದಿದ್ದ ಹನುಮಂತಪ್ಪ ಅವರ ಮನೋಸ್ಥೈರ್ಯವನ್ನು ಮೆಚ್ಚಬೇಕು. ತಕ್ಷಣವೇ ಅವರಿಗೆ ತುರ್ತು ಚಿಕಿತ್ಸೆಯನ್ನು ನೀಡಲಾಗುತ್ತದೆ. ದೆಹಲಿ ಸೇನಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿಸಿದರೂ ಸಹ ಫಲಕಾರಿಯಾಗದೆ 2016 ಫೆಬ್ರವರಿ 11ರಂದು ಕೊನೆಯುಸಿರೆಳೆಯುತ್ತಾರೆ. 14 ವರ್ಷಗಳ ಕಾಲ ಸೈನಿಕ ಸೇವೆಯಲ್ಲಿ 10 ವರ್ಷಗಳ ಕಾಲ ಕಠಿಣ ಸ್ಥಳಗಳಲ್ಲಿಯೇ ಕಾರ್ಯನಿರ್ವಹಿಸಿದ ಹೆಗ್ಗಳಿಕೆ ಹನುಮಂತಪ್ಪ ಅವರದು.

ಇಂದು ಅನೇಕ ಬೇಜವಾಬ್ದಾರಿ ಯುವಕರು ದುಡಿಯುವ ಶಕ್ತಿ ಇದ್ದರೂ ದುಡಿಯದೇ ಅಪ್ಪ ಅಮ್ಮನ ಹಣದಲ್ಲಿ ದುಶ್ಚಟಗಳಿಗೆ ಹಣ ವ್ಯಯಿಸಿ, ದೇಶಕ್ಕೆ ಹೊರೆಯಾಗಿ ಬದುಕುತ್ತಿರುವ ಕಾಲಘಟ್ಟದಲ್ಲಿ ಹನುಂತಪ್ಪ ಕೊಪ್ಪದ್ ಅಂತಹ ಸಾವಿರಾರು ಸೈನಿಕರು ದೇಶದ ಹಿತಕ್ಕಾಗಿ ದುಡಿಯುತ್ತಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ.

ಡಿಸೆಂಬರ್ 23ರಂದು 'ಕಿಸಾನ್ ದಿವಸ್' ಅಂತಲೂ ಜನವರಿ 15 ರಂದು 'ಸೇನಾ ದಿವಸ್' ಅಂತಲೂ ಆಚರಿಸಲಾಗುತ್ತದೆ. ಆದರೆ ರೈತ ಹಾಗೂ ಯೋಧರ ದಿನಾಚರಣೆಯನ್ನು ನಾವು ನಿತ್ಯವೂ ಆಚರಿಸಬೇಕು. ವರ್ಷಕ್ಕೊಮ್ಮೆ ನೆನೆಯುವ ಮಹನೀಯರಲ್ಲ ಅವರು, ನಿತ್ಯವೂ ನೆನೆಯುವ ಮಹಾತ್ಮರು ಅವರು. ಎಲ್ಲರೂ ನಿತ್ಯ ದೇವರಿಗೆ ಪ್ರಾರ್ಥನೆ ಸಲ್ಲಿಸುವಾಗ ರೈತರು ಹಾಗೂ ಸೈನಿಕರ ಸೌಖ್ಯಕ್ಕಾಗಿ ಪ್ರಾರ್ಥಿಸುವ ಅಗತ್ಯವಿದೆ. ಅವರು ಸೌಖ್ಯವಾಗಿದ್ದಷ್ಟು ಇತರೆ ಜನ ಸುಖ ಸಂತೋಷದಿಂದ ಇರಬಹುದು. ಅವರಿಬ್ಬರು ಎಚ್ಚರ ತಪ್ಪಿದರೆ ಇತರರಿಗೆ ಬದುಕುವ ಅವಕಾಶವೇ ಇರುವುದಿಲ್ಲ. ಜೈ ಜವಾನ್, ಜೈ ಕಿಸಾನ್.

ಪದ ತಾಂಬೂಲ: **ರೈತ ಕೈಕೊಟ್ಟರೆ ಅನ್ಯರು ಅನ್ನ ಮರೆಯಬೇಕು, ಯೋಧ ಮೈಮರೆತರೆ ಅನ್ಯರು ನಿದ್ರೆಯನ್ನೇ ಮರೆಯಬೇಕು.**

ನಕಲಿ ಕಾರ್ಮಿಕರ ಕಾರ್ಯಾಚರಣೆ ಮುಗಿದ ನಂತರ ಕಾರ್ಮಿಕರಿಗೆ ನೂತನ ಯೋಜನೆ ಜಾರಿಗೆ ಸರ್ಕಾರ ಚಿಂತನೆ

ಕಾರ್ಮಿಕರ ಕೇಂದ್ರ ಸಂಘದ ಕಾರ್ಯಕಾರಿಣಿ ಸಭೆಯಲ್ಲಿ ರಾಜ್ಯಾಧ್ಯಕ್ಷ ಪಿ.ರಾಜು ಮಾಹಿತಿ

ಮೈಸೂರು, ಜೂ.23(ಜಿಎ)–ರಾಜ್ಯದಲ್ಲಿ ನಡೆಯುತ್ತಿರುವ ನಕಲಿ ಕಾರ್ಮಿಕರ ಕಾರ್ಯಾಚರಣೆ ಮುಕ್ತಾಯವಾದ ನಂತರ ಕಾರ್ಮಿಕರಿಗೆ ನೂತನ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ಚಿಂತಿಸಿದೆ ಎಂದು ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಕೇಂದ್ರ ಸಂಘದ ರಾಜ್ಯಾಧ್ಯಕ್ಷ ಪಿ.ರಾಜು ತಿಳಿಸಿದರು.

ಮೈಸೂರಿನ ಸರ್ಕಾರಿ ಅತಿಥಿ ಗೃಹ ಜಲದರ್ಶಿನಿಯಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಕೇಂದ್ರ ಸಂಘದ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ನಕಲಿ ಕಾರ್ಮಿಕರ ನಿರ್ಮೂಲನೆಗೆ ಕಾರ್ಮಿಕ ಸಚಿವರಾದ ಅನಿಲ್ ಲಾಡ್ ಅವರಿಗೆ ತಿಳಿಸಲಾಗಿತ್ತು. ಅದರಂತೆ ಕಾರ್ಮಿಕರ ಆಧಾರ್ ಕಾರ್ಡ್ ಮೂಲಕ ನಕಲಿ ಕಾರ್ಮಿಕರನ್ನು ತಡೆಗಟ್ಟಬಹುದು ಎಂಬ ಸಲಹೆಯನ್ನು ಸಚಿವರು ಸ್ವೀಕರಿಸಿ ಆ ಮೂಲಕ ಕಾರ್ಯಾಚರಣೆಗೆ ಮುಂದಾಗಿದ್ದಾರೆ ಎಂದು ತಿಳಿಸಿದರು.

ನಕಲಿ ಕಾರ್ಮಿಕರ ಹಾವಳಿಯಿಂದ ಈ ಹಿಂದೆ ಕಾರ್ಮಿಕರ ಮಕ್ಕಳಿಗೆ ನೀಡುತ್ತಿದ್ದ ಪ್ರೋತ್ಸಾಹ ಧನವನ್ನು ಸಚಿವರು ಕಡಿತಗೊಳಿಸಿದ್ದಾರೆ. ಕಾರ್ಮಿಕರು ನೋಂದಣಿ ಮಾಡಿಕೊಂಡಾಗ 25,30,000 ಕಾರ್ಮಿಕರು ಇದ್ದರು. ಈಗ ಅದು 50 ಲಕ್ಷ ದಾಟಿರುವ ಕಾರಣ ಪ್ರೋತ್ಸಾಹ ಧನವನ್ನು ಕಡಿತಗೊಳಿಸಿದ್ದಾರೆ. ನಕಲಿ ಕಾರ್ಮಿಕರ ಕಾರ್ಯಾಚರಣೆ ಮುಕ್ತಾಯವಾದ ನಂತರ ಕಾರ್ಮಿಕರಿಗೆ ನೂತನ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ಚಿಂತಿಸಿದೆ. ಹೀಗಾಗಿ ಸಂಘ ನವೀಕರಣಗೊಂಡ ನಂತರ ಮುಖ್ಯಮಂತ್ರಿಗಳು ಮತ್ತು ಕಾರ್ಮಿಕ ಸಚಿವರನ್ನು ಭೇಟಿ ಮಾಡಿ ಸಮಸ್ಯೆಗಳ ಬಗ್ಗೆ ಮನವರಿಕೆ ಮಾಡಿಕೊಡುತ್ತೇವೆ ಎಂದು ತಿಳಿಸಿದರು. ಈ ಸಂದರ್ಭ ವಿವಿಧ ಜಿಲ್ಲೆಯ ನೂತನ ಜಿಲ್ಲಾಧ್ಯಕ್ಷರಿಗೆ ನೇಮಕಾತಿ ಪತ್ರ ವಿತರಿಸಿದರು.



ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಕೇಂದ್ರ ಸಂಘದ ಕಾರ್ಯಕಾರಿಣಿ ಸಭೆಯನ್ನು ಭಾನುವಾರ ನಡೆಸಲಾಯಿತು.

ಸಭೆಯಲ್ಲಿ ರಾಜ್ಯ ಕಾರ್ಯಾಧ್ಯಕ್ಷರಾದ ಸುವರ್ಣಮ್ಮ (ದಾವಣಗೆರೆ), ಕಚೇರಿ ಕಾರ್ಯದರ್ಶಿ ಚಂದ್ರಶೇಖರ (ಅಶೋಕಪುರಂ), ಮೈಸೂರು ಜಿಲ್ಲಾಧ್ಯಕ್ಷ ನಂಜುಂಡಸ್ವಾಮಿ, ಚಾಮರಾಜನಗರ ಜಿಲ್ಲಾಧ್ಯಕ್ಷ ಕುಮಾರಚಾರಿ, ಹಾಸನ ಜಿಲ್ಲಾಧ್ಯಕ್ಷ ಲೋಕೇಶ್ ಕುಮಾರ್, ತುಮಕೂರು ಜಿಲ್ಲಾಧ್ಯಕ್ಷ ಗುರುಪ್ರಸಾದ್, ದಾವಣಗೆರೆ ಜಿಲ್ಲಾಧ್ಯಕ್ಷ ಬಸವರಾಜು, ಬಳ್ಳಾರಿ ಜಿಲ್ಲಾಧ್ಯಕ್ಷ ಅಂಜನೇಯ, ಶಿವಮೊಗ್ಗ ಜಿಲ್ಲಾಧ್ಯಕ್ಷೆ ಶ್ವೇತ, ಬಾಗಲಕೋಟೆ ಜಿಲ್ಲಾಧ್ಯಕ್ಷ ರಾಜಶೇಖರ ಮಂಗಳೂರು, ವಿಜಯಪುರ ಜಿಲ್ಲಾಧ್ಯಕ್ಷ ಸಾಗರ್, ಗದಗ ಜಿಲ್ಲಾಧ್ಯಕ್ಷ ಬಸಪ್ಪ ಕುರಿ, ಕೊಪ್ಪಳ ಜಿಲ್ಲಾಧ್ಯಕ್ಷ ರಾಕೇಶ್, ಕಲ್ಬುರ್ಗಿ ಜಿಲ್ಲಾಧ್ಯಕ್ಷೆ ಚಂದ್ರಕಲಾ ಪಿ.ಪಾಟೀಲ, ಧಾರವಾಡ ಜಿಲ್ಲಾಧ್ಯಕ್ಷ ಮಂಜುನಾಥ, ಬೀದರ್ ಜಿಲ್ಲಾಧ್ಯಕ್ಷ ಸಂತೋಷ ಶಿರಗೇರಿ, ಹಾವೇರಿ ಜಿಲ್ಲಾಧ್ಯಕ್ಷೆ ಜ್ಯೋತಿ ಮಂಜುನಾಥ್, ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೋಮಣ್ಣ, ಸುರೇಶ್, ಶಿರಗುಪ್ಪ ತಾಲೂಕು ಅಧ್ಯಕ್ಷ ಶಿವಪ್ಪ, ಕರಗೂಡು ತಾಲೂಕು ಅಧ್ಯಕ್ಷ ಮೂರ್ತಿ, ಕಂಪ್ಲಿ ತಾಲೂಕು ಅಧ್ಯಕ್ಷ ಅಂಜಿನೇಯ, ದಯಾನಂದ ಸೇರಿದಂತೆ ಪದಾಧಿಕಾರಿಗಳು ಇನ್ನಿತರರು ಭಾಗವಹಿಸಿದ್ದರು.

ಡಿಪ್ಲೊಮಾ ಕೋರ್ಸುಗಳಿಗೆ ಅರ್ಜಿ ಆಹ್ವಾನ

ಮೈಸೂರು, ಜೂ.23– 2024–25ನೇ ಸಾಲಿನಲ್ಲಿ ಮೈಸೂರಿನ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್‌ನಲ್ಲಿ ಲ್ಯಾಟರಲ್ ಎಂಟ್ರಿ ಸ್ಕೀಂನಡಿ ನೇರವಾಗಿ 2ನೇ ವರ್ಷ/3ನೇ ಸೆಮಿಸ್ಟರ್ ಡಿಪ್ಲೊಮಾ ಕೋರ್ಸುಗಳಿಗೆ 02 ವರ್ಷಗಳ ಐ.ಟಿ.ಐ/ದ್ವಿತೀಯ ಪಿಯುಸಿ (ವಿಜ್ಞಾನ)/ದ್ವಿತೀಯ ಪಿಯುಸಿ (ತಾಂತ್ರಿಕ ವಿಷಯಗಳಲ್ಲಿ) ಉತ್ತೀರ್ಣರಾಗಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರಾಂಶುಪಾಲರ ಹಂತದಲ್ಲಿ ಆಫ್‌ಲೈನ್ ಮೂಲಕ ಪ್ರವೇಶವನ್ನು ನೀಡಲಾಗುವುದು. ಇಲಾಖೆಯ ಅಧಿಕೃತ ವೆಬ್‌ಸೈಟ್‌ಗಳಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯನ್ನು ಮೈಸೂರಿನ ಸರ್ಕಾರಿ ಸಿ.ಪಿ.ಸಿ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಿಗೆ ಜೂ.25ರ ಸಂಜೆ 5 ಗಂಟೆಯೊಳಗೆ ಸಲ್ಲಿಸಬಹುದು. ಮಾಹಿತಿಗೆ www.dtek.karnataka.gov.in ಅಥವಾ www.dtetech.karnataka.gov.in/kartechnical ಅನ್ನು ಸಂಪರ್ಕಿಸಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ದೇಶ - ವಿದೇಶ

ಬಾಹ್ಯಾಕಾಶ ಅವಶೇಷ ಬಿದ್ದು ಮನೆ ಧ್ವಂಸ: ನಾಸಾ ವಿರುದ್ಧ ಕೋರ್ಟ್ ಮೆಟ್ಟಿಲೇರಿದ ಅಮೆರಿಕ ಕುಟುಂಬ

ಫ್ಲೋರಿಡಾ (ಅಮೆರಿಕ): ಆ ಕುಟುಂಬ ರಾತ್ರಿಯ ನೀರವತೆಯಲ್ಲಿ ನೆಮ್ಮದಿಯಾಗಿ ಮನೆಯಲ್ಲಿದ್ದರು. ಆದರೆ ಇದ್ದಕ್ಕಿದ್ದಂತೆಯೇ ಭಾರಿ ಶಬ್ದವಾಯ್ತು.



ಮನೆಯ ಚಾವಣಿಯೇ ಕುಸಿದು ಬಿದ್ದಿತ್ತು. ತಮ್ಮ ಮನೆಯ ಮೇಲೆ ವಿಮಾನವೇನಾದರೂ ಬಿತ್ತಾ ಎಂದು ಗಾಬರಿಯಿಂದ ಪರಿಶೀಲನೆ ನಡೆಸಿದಾಗ ಅದೊಂದು ಲೋಹದ ಸಿಲಿಂಡರ್ ಎಂದು ಖಾತರಿಯಾಯ್ತು. ಮನೆಯ ಚಾವಣಿಯಲ್ಲಿ ದೊಡ್ಡದೊಂದು ತೂತಾಗಿತ್ತು. ಇದಕ್ಕೆಲ್ಲಾ ಕಾರಣ ನಾಸಾ ಮಾಡಿದ ಎಡವಟ್ಟು. ಅಮೆರಿಕದ ಫ್ಲೋರಿಡಾ ರಾಜ್ಯದ ನೇಪಲ್ಸ್ ನಗರದಲ್ಲಿ ವಾಸಿಸುತ್ತಿರುವ ಅಲೆಜಾಂಡ್ರೊ ಒಟೆರೊ ಎಂಬುವರ ಮನೆ ಮೇಲೆ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ರವಾನೆ ಆಗುತ್ತಿದ್ದ ಉಪಕರಣಗಳು ಬಿದ್ದಿದ್ದವು. ಈ ವೇಳೆ ಮನೆಯ ಮೇಲಂತಸ್ತಿನಲ್ಲಿ ಇದ್ದ ಅಲೆಜಾಂಡ್ರೊ ಒಟೆರೊ ಅವರ ಮಗನಿಗೂ ಗಾಯಗಳಾಗಿದ್ದವು. ಮನೆಯ ತಾರಸಿ ಧ್ವಂಸವಾಗಿತ್ತು.

ಈ ಪ್ರಕರಣ ಬೆಳಕಿಗೆ ಬಂದ ಕೂಡಲೇ ಅಮೆರಿಕದ ಪ್ರತಿಷ್ಠಿತ ಬಾಹ್ಯಾಕಾಶ ಸಂಸ್ಥೆ ನಾಸಾದ ತಜ್ಞರು ಅಲೆಜಾಂಡ್ರೊ ಒಟೆರೊ ಅವರ ಮನೆಗೆ ಧಾವಿಸಿ ಬಂದರು. ಅವರ ಮನೆ ಮೇಲೆ ಬಿದ್ದ ಉಪಕರಣವನ್ನು ಕೆನಡಿ ಬಾಹ್ಯಾಕಾಶ ಪ್ರಯೋಗಾಲಯದಲ್ಲಿ ಪರಿಶೀಲಿಸಿದ ವೇಳೆ ಇದು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿರುವ ಗಗನ ನೌಕೆಯ ಬಿಡಿ ಭಾಗ ಎಂದು ಖಾತರಿಯಾಯ್ತು. ಈ ಹಿನ್ನೆಲೆಯಲ್ಲಿ ಅಲೆಜಾಂಡ್ರೊ ಒಟೆರೊ ಅವರು ನಾಸಾ ವಿರುದ್ಧ ನ್ಯಾಯಾಲಯದಲ್ಲಿ ಕೇಸ್ ದಾಖಲಿಸಿದ್ದಾರೆ. ನಾಸಾದ ಬೇಜವಾಬ್ದಾರಿಯಿಂದಾಗಿ ವಿಮೆ ಮಾಡಿಸದ ತಮ್ಮ ಮನೆಯ ಮೇಲೆ ಬಾಹ್ಯಾಕಾಶ ಅವಶೇಷ ಬಿದ್ದಿದೆ. ಹೀಗಾಗಿ ಮನೆಯ ತಾರಸಿ ಧ್ವಂಸ ಆಗುವ ಜೊತೆಯಲ್ಲೇ 2 ಕೊಠಡಿಗಳಿಗೂ ಹಾನಿಯಾಗಿದೆ. ನನ್ನ ಮಗ ಅಪಾಯದಿಂದ ಪಾರಾಗಿದ್ದಾನೆ ಎಂದು ದೂರಿನಲ್ಲಿ ವಿವರಿಸಿದ್ದಾರೆ. ಅಷ್ಟೇ ಅಲ್ಲ, ಇಂಥಾದ್ದೊಂದು ಎಡವಟ್ಟು ಮಾಡಿದ ನಾಸಾ, ನಷ್ಟ ಭರಿಸಲು 80 ಸಾವಿರ ಅಮೆರಿಕನ್ ಡಾಲರ್ ಪರಿಹಾರ ನೀಡಬೇಕು ಎಂದೂ ವಾದಿಸಿದ್ದಾರೆ.

ಬಿಜೆಪಿ ಮುಖಂಡನ ನಡುರಸ್ತೆಯಲ್ಲಿ ಗುಂಡಿಕ್ಕಿ ಕೊಲೆಗೈದ ಆಗಂತುಕರು!

ಇಂದೋರ್: ಮಧ್ಯಪ್ರದೇಶದಲ್ಲಿ ಬಿಜೆಪಿ ಮುಖಂಡನೊಬ್ಬನನ್ನು ಗುಂಡಿಕ್ಕಿ ಹತ್ಯೆ ಮಾಡಿರುವ ಘಟನೆ ಮಧ್ಯಪ್ರದೇಶದ ಇಂದೋರ್‌ನ ಎಂಜಿ ರೋಡ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಜೂನ್ 23ರ ಭಾನುವಾರ ಮುಂಜಾನೆ ಮೋನು ಕಲ್ಯಾಣ್ ಮೇಲೆ ಗುಂಡು ಹಾರಿಸಲಾಗಿದ್ದು, ಗುಂಡಿನ ದಾಳಿ ನಡೆದ ತಕ್ಷಣ ಮೋನು ಅವರನ್ನು ಅವರ ಸ್ನೇಹಿತರು ಆಸ್ಪತ್ರೆಗೆ ಕರೆದೊಯ್ದರು, ಆದರೆ ಅಲ್ಲಿ ಅವರು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದರು ಎಂದು ವೈದ್ಯರು ತಿಳಿಸಿದ್ದಾರೆ. ಹಳೆ ವೈಷಮ್ಯದಿಂದ ಪಿಯೂಷ್ ಮತ್ತು ಅರ್ಜುನ್ ಎಂಬ ಆರೋಪಿಗಳು ಗುಂಡು ಹಾರಿಸಿಕೊಂದಿದ್ದಾರೆ ಎನ್ನಲಾಗಿದೆ.

ಮೋನು ಅವರು ಕಾರ್ಯಕ್ರಮವೊಂದರ ಸಿದ್ಧತೆ ಮುಗಿಸಿ ಮನೆಗೆ ಮರಳುತ್ತಿದ್ದಾಗ ಈ ಘಟನೆ ನಡೆದಿದೆ. ದಾಳಿಕೋರರಿಬ್ಬರೂ ಬೈಕ್‌ನಲ್ಲಿ ಬಂದಿದ್ದರು ಎಂದು ಹೇಳಲಾಗುತ್ತಿದೆ. ಆರಂಭದಲ್ಲಿ ಆರೋಪಿಗಳು ಮೋನು ಜೊತೆ ಮಾತನಾಡ ತೊಡಗಿದ್ದಾರೆ. ಇದೇ ವೇಳೆ ಬೈಕ್‌ನಲ್ಲಿ ಹಿಂದೆ ಕುಳಿತಿದ್ದ ಅರ್ಜುನ್, ಮೋನು ಮೇಲೆ ಗುಂಡು ಹಾರಿಸಿದ್ದಾನೆ. ಮೋನು ಹೊರತಾಗಿ ಆತನ ಸ್ನೇಹಿತರ ಮೇಲೂ ಗುಂಡಿನ ದಾಳಿ ನಡೆದಿದ್ದು, ಅವರು ಪರಾರಿಯಾಗಿದ್ದಾರೆ ಎಂಬ ಮಾಹಿತಿಯೂ ಬೆಳಕಿಗೆ ಬಂದಿದೆ. ಮೃತ ಬಿಜೆಪಿ ಮುಖಂಡ ಮೋನು ಕಲ್ಯಾಣ್ ಅವರು ಸಚಿವ ಕೈಲಾಶ್ ವಿಜಯವರ್ಗಿಯ ಅವರಿಗೆ ಅತ್ಯಂತ ಆತ್ಮೀಯರಾಗಿದ್ದರು.

ಬ್ಯಾಂಕ್ ಸಿಇಓನ ಬಲೆಗೆ ಬೀಳಿಸಿಕೊಂಡು 4 ಕೋಟಿ ರೂ. ದೋಚಿದ ಸುರಸುಂದರಿ!

ಮುಂಬೈ: ಪ್ರಪಂಚದಲ್ಲಿ ಅತ್ಯಂತ ಶಕ್ತಿಯುತ ವಿಷಯಗಳೆಂದರೆ ಹಣ ಮತ್ತು ಸೌಂದರ್ಯ ಎನ್ನಲಾಗುತ್ತದೆ. ಬಹುತೇಕ ಅಪರಾಧ ಪ್ರಕರಣಗಳ ಹಿಂದಿನ ಕಾರಣವೂ ಇವೇ ಆಗಿರುತ್ತದೆ. ಹೆಣ್ಣು ತನ್ನ ಅಂದವನ್ನೇ ಬಳಸಿಕೊಂಡು ವಂಚಿಸುವ ಪ್ರಕರಣಗಳು ಇಂದಿನ ಡಿಜಿಟಲ್ ಯುಗದಲ್ಲಿ ಹೆಚ್ಚಾಗಿದೆ ಅಂತಲೇ ಹೇಳಬಹುದು. ಇದಕ್ಕೆ ತಾಜಾ ಉದಾಹರಣೆ ಮುಂಬೈನಲ್ಲಿ ನಡೆದಿರುವ ಘಟನೆ. ಸುರಸುಂದರಿಯೊಬ್ಬಳು ಲೋನ್ ಪಡೆಯುವ ನೆಪದಲ್ಲಿ ಬ್ಯಾಂಕ್ ಸಿಇಓಗೆ ಹತ್ತಿರವಾಗಿದ್ದಾಳೆ. ಆತನನ್ನು ಬಲೆಗೆ ಬೀಳಿಸಿಕೊಂಡು ಬರೋಬ್ಬರಿ 4 ಕೋಟಿ ಹಣ ದೋಚಿದ್ದಾಳಂತೆ. ಪ್ರಕರಣದ ಸಂಪೂರ್ಣ ಮಾಹಿತಿ ಇಲ್ಲಿದೆ.

ಆರಂಭದಲ್ಲಿ ಆರ್ಥಿಕ ಸಂಕಷ್ಟದಲ್ಲಿದ್ದ ಕಾರಣ ಸಾಲದ ಅವಶ್ಯಕತೆ ಇದೆ ಎಂದು ನಿವೃತ್ತ ಸಿಇಓ ಬಳಿ ಮಹಿಳೆ ಹೇಳಿದ್ದಳು. ಅಗತ್ಯವಾದ ದಾಖಲೆಗಳನ್ನು ಪರಿಶೀಲಿಸಲು ಆಕೆಯ ಕೋಣೆಗೆ ಹೋದಾಗ ಮಹಿಳೆ ತನ್ನನ್ನು ಒತ್ತಾಯಿಸಿ ತನ್ನ ಒಪ್ಪಿಗೆಯೊಂದಿಗೆ ದೈಹಿಕ ಸಂಬಂಧ ಹೊಂದಿದ್ದಳು. ತಿಂಗಳ ನಂತರ 8 ಕೋಟಿ ನೀಡದಿದ್ದರೆ, ವಾಟ್ಸಾಪ್‌ನಲ್ಲಿ ಕಳುಹಿಸಿದ್ದ ತನ್ನ ನಗ್ನ ಫೋಟೋಗಳನ್ನು ಕುಟುಂಬ ಸದಸ್ಯರು ಮತ್ತು ಸಹೋದ್ಯೋಗಿಗಳಿಗೆ ತೋರಿಸುವುದಾಗಿ ಮಹಿಳೆ ವ್ಯಕ್ತಿಗೆ ಬೆದರಿಕೆ ಹಾಕಿದ್ದಳು. ಒತ್ತಡಕ್ಕೆ ಮಣಿದು ದೂರುದಾರರು ಆಕೆಗೆ ಆರಂಭದಲ್ಲಿ 5 ಲಕ್ಷ ಕೊಟ್ಟಿದ್ದರು. ನಂತರ ಪದೇ ಪದೇ ಬ್ಲ್ಯಾಕ್ ಮೇಲ್ ಮಾಡಿ 4 ಕೋಟಿ ವರೆಗೆ ಹಣವನ್ನು ಪಡೆದುಕೊಂಡಿದ್ದಾಳೆ ಎಂದು ನಿವೃತ್ತ ಸಿಇಓ ಹೇಳಿದ್ದಾರೆ.

ಜರ್ಮನಿಯ ಲಿಂಬರ್ಗ್‌ನಲ್ಲಿ ಪಾರಿವಾಳ ಕಾಟ; ಪಾರಿವಾಳ ಕೊಲ್ಲಲು ಜನಮತ

ಬರ್ಲಿನ್: ಜರ್ಮನಿಯ ಸಣ್ಣ ಪಟ್ಟಣ ಲಿಂಬರ್ಗ್‌ನಲ್ಲಿ ಪಾರಿವಾಳಗಳ ಕಾಟ.



ಅದರಿಂದ ಪಾರಾಗಲು ಅವುಗಳನ್ನು ಕೊಲ್ಲಬೇಕೆ ಬೇಡವೇ ಎಂಬುದರ ಬಗ್ಗೆ ಚರ್ಚೆ ನಡೆಯುತ್ತಿತ್ತು. ಇದರ ಬಗ್ಗೆ ಸ್ಥಳೀಯರು ಮತ್ತು ಪ್ರಾಣಿ ಹಕ್ಕುಗಳ ಕಾರ್ಯಕರ್ತರ ನಡುವೆ ಸಮರವೇ ನಡೆಯುತ್ತಿದ್ದು, ಬಹಳ ಕುತೂಹಲಕ್ಕೆ ಕಾರಣವಾಗಿತ್ತು. ಇದಕ್ಕೆ ಜೂ.9ರಂದು ಜನಮತ (ರೆಫರೆಂಡಂ) ಮೂಲಕ ಪರಿಹಾರ ಕಂಡುಕೊಳ್ಳಲಾಗಿದೆ. ಮಧ್ಯ ಜರ್ಮನ್ ಪಟ್ಟಣ ಲಿಂಬರ್ಗ್‌ನ ಅಧಿಕಾರಿಗಳು ಜನಮತ ನಿರ್ವಹಣೆ ಮಾಡಿದ್ದು, ಫಲಿತಾಂಶ ಪ್ರಕಟವಾಗಿದೆ. ಸ್ಥಳೀಯರು ಈ ವಿಚಾರದಲ್ಲಿ ಮೇಲುಗೈ ಸಾಧಿಸಿದ್ದು, ಪ್ರಾಣಿ ಹಕ್ಕುಗಳ ಕಾರ್ಯಕರ್ತರಿಗೆ ಹಿನ್ನಡೆಯಾಗಿದೆ. ಸರಳವಾಗಿ ಹೇಳಬೇಕು ಎಂದರೆ ಪಾರಿವಾಳ ಕೊಲ್ಲಬೇಕು ಎಂಬುದು ಜನಮತವಾಗಿದೆ. ಈಗ ರೆಫರೆಂಡಂ ಸ್ಥಳೀಯರ ಪರವಾಗಿ ಬಂದರೂ, ಅದರ ಅನುಷ್ಠಾನಕ್ಕೆ ಯಾವುದೇ ವೇಳಾಪಟ್ಟಿ ಇಲ್ಲ. ಅನುಷ್ಠಾನಕ್ಕೆ ಮೊದಲು ಮತ್ತೊಂದು ಸಮಗ್ರ ಪ್ರಕರಣವಾರು ಪರಿಶೀಲನೆ ನಡೆಯಲಿದೆ ಎಂಬುದನ್ನು ನಿರ್ಣಯವು ಸೂಚಿಸುತ್ತದೆ ಎಂದು ಪಟ್ಟಣದ ವಕ್ತಾರ ಜೋಹಾನ್ಸ್ ಲಾಬಾಕ್ ತಿಳಿಸಿದ್ದಾಗಿ ಅಸೋಸಿಯೇಟೆಡ್ ಪ್ರೆಸ್ ವರದಿ ಮಾಡಿದೆ.

ಕೆಲಸ ಕೊಡದೆ 20 ವರ್ಷಗಳಿಂದ ಪುಗಸಟ್ಟೆ ಸಂಬಳ; ಕೋರ್ಟ್ ಮೆಟ್ಟಿಲೇರಿದ ಫ್ರಾನ್ಸ್ ಮಹಿಳೆ

ಪ್ಯಾರಿಸ್ (ಫ್ರಾನ್ಸ್): ಕೊಡುವ ಸಂಬಳಕ್ಕಿಂತ ಮೂರು ಪಟ್ಟು ಜಾಸ್ತಿ ದುಡಿಸುತ್ತಾರೆ ಎಂದು ನೌಕರರು ಅಳಲು ತೋಡಿಕೊಳ್ಳುವುದು ಮಾಮೂಲು. ಆದರೆ, ಫ್ರಾನ್ಸ್‌ನಲ್ಲಿ ವಿಚಿತ್ರ ಪ್ರಕರಣವೊಂದು ವರದಿಯಾಗಿದೆ. ಇಲ್ಲಿನ ಮಹಿಳೆಯೊಬ್ಬರಿಗೆ ಟೆಲಿ ಕಮ್ಯುನಿಕೇಷನ್ ಸಂಸ್ಥೆಯೊಂದು ಕಳೆದ 20 ವರ್ಷಗಳಿಂದ ಪೂರ್ಣ ವೇತನ ನೀಡುತ್ತಿದೆ. ಆದರೆ, ಯಾವುದೇ ಕೆಲಸವನ್ನೂ ವಹಿಸುತ್ತಿಲ್ಲವಂತೆ. ಟೆಲಿ ಕಮ್ಯುನಿಕೇಷನ್ ಸಂಸ್ಥೆಯಾದ ಆರೆಂಜ್ ವಿರುದ್ಧ ಲಾರೆನ್ಸ್ ವಾನ್ ವಾಸೆನ್ಹೋವ್ ಎಂಬ ಮಹಿಳೆ ಇದೀಗ ಕೋರ್ಟ್ ಮೆಟ್ಟಿಲೇರಿದ್ದಾರೆ.



1993ರಲ್ಲಿ ಕೆಲಸಕ್ಕೆ ಸೇರಿದ್ದ ಈ ಮಹಿಳೆ 20 ವರ್ಷಗಳ ಹಿಂದೆ ಪಾರ್ಶ್ವವಾಯು ಹಾಗೂ ಅಪಸ್ಮಾರ ಸೇರಿದಂತೆ ಹಲವು ನರರೋಗಗಳಿಗೆ ತುತ್ತಾಗಿದ್ದರು. ಹೀಗಾಗಿ ಆಕೆಗೆ ಸುಗಮವಾಗಿ ಕಾರ್ಯನಿರ್ವಹಿಸಲು ಆಗುವಂಥಾ ಕೆಲಸ ನೀಡಲಾಗಿತ್ತು. ಆರೆಂಜ್ ಸಂಸ್ಥೆಯ ಮಾನವ ಹಕ್ಕು ವಿಭಾಗದಲ್ಲಿ ಕಾರ್ಯದರ್ಶಿಯಾಗಿ ಆಕೆ ಕಾರ್ಯನಿರ್ವಹಿಸುತ್ತಿದ್ದರು. ಆದರೆ, ವೈಯಕ್ತಿಕ ಕಾರಣಗಳಿಂದಾಗಿ 2002ರಲ್ಲಿ ಆಕೆ ಫ್ರಾನ್ಸ್ ದೇಶದ ಬೇರೊಂದು ಪ್ರಾಂತ್ಯಕ್ಕೆ ವರ್ಗಾಯಿಸಿದ್ದರು. ಆರೆಂಜ್ ಸಂಸ್ಥೆ ಲಾರೆನ್ಸ್ ವಾನ್ ವಾಸೆನ್ಹೋವ್ ಅವರಿಗೆ ವರ್ಗಾವಣೆಯ ಸೌಲಭ್ಯವನ್ನೇನೋ ನೀಡಿತು. ಆಕೆಗೆ ಯಾವುದೇ ಕೆಲಸ ನೀಡದೆ ಸುಮ್ಮನೆ ಕೂರಿಸಿತ್ತು. ಈ ಮೂಲಕ ಆರೆಂಜ್ ಸಂಸ್ಥೆ ಲಾರೆನ್ಸ್ ವಾನ್ ವಾಸೆನ್ಹೋವ್ ಅವರಿಗೆ 'ನೈತಿಕ ಹಿಂಸೆ' ನೀಡುತ್ತಿದೆ ಎಂದು ಆಕೆಯ ವಕೀಲರು ಆರೋಪಿಸಿದ್ದಾರೆ.

ವೈದ್ಯಕೀಯ ಶಿಕ್ಷಣದ ಅನುಭವ ಅನಾವರಣಗೊಳಿಸಿದ ಡಾ.ಜಾವೀದ್ ನಯೀಮ್

ಮೈಸೂರು, ಜೂ.23(ಎಂಟಿವೈ)- ಪೋಷಕರ ಮಹದಾಸೆಯಂತೆ ವೈದ್ಯಕೀಯ ಶಿಕ್ಷಣ ಪಡೆಯುವ ಸಲುವಾಗಿ ಪದವಿ ಪೂರ್ವ ಪರೀಕ್ಷೆಯ ಮೊದಲ ಫಲಿತಾಂಶವನ್ನು ಹಿಂಪಡೆದು, ಮತ್ತೊಮ್ಮೆ ಪರೀಕ್ಷೆ ಬರೆದು ಉತ್ತಮ ಅಂಕ ಪಡೆದು ವೈದ್ಯಕೀಯ ಕಾಲೇಜಿಗೆ ಸೇರಿದ್ದಾಗಿ 'ಸ್ಟಾರ್ ಆಫ್ ಮೈಸೂರು' ಅಂಕಣಕಾರ, ಹಿರಿಯ ವೈದ್ಯ ಡಾ. ಕೆ.ಜಾವೀದ್ ನಯೀಮ್ ತಮ್ಮ ವೈದ್ಯಕೀಯ ಜೀವನ ಹಾದಿಯನ್ನು ಮೆಲಕು ಹಾಕಿದರು.

ಮೈಸೂರಿನ ವಿಜಯನಗರದ ನಾಲ್ಕನೇ ಹಂತದಲ್ಲಿರುವ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಮೈಸೂರು ಲಿಟರರಿ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ 'ವೈದ್ಯಕೀಯ ಜೀವನದ ಆರಂಭ' (ಬಿಗಿನಿಂಗ್ ಮೈ ಲೈಫ್ ಇನ್ ಎ ವೈಟ್ ಕೋಟ್) ವಿಷಯ ಕುರಿತು ಮಾತನಾಡಿದ ಅವರು, ನಾನು ವೈದ್ಯನಾಗಬೇಕೆಂದು ನನ್ನ ಪೋಷಕರು ಇಚ್ಛಿಸಿದ್ದರು. ಅದಕ್ಕಾಗಿ ನನಗೆ ಪೋಷಕರು ಪ್ರೋತ್ಸಾಹ ನೀಡುತ್ತಿದ್ದರು. ಆದರೆ, ನಾನು ಸೇಂಟ್ ಫಿಲೋಮಿನಾ ಕಾಲೇಜಿನಲ್ಲಿ ಪದವಿ ಪೂರ್ವ ಶಿಕ್ಷಣ ಪಡೆಯುವಾಗ ಕಡಿಮೆ ಅಂಕ ಬಂದಿತ್ತು. ಈ ಹಿನ್ನೆಲೆಯಲ್ಲಿ ಫಲಿತಾಂಶ ಹಿಂಪಡೆದು ಮತ್ತೆ ಪರೀಕ್ಷೆ ಬರೆಯುವ ಅವಕಾಶ ಇರುವುದನ್ನು ಮನಗಂಡು, ಎರಡನೇ ಬಾರಿ ಪರೀಕ್ಷೆ ಬರೆದು ಹೆಚ್ಚು ಅಂಕ ಪಡೆದು ಗುಲ್ಬರ್ಗಾದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯಲು ಕಾಲೇಜಿಗೆ ದಾಖಲಾದ ಪರಿಯನ್ನು ವಿವರಿಸಿದರು.



ಮೈಸೂರಿನ ವಿಜಯನಗರದ 4ನೇ ಹಂತದಲ್ಲಿರುವ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಮೈಸೂರು ಲಿಟರರಿ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ 'ಬಿಗಿನಿಂಗ್ ಮೈ ಲೈಫ್ ಇನ್ ಎ ವೈಟ್ ಕೋಟ್' ವಿಷಯ ಕುರಿತು 'ಸ್ಟಾರ್ ಆಫ್ ಮೈಸೂರು' ಅಂಕಣಕಾರ, ಹಿರಿಯ ವೈದ್ಯ ಡಾ.ಕೆ.ಜಾವೀದ್ ನಯೀಮ್ ಮಾತನಾಡಿದರು.

ವೈದ್ಯಕೀಯ ಶಿಕ್ಷಣದ ಹಾದಿಯೂ ಕಷ್ಟಕರವಾಗಿತ್ತು. ಈ ಹಿಂದೆ ವೈದ್ಯಕೀಯ ಶಿಕ್ಷಣ ಪಡೆಯಬೇಕಾದರೆ ಪ್ರೀ ಪ್ರೊಫೆಷನ್ ಕೋರ್ಸ್(ಪಿಪಿಸಿ) ಮಾಡಬೇಕಾಗಿತ್ತು. ಅದನ್ನು ಸರ್ಕಾರ ರದ್ದುಗೊಳಿಸಿ, ಪಿಪಿಸಿಗೆ ಬದಲಾಗಿ ಅದಕ್ಕೆ ಪರ್ಯಾಯವಾದ ಪದ್ಧತಿ ಜಾರಿಗೊಳಿಸಿತ್ತು. ಈ ಹಿನ್ನೆಲೆಯಲ್ಲಿ ಬೇರೆ ದಾರಿಯಿಲ್ಲದೆ, ಯುವರಾಜ ಸಂಜೆ ಕಾಲೇಜಿನಲ್ಲಿ ಬಿಎಸ್ಸಿ (ಸಿಬಿಝಡ್) ತೆಗೆದುಕೊಳ್ಳಲು ನಿರ್ಧರಿಸಿದೆ. ಕಾಲೇಜಿಗೆ ಸೈಕಲ್‌ನಲ್ಲಿ ಹೋಗುತ್ತಿದ್ದ ನಾನು ಇತರೆ ವಿದ್ಯಾರ್ಥಿಗಳಂತೆ ತರಗತಿಗೆ ಗೈರು ಹಾಜರಾಗುತ್ತಿದ್ದೆ. ಈ ವೇಳೆ ಅಂದಿನ ಕಾಸ್ಮೋಪಾಲಿಟನ್ ಕ್ಲಬ್ ಕ್ಯಾಂಟೀನ್‌ನಲ್ಲಿ 40 ಪೈಸೆಗೆ ಸಿಗುತ್ತಿದ್ದ ಬಾಯಲ್ಲಿ ನೀರೂರಿಸುವ ಮಸಾಲೆ ದೋಸೆ, 50 ಪೈಸೆಗೆ ಸಿಗುತ್ತಿದ್ದ ಬೆಣ್ಣೆದೋಸೆಯನ್ನು ಸವಿದು, ಕಾಫಿ ಕುಡಿಯಲು ಹೋಗುತ್ತಿದ್ದೆ ಎಂದು ಕಾಲೇಜು ವಿದ್ಯಾರ್ಥಿ ಜೀವನವನ್ನು ಮೆಲಕು ಹಾಕಿದರು.

ಬೆಳಗಾವಿಯ ಎಪಿ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಪಡೆದುಕೊಂಡ ಸಂದರ್ಭದಲ್ಲಿಯೇ ಭಾರತೀಯ ವೈದ್ಯಕೀಯ ಮಂಡಳಿ (ಎಂಸಿಐ) ವೈದ್ಯಕೀಯ ಸೀಟುಗಳನ್ನು 250 ಸೀಟುಗಳಿಂದ 65ಕ್ಕೆ ಇಳಿಸುವ ನಿರ್ಧಾರ ಪ್ರಕಟಿಸಿದ್ದರಿಂದ ಮತ್ತೊಂದು ಬಾರಿ ನಿರಾಸೆಯಾಗಬೇಕಾಯಿತು. ಇದೇ ಸಂದರ್ಭದಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಓದಿದ ವಿದ್ಯಾರ್ಥಿಗಳಿಗೆ ಬಿಎಸ್ಸಿ ಕೋಟಾದಲ್ಲಿ ಮೆಡಿಕಲ್ ಸೀಟ್ ಸಿಗುವ ಕುರಿತು ಅಂದಿನ ಕೆಎಲ್‌ಇ ಅಧ್ಯಕ್ಷ ಬಿ.ವಿ.ಪೈ ಮಾಹಿತಿ ನೀಡಿದರು. ಮೆಡಿಕಲ್ ಕಾಲೇಜಿಗೆ ಸೇರಬೇಕೆಂಬ ಹಂಬಲದಿಂದ ಬಿಎಸ್ಸಿ ಮುಗಿಸಿ, 1975ರ ಆ.8ರಂದು ನಾನು ಗುಲ್ಬರ್ಗದ (ಈಗಿನ ಕಲಬುರ್ಗಿ) ಎಂ.ಆರ್.ಮೆಡಿಕಲ್ ಕಾಲೇಜಿಗೆ ಸೇರುವ ದಿನ ಬಂದೇ ಬಿಟ್ಟಿತು ಎಂದು ತಾವು ವೈದ್ಯಕೀಯ ಶಿಕ್ಷಣ ಪಡೆಯಲು ಎದುರಾದ ಅಡೆತಡೆಗಳು ವಿವರಿಸುತ್ತಾ, ಕೆಲವು ಸಂದರ್ಭದಲ್ಲಿ ಹಾಸ್ಯಭರಿತ ಮಾತುಗಳೊಂದಿಗೆ ತಮ್ಮ ಅನುಭವವನ್ನು ಹಂಚಿಕೊಂಡರು.

ಕಳೆದ ವರ್ಷ(2023) ಜೂ.23ರಂದು ಡಾ.ಜಾವೀದ್ ನಯೀಮ್ ಅವರು 'ನಾನು ಏಕೆ ಮತ್ತು ಹೇಗೆ ವೈದ್ಯನಾದೆ' ಎಂಬ ವಿಷಯ ಕುರಿತು ಮಾತನಾಡಿದ್ದರು. ಇಂದು ನಡೆದ ಕಾರ್ಯಕ್ರಮ ಅದರ ಮುಂದುವರೆದ ಭಾಗವಾಗಿತ್ತು. ಕಾರ್ಯಕ್ರಮಕ್ಕೂ ಮುನ್ನ ಇತ್ತೀಚೆಗೆ ನಿಧನರಾದ ಫೆಲಿಕಾನ್ ಪಬ್‌ನ ಪೊನ್ನು ಮುತ್ತಣ್ಣ ಅವರಿಗೆ ಮೈಸೂರು ಲಿಟರರಿ ಅಸೋಸಿಯೇಷನ್ ವತಿಯಿಂದ ಮೌನಾಚರಣೆ ಆಚರಿಸಿ, ಶ್ರದ್ಧಾಂಜಲಿ ಅರ್ಪಿಸಿದರು.

ಮಹಿಳಾ ಪೇದೆ ಜೊತೆ ನಗ್ನ ಸ್ಥಿತಿಯಲ್ಲಿ ಸಿಕ್ಕಿಬಿದ್ದಿದ್ದ ಪೊಲೀಸ್ ಅಧಿಕಾರಿಗೆ ಹಿಂಬಡ್ತಿ: ಎಸ್‌ಐ ಹುದ್ದೆಯಿಂದ ಕಾನ್‌ಸ್ಟೇಬಲ್

ಕಾನ್ಪುರ: ಉತ್ತರ ಪ್ರದೇಶದಲ್ಲಿ ಹೋಟೆಲ್ ರೂಂನಲ್ಲಿ ಮಹಿಳಾ ಪೇದೆ ಜೊತೆ ಪೊಲೀಸ್ ಉಪ ಅಧೀಕ್ಷಕ ಆಕ್ಷೇಪಾರ್ಹ ಸ್ಥಿತಿಯಲ್ಲಿ ಸಿಕ್ಕಿಬಿದ್ದ ಹಿನ್ನೆಲೆಯಲ್ಲಿ ಅವರಿಗೆ ಹಿಂಬಡ್ತಿ ನೀಡಲಾಗಿದೆ. ಉತ್ತರ ಪ್ರದೇಶ ಪೊಲೀಸ್ ಉಪ ಅಧೀಕ್ಷಕ ಕೃಪಾ ಶಂಕರ್ ಕನೌಜಿಯಾಗೆ ಈಗ ಕಾನ್‌ಸ್ಟೇಬಲ್ ಹುದ್ದೆ ನೀಡಲಾಗಿದೆ.

ಹೋಟೆಲ್‌ನಲ್ಲಿ ಮಹಿಳಾ ಕಾನ್‌ಸ್ಟೇಬಲ್‌ನೊಂದಿಗೆ ಆಕ್ಷೇಪಾರ್ಹ ಸನ್ನಿವೇಶದಲ್ಲಿ ಸಿಕ್ಕಿಬಿದ್ದ ಮೂರು ವರ್ಷಗಳ ನಂತರ ಅವರಿಗೆ ಈ ಹಿಂಬಡ್ತಿ ನೀಡಲಾಗಿದೆ. 2021ರ ಜುಲೈನಲ್ಲಿ ಕೌಟುಂಬಿಕ ಕಾರಣಗಳನ್ನು ಉಲ್ಲೇಖಿಸಿ ರಜೆ ಕೋರಿದ್ದರು. ಆದರೆ ಅವರು ಮನೆಗೆ ಹೋಗುವ ಬದಲು ಕಾನ್ಪುರದ ಹೋಟೆಲ್‌ನಲ್ಲಿ ಮಹಿಳಾ ಕಾನ್‌ಸ್ಟೇಬಲ್‌ನೊಂದಿಗೆ ತಂಗಿದ್ದರು. ಈ ವೇಳೆ ಅವರು ತಮ್ಮ ವೈಯಕ್ತಿಕ ಹಾಗೂ ಅಧಿಕೃತ ಮೊಬೈಲ್ ಸಂಖ್ಯೆಗಳನ್ನು ಸ್ವಿಚ್ ಆಫ್ ಮಾಡಿದ್ದು ಜನರಲ್ಲಿ ಅನುಮಾನ ಮೂಡಿಸಿತ್ತು. ಪತಿ ಹಠಾತ್ ನಾಪತ್ತೆಯಿಂದ ಆತಂಕಗೊಂಡ ಕೃಪಾ ಶಂಕರ್ ಕನೌಜಿಯ ಅವರ ಪತ್ನಿ ಸಹಾಯಕ್ಕಾಗಿ ಎಸ್ಪಿ ಉನ್ನಾವ್ ಅವರನ್ನು ಸಂಪರ್ಕಿಸಿದರು. ಕಾನ್ಪುರ ಹೋಟೆಲ್ ತಲುಪಿದ ನಂತರ ಕೃಪಾ ಶಂಕರ್ ಕನೌಜಿಯಾ ಅವರ ಮೊಬೈಲ್ ನೆಟ್‌ವರ್ಕ್ ಕೆಲಸ ಮಾಡುವುದನ್ನು ನಿಗಾ ತಂಡ ಪತ್ತೆ ಮಾಡಿದಾಗ ಪ್ರಕರಣ ಬೆಳಕಿಗೆ ಬಂದಿತ್ತು. ಉನ್ನಾವೊ ಪೊಲೀಸರು ತಕ್ಷಣ ಹೋಟೆಲ್‌ಗೆ ತಲುಪಿದ್ದು ಸಿಓ ಮತ್ತು ಮಹಿಳಾ ಕಾನ್‌ಸ್ಟೆಬಲ್ ಒಟ್ಟಿಗೆ ಇರುವುದನ್ನು ಪತ್ತೆಯಾಗಿತ್ತು.



ಕೃಪಾ ಶಂಕರ್

ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ, ಕೃಪಾ ಶಂಕರ್ ಕನೌಜಿಯಾ ಅವರನ್ನು ಕಾನ್‌ಸ್ಟೆಬಲ್ ಹುದ್ದೆಗೆ ಹಿಂಬಡ್ತಿ ನೀಡಲು ಸರ್ಕಾರ ಶಿಫಾರಸು ಮಾಡಿತ್ತು. ಎಡಿಜಿ ಆಡಳಿತವು ತಕ್ಷಣವೇ ಈ ನಿರ್ಧಾರವನ್ನು ಜಾರಿಗೆ ತರಲು ಆದೇಶವನ್ನು ಹೊರಡಿಸಿತು. ಇದರಿಂದಾಗಿ ಒಮ್ಮೆ ಪ್ರಮುಖ ಹುದ್ದೆಯಲ್ಲಿದ್ದ ಈ ಅಧಿಕಾರಿ ಕೆಳಗೆ ಬಿದ್ದಿದ್ದಾರೆ.

ವಾಲ್ಮೀಕಿ ಅಭಿವೃದ್ಧಿ ನಿಗಮದ ಅಕ್ರಮ ಹಣ ವರ್ಗಾವಣೆ: ಕರಪತ್ರ ಹಂಚಿ ಜನಜಾಗೃತಿ



ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆ ಗೋಲ್‌ಮಾಲ್ ಪ್ರಕರಣದ ವಿವರಗಳನ್ನೊಳಗೊಂಡ ಕರಪತ್ರವನ್ನು ಮೈಸೂರಿನ ವೀರನಗೆರೆಯಲ್ಲಿ ಮನೆ ಮನೆಗೆ ಹಂಚಿ, ಜನಜಾಗೃತಿ ಮೂಡಿಸಲಾಯಿತು.

ಮೈಸೂರು,ಜೂ.23-ಮೈಸೂರು ನಗರ ಎಸ್‌ಟಿ ಮೋರ್ಚಾ ವತಿಯಿಂದ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣದ ಅಕ್ರಮ ವರ್ಗಾವಣೆ ಗೋಲ್‌ಮಾಲ್ ಪ್ರಕರಣದ ವಿವರಗಳನ್ನು ಒಳಗೊಂಡ ಕರಪತ್ರವನ್ನು ವೀರನಗೆರೆಯಲ್ಲಿ ಮನೆ ಮನೆಗೆ ಹಂಚಿ, ಜನಜಾಗೃತಿ ಮೂಡಿಸಲಾಯಿತು.

ಈ ವೇಳೆ ಮಾತನಾಡಿದ ಎಸ್‌ಟಿ ಮೋರ್ಚಾ ನಗರಾಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪರಿಶಿಷ್ಟ ಪಂಗಡ ಸಮುದಾಯದ ಪ್ರಗತಿಗೆ ಮೀಸಲಿಟ್ಟ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡುವ ಮೂಲಕ ಜನರನ್ನು ವಂಚಿಸಲಾಗಿದೆ. ಪ್ರಾಮಾಣಿಕ ಅಧಿಕಾರಿ ಚಂದ್ರಶೇಖರನ್ ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಶರಣಾಗಿದ್ದು ಇದರಿಂದ ಪ್ರಕರಣ ಬೆಳಕಿಗೆ ಬಂದಿದೆ. ನಿಗಮದ ಖಾತೆಯಿಂದ ವಿವಿಧ ಖಾತೆಗಳಿಗೆ ಹಣ ವರ್ಗಾವಣೆ ಆಗಿದೆ. ಇದು ಅಕ್ಷಮ್ಯ ಅಪರಾಧ. ಇದರ ಬಗ್ಗೆ ಮೈಸೂರು ಮಹಾನಗರ ವ್ಯಾಪ್ತಿಯಲ್ಲಿ ಇರುವ ಎಸ್‌ಟಿ ಸಮುದಾಯದ ಜನರ ಪ್ರತಿ ಮನೆಗೂ ಕರಪತ್ರ ಹಂಚಿ ವಾಲ್ಮೀಕಿ ನಿಗಮದ ಅಕ್ರಮದ ಬಗ್ಗೆ ಜನರಿಗೆ ತಿಳಿಸಲಾಗುತ್ತಿದೆ. ಅಲ್ಲದೆ ಇದರ ವಿರುದ್ಧ ಜೂ.28ರಂದು ಮೈಸೂರು ಜಿಲ್ಲಾಧಿಕಾರಿ ಕಚೇರಿಯ ಮುತ್ತಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.


ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ನಾರಾಯಣ ಲೋಲಪ್ಪ, ಲಕ್ಷ್ಮಣ್ ನರಸಿಂಹರಾಜ ಮಂಡಲ ಅಧ್ಯಕ್ಷ ಜಗದೀಶ್, ಬಾಲರಾಜು, ಶಿವಕುಮಾರ್, ಶ್ರೀನಿ, ಮೂರ್ತಿ, ಸ್ವಾಮಿ, ಶ್ರೀನಿವಾಸ, ತ್ಯಾಗರಾಜ್, ಸಿದ್ದರಾಜು ಮತ್ತಿತರರಿದ್ದರು.

ಪ್ರತಾಪ್ ಸಿಂಹ ಜನ್ಮದಿನ; ಪೌರಕಾರ್ಮಿಕ ಮಹಿಳೆಯರಿಗೆ ಸೀರೆ ವಿತರಣೆ



ಮೈಸೂರು ಮತ್ತು ಕೊಡಗು ಮಾಜಿ ಸಂಸದ ಪ್ರತಾಪ್ ಸಿಂಹ ಅವರ ಜನ್ಮದಿನಾಚರಣೆ ಅಂಗವಾಗಿ ಪ್ರತಾಪ್ ಸಿಂಹ ಅಭಿಮಾನಿಗಳ ಬಳಗ, ಮೈಸೂರು ವತಿಯಿಂದ ಮೈಸೂರಿನ ಧನ್ವಂತರಿ ರಸ್ತೆಯಲ್ಲಿರುವ ಶ್ರೀ ಚಿದಂಬರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಪೌರಕಾರ್ಮಿಕ ಮಹಿಳೆಯರಿಗೆ ಸೀರೆ ವಿತರಿಸಲಾಯಿತು. ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಅಭಿಮಾನಿಗಳ ಬಳಗದ ಸದಸ್ಯರಾದ ಆರ್.ಪರಮೇಶಗೌಡ, ಸಂದೇಶ್, ಚಂದ್ರಣ್ಣ, ಸುರೇಂದ್ರ, ಶ್ರವಣ್, ಪ್ರಮೋದ್, ಕಿರಣ್, ವಿನೋದ್, ಮಂಜುನಾಥ್, ಯೋಗೇಶ್, ನಂದೀಶ್, ಉಮೇಶ್, ಶ್ರೀನಿವಾಸ್, ವಿಷ್ಣು, ಶ್ರೀಮತಿ ಭಾನುಮತಿ, ಲಕ್ಷ್ಮೀ, ಪಿಂಕಿ, ಶ್ರೀಲಕ್ಷ್ಮೀ, ಸುಕನ್ಯಾ, ಗೀತಾ, ವಿನಯ್ ಮತ್ತಿತರರಿದ್ದರು.

ಕೇಂದ್ರ ಸಚಿವ ಹೆಚ್‌ಡಿಕೆಗೆ ಅಭಿನಂದನೆ



ಕೇಂದ್ರ ಉಕ್ಕು-ಬೃಹತ್ ಕೈಗಾರಿಕೆ ಸಚಿವರೂ ಆದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಮೈಸೂರಿನ ಜೆಡಿಎಸ್ ಮುಖಂಡರಾದ ಹೆಚ್.ಕೆ.ರಮೇಶ್, ರವಿ, ಶ್ರೀನಿವಾಸಗೌಡ, ಚುಂದ್ರು, ಆರ್.ಲಿಂಗಪ್ಪ ಬೆಂಗಳೂರಿನಲ್ಲಿ ಅಭಿನಂದಿಸಿದರು.

ಯುವಕ ಆತ್ಮಹತ್ಯೆ

ಮೈಸೂರು, ಜೂ.23(ಎಸ್‌ಪಿಎನ್)- ಮೈಸೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಯುವಕನೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಶನಿವಾರ ರಾತ್ರಿ ನಡೆದಿದೆ.

ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ನಿವಾಸಿ ದರ್ಶನ್ ಹೆಚ್.ಗೌಡ(25) ಆತ್ಮಹತ್ಯೆಗೆ ಶರಣಾದ ಯುವಕ. ಮೈಸೂರಿನ ರಾಮಕೃಷ್ಣನಗರದಲ್ಲಿ ಬಾಡಿಗೆ ಮನೆಯಲ್ಲಿ ಸ್ನೇಹಿತರೊಂದಿಗೆ ವಾಸವಿದ್ದ ಈತ, ಗೋಕುಲಂನಲ್ಲಿರುವ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ.

ಶನಿವಾರ ಎಂದಿನಂತೆ ಕೆಲಸ ಮುಗಿಸಿಕೊಂಡು ಮನೆಗೆ ವಾಪಸ್ ಬಂದಿದ್ದ ದರ್ಶನ್, ರೂಂನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆಈ ಸಂಬಂಧ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೃಹಿಣಿ ನೇಣಿಗೆ ಶರಣು

ಮೈಸೂರು, ಜೂ.23(ಎಸ್‌ಪಿಎನ್)- ಕೌಟುಂಬಿಕ ಕಲಹದಿಂದ ಮನನೊಂದ ಗೃಹಿಣಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕುವೆಂಪುನಗರ ಎಂ.ಬ್ಲಾಕ್‌ನಲ್ಲಿ ನಡೆದಿದೆ.

ಇಲ್ಲಿನ ನಿವಾಸಿ ತೇಜಸ್ವಿನಿ(28) ನೇಣಿಗೆ ಶರಣಾದವರು. ವರ್ಷದ ಹಿಂದೆಯಷ್ಟೇ ದಟ್ಟಗಳ್ಳಿ ನಿವಾಸಿ ರಾಘವೇಂದ್ರರೊಂದಿಗೆ ಮದುವೆಯಾಗಿದ್ದ ತೇಜಸ್ವಿನಿ, ಮದುವೆಯಾದ ಹೊಸದರಲ್ಲಿ ಆಷಾಢ ಹಿನ್ನೆಲೆ ತವರು ಮನೆಗೆ ಬಂದಿದ್ದರು. ಆದರೆ ವರ್ಷ ಕಳೆದರೂ ಪತಿ ರಾಘವೇಂದ್ರ ವಾಪಸ್ಸು ಮನೆಗೆ ಕರೆಯಿಸಿಕೊಳ್ಳದ್ದಕ್ಕೆ ಜಗಳವಾಡಿಕೊಂಡಿದ್ದ ಅವರು, ಮಹಿಳಾ ಠಾಣೆಯಲ್ಲಿ ವರದಕ್ಷಿಣೆ ಕಿರುಕುಳ ದೂರು ದಾಖಲಿಸಿದ್ದರು.

ನಂತರ ಹಿರಿಯರ ಸಮ್ಮುಖದಲ್ಲಿ ಕೌನ್ಸೆಲಿಂಗ್ ನಡೆಸಿ ಇಬ್ಬರ ನಡುವಿನ ಸಮಸ್ಯೆ ಬಗೆಹರಿಸಿಕೊಳ್ಳಲು ತೀರ್ಮಾನಿಸಲಾಗಿತ್ತು. ತೇಜಸ್ವಿನಿ ಜೂ.21ರ ಶುಕ್ರವಾರ ರಾತ್ರಿ ಊಟ ಮುಗಿಸಿದ ಬಳಿಕ ರೂಂಗೆ ತೆರಳಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಸಿಆರ್‌ಪಿಸಿ 174(ಸಿ)ನಲ್ಲಿ ದೂರು ದಾಖಲಿಸಿಕೊಂಡಿರುವ ಕುವೆಂಪುನಗರ ಪೊಲೀಸರು, ತನಿಖೆ ಮುಂದುವರೆಸಿದ್ದಾರೆ.

ಸೂರಜ್ ರೇವಣ್ಣ ವಿರುದ್ಧ ಕ್ರಮ ಕುರಿತಂತೆ ಪಕ್ಷದ ವೇದಿಕೆಯಲ್ಲಿ ತೀರ್ಮಾನ: ಜಿ.ಟಿ.ದೇವೇಗೌಡರ ಸ್ಪಷ್ಟನೆ

ಮೈಸೂರು, ಜೂ.23(ಬಿಎಲ್‌ಯು)- ಅಸಹಜ ಲೈಂಗಿಕ ದೌರ್ಜನ್ಯ ಆರೋಪದಡಿ ಬಂಧನಕ್ಕೊಳಗಾಗಿರುವ ಜೆಡಿಎಸ್ ವಿಧಾನಪರಿಷತ್ ಸದಸ್ಯ ಸೂರಜ್ ರೇವಣ್ಣ ವಿರುದ್ಧ ಕ್ರಮ ಕೈಗೊಳ್ಳುವ ಕುರಿತಂತೆ ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡಲಾಗುವುದು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡರು ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಆಲನಹಳ್ಳಿಯ ಕುದೇರು ಮಠದ ಕಾರ್ಯಕ್ರಮದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಸೂರಜ್ ರೇವಣ್ಣ ತಪ್ಪು ಮಾಡಿದ್ದರೆ ಶಿಕ್ಷೆಯಾಗಲಿ, ತಪ್ಪು ಮಾಡಿದವರ ಪರ ನಾವು ಯಾವತ್ತೂ ನಿಲ್ಲುವುದಿಲ್ಲ. ನನ್ನ ಮಗನೇ ಇರಲಿ, ನನ್ನ ಸಂಬಂಧಿಗಳೇ ಇರಲಿ, ಯಾರೇ ತಪ್ಪು ಮಾಡಿದ್ದರೂ ಅದು ತಪ್ಪು. ಜೆಡಿಎಸ್ ಪಕ್ಷ ತಪ್ಪು ಮಾಡಿದವರ ಪರ ನಿಲ್ಲುವುದಿಲ್ಲ ಎಂದರು.

ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಹಸ್ತಕ್ಷೇಪ ಮಾಡಲಿಲ್ಲ. ಅದರಂತೆ ಈ ವಿಚಾರದಲ್ಲೂ ಹಸ್ತಕ್ಷೇಪ ಮಾಡುವುದಿಲ್ಲ. ಸೂರಜ್ ರೇವಣ್ಣ ಬಂಧನದಿಂದ ಪಕ್ಷಕ್ಕೆ ಯಾವುದೇ ರೀತಿಯಲ್ಲೂ ಮುಜುಗರವಾಗುವುದಿಲ್ಲ. ರಾಜ್ಯದಲ್ಲಿ ಯಾರೋ ಒಬ್ಬ ತಪ್ಪು ಮಾಡಿದರೆ ಅದಕ್ಕೆ ಆರೂವರೆ ಕೋಟಿ ಜನರು ಕಾರಣರೇ? ಎಂದು ಜಿ.ಟಿ.ದೇವೇಗೌಡರು ಪ್ರಶ್ನಿಸಿದರು.

ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಶ್ರೀಮತಿ ರಾಜಮ್ಮ ಮತ್ತು ಶ್ರೀ ಮಂಚಪ್ಪ
ಶುಭಕೋರುವವರು: ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಶ್ರೀಮತಿ ಸೌಭಾಗ್ಯ ಮತ್ತು ಬಂಧುಮಿತ್ರರು

BTL COMPOSITE PU COLLEGE
#1, Kesare 2 nd Stage, Naidunagara Main Road,
Near Naidunagara Bus Stand, Mysore-570007


LECTURER WANTED

Economics Lecturer - Qualification- M.A in Economics/M.Com/MBA. B.Ed is an added advantage but not mandatory to apply. Fluency in English is a must. First preference will be given to English medium candidates. New Graduates, Freshers or Experienced Candidates can apply.

Interested Candidates are requested to submit their resumes to our college office either in person or by email to **btlvidyavahini@gmail.com by 27th June 2024. Interview will be conducted after 27th June 2024** and date will be notified to shortlisted Candidates.

Office Timings: 10am to 4pm from Monday to Friday. 9am to 12pm on Saturday.(Emails are accepted after office hours and on Sunday as well).

Contact
9448787356 (Sri Guruprasad-Principal), 6360812404, 0821-2956203



ಪ್ರಕೃತಿ ವಿಕೋಪದಲ್ಲಿ ಇಡೀ ಕುಟುಂಬ ಕಳೆದುಕೊಂಡು
ಅನಾಥಳಾದ ಯುವತಿಯ ಯಶೋಗಾಥೆ

● ಶೈಕ್ಷಣಿಕ ಸಾಧನೆ ಮಾಡಿ ಕಾಲೇಜಿನ ಸಹಾಯಕ ಪ್ರೊಫೆಸರ್ ಆಗಿ ಸೇವೆ ● ಪಿಹೆಚ್‌ಡಿ ಪದವಿ ಪಡೆದ ಡಾ.ಪಲ್ಲವಿ

ಮಡಿಕೇರಿ, ಜೂ.23–ಮಳೆಗಾಲ ಸಂಭವಿಸಿದ ಪ್ರಕೃತಿ ವಿಕೋಪದಲ್ಲಿ ತನ್ನೆಲ್ಲಾ ಕುಟುಂಬದವರನ್ನು ಕಳೆದುಕೊಂಡು ಪವಾಡ ಸದೃಶ ರೀತಿಯಲ್ಲಿ ಬದುಕುಳಿದ ಮಡಿಕೇರಿಯ ಹೆಣ್ಣು ಮಗಳೊಬ್ಬಳು ತನ್ನ ಹೆತ್ತಾಕೆಯ ಆಸೆಯಂತೆ ಉನ್ನತ ಶಿಕ್ಷಣ ಪೂರೈಸಿ ಇದೀಗ 'ಪಿಹೆಚ್‌ಡಿ' ಪದವಿ ಪಡೆಯುವ ಮೂಲಕ ಇಡೀ ಸಮಾಜಕ್ಕೆ ಆದರ್ಶ ಪ್ರಾಯರಾಗಿದ್ದಾರೆ.

ಹಿಂದೆ ಮಡಿಕೇರಿಯ ಮಂಗಳಾದೇವಿ ನಗರದಲ್ಲಿ ನೆಲೆಸಿದ್ದ ಇದೀಗ ಬೆಂಗಳೂರಿನ ಜೈನ್ ಯೂನಿವರ್ಸಿಟಿಯಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಸೇವೆ ಸಲ್ಲಿಸುತ್ತಿರುವ ಪಲ್ಲವಿ ಎಂಬವರೇ ಇಂತಹ ಸಾಧನೆ ಮಾಡಿದ ಯುವತಿ.

ಜಿಲ್ಲೆಯ ಮೊದಲ ದುರಂತ: 2006ರ ಜುಲೈ 6ರಂದು ನಸುಕಿನ 3.30ರ ಸಮಯದಲ್ಲಿ ಮಡಿಕೇರಿಯಿಂದ ಮೂರ್ನಾಡು ಕಡೆಗೆ ತೆರಳುವ ಮಾರ್ಗದಲ್ಲಿರುವ ಮಂಗಳಾದೇವಿ ನಗರದಲ್ಲಿ ಭಾರೀ ಭೂಕುಸಿತವಾಗಿತ್ತು. ಈ ಘಟನೆಯಲ್ಲಿ ಬೆಟ್ಟದ ತಳ ಭಾಗದಲ್ಲಿದ್ದ ಎರಡು ಮನೆಗಳು ಸಂಪೂರ್ಣ ಭೂ ಸಮಾಧಿಯಾಗಿದ್ದರೆ, ಆ ಕುಟುಂಬಗಳ ಒಟ್ಟು 6 ಮಂದಿ ಮಣ್ಣಿನಡಿ ಸಿಲುಕಿ ಪ್ರಾಣ ಬಿಟ್ಟಿದ್ದರು. ಈ ಘಟನೆಯಿಂದ ಇಡೀ ಕೊಡಗು ಜಿಲ್ಲೆ ಬೆಚ್ಚಿ ಬಿದ್ದಿತ್ತು ಅದರೆ ಭೂಕುಸಿತದಲ್ಲಿ ಪಲ್ಲವಿ ಎಂಬ 16 ವರ್ಷದ ಯುವತಿ ಮಾತ್ರವೇ ಪವಾಡ ಸದೃಶವೋ ಎಂಬ ರೀತಿ ಗಂಭೀರ ಗಾಯಗಳ ನಡುವೆ ಕೇವಲ ಉಸಿರಾಡುತ್ತಿದ್ದಳು. ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಾದ ಪಲ್ಲವಿ ಹಲವು ತಿಂಗಳ ಕಾಲ ಚಿಕಿತ್ಸೆ



ಪಡೆದು ತನ್ನ ಮೊದಲಿನ ಸ್ಥಿತಿಗೆ ಬಂದಿದ್ದಳು.

ಕುಟುಂಬವೇ ಭೂ ಸಮಾಧಿ: ಭೂ ಕುಸಿತದಲ್ಲಿ ಪಲ್ಲವಿಯನ್ನು ಹೊರತುಪಡಿಸಿದರೆ ಆಕೆಯ ಕುಟುಂಬದ ಮತ್ಯಾರು ಬದುಕಿರಲಿಲ್ಲ ಪಲ್ಲವಿಯ ತಾಯಿ ರಾಧಾ, ಸಹೋದರಿ ಜ್ಯೋತಿ(14) ಸಹೋದರ ಅಭಿಷೇಕ್(12) ಮತ್ತು ಪಕ್ಕದ ಮನೆಯ ಮಗು ಸಹಿತ 3 ಮಂದಿ ಕೂಡ ಭೂ ಸಮಾಧಿಯಾಗಿದ್ದರು. ವಿಷಯ ಅರಿತ ಅಂದಿನ ಜಿಲ್ಲಾಧಿಕಾರಿ ಸುಭೋದ್ ಯಾದವ್ ತಾವೇ ಮುಂದೆ ನಿಂತು ರಕ್ಷಣಾ ಕಾರ್ಯಾಚರಣೆ ನಡೆದಿದ್ದರು. ಅಗ್ನಿ ಶಾಮಕ ದಳದ ಸಿಬ್ಬಂದಿ ಹರಸಾಹಸ ಪಟ್ಟು ಮಣ್ಣಿನಡಿ ಸಿಲುಕಿದ್ದ ಒಟ್ಟು 6 ಮೃತ ದೇಹಗಳನ್ನು ಹೊರ ತೆಗೆಯುವಲ್ಲಿ ಸಫಲರಾಗಿದ್ದರು. ಭೂಕುಸಿತದಲ್ಲಿ ಸಾವನ್ನಪ್ಪಿದ ಪಲ್ಲವಿಯ ಕುಟುಂಬವು ಸೇರಿದಂತೆ ಇತರ ಸದಸ್ಯರಿಗೆ ಅಂದಿನ ಜಿಲ್ಲಾಧಿಕಾರಿ ಸುಭೋದ್ ಯಾದವ್ ಪ್ರಯತ್ನದಿಂದ ಸರ್ಕಾರದ ಮೂಲಕ 3 ಲಕ್ಷ ರೂ. ಪರಿಹಾರ ದೊರಕಿತ್ತು. ಅದನ್ನು ಪಲ್ಲವಿ ಹೆಸರಿನಲ್ಲಿಯೇ ಬ್ಯಾಂಕ್‌ನಲ್ಲಿ ಠೇವಣಿ ಇರಿಸಿ, ಅದೇ ಹಣ ಪಲ್ಲವಿಯ ಭವಿಷ್ಯದ ವಿದ್ಯಾಭ್ಯಾಸಕ್ಕೆ ಬಳಸಿಕೊಳ್ಳಲಾಗಿತ್ತು.



ಮಡಿಕೇರಿ ಜನತೆಗೆ ಅರ್ಪಣೆ

ತನ್ನ ಸಂಕಷ್ಟ ಕಾಲದಲ್ಲಿ ಮಡಿಕೇರಿಯ ಜನರು ನೀಡಿದ ನೆರವು ಹಾಗೂ ಆತ್ಮೀಯತೆಯನ್ನು ಎಂದೆಂದಿಗೂ ಮರೆಯಲಾರೆ. ಅವರ ಸಹಕಾರ, ಜೀವನೋತ್ಸಾಹದ ಮಾರ್ಗದರ್ಶನ ನೀಡದೇ ಹೋಗಿದ್ದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ತನಗೆ ಈ ಸಾಧನೆ ಸಾಧ್ಯವಾಗುತ್ತಿರಲಿಲ್ಲ. ನನ್ನ ಸಾಧನೆಯನ್ನು ಮಡಿಕೇರಿಯ ಜನತೆಗೆ ಸಮರ್ಪಿಸುತ್ತೇನೆ. ನನ್ನ ಅಮ್ಮ ತನ್ನ ಮಕ್ಕಳು ಉತ್ತಮ ವಿದ್ಯೆ ಪಡೆಯಬೇಕೆಂದು ಬಯಸಿದ್ದರು. ಇದಕ್ಕಾಗಿ ಸಾಕಷ್ಟು ಶ್ರಮಪಡುತ್ತಿದ್ದರು. ಆದರೆ ಭೂಕುಸಿತದಿಂದಾಗಿ ಅಮ್ಮನೊಂದಿಗೆ ಆಕೆಯ ಇಬ್ಬರು ಮಕ್ಕಳೂ ಇನ್ನಿಲ್ಲವಾದರು. ಜೀವಂತ ಉಳಿದ ತಾನು ಅಮ್ಮನ ಆಸೆ ಈಡೇರಿಸಲೆಂದೇ ಶಿಕ್ಷಣ ಕ್ಷೇತ್ರದತ್ತ ಛಲದಿಂದ ಗಮನ ಹರಿಸಿದೆ. ಇದೀಗ ಡಾಕ್ಟರೇಟ್ ದೊರಕಿರುವುದು ಅಮ್ಮನ ಆಸೆಯನ್ನು ಈಡೇರಿಸಿದ ನೆಮ್ಮದಿಗೆ ಕಾರಣವಾಗಿದೆ. ಈ ನಡುವೆಯೇ 2019ರ ಬ್ಯಾಚ್‌ಗೆ ಯುಪಿಎಸ್ ಪರೀಕ್ಷೆ ಜೊತೆಯಲ್ಲೇ ಅದಕ್ಕಾಗಿ ತರಬೇತಿ ಪಡೆದಿದ್ದೆ. ಎರಡು ಬಾರಿ ಪರೀಕ್ಷೆ ಎದುರಿಸಿದ್ದೇನೆ. ಯುಪಿಎಸ್ ತೀವ್ರ ಸ್ಪರ್ಧಾತ್ಮಕ ವಿಷಯವಾದ ಹಿನ್ನೆಲೆಯಲ್ಲಿ ಇದೀಗ ಬೋಧನೆ ವಿಚಾರದಲ್ಲಿ ಗಮನ ಕೇಂದ್ರೀಕರಿಸಿದ್ದೇನೆ.

–ಡಾ.ಪಲ್ಲವಿ

ಬೆನ್ನೆಲುಬಾದ ಬೇಬಿ ಮ್ಯಾಥ್ಯು: ತನ್ನೆಲ್ಲ ಕುಟುಂಬ ಸದಸ್ಯರನ್ನು ಕಳೆದುಕೊಂಡು ಅನಾಥಳಾದ ಪಲ್ಲವಿಗೆ ಬೆನ್ನೆಲುಬಾಗಿ ನಿಂತಿದ್ದ ಸಮಾಜ ಸೇವಕ ಮಡಿಕೇರಿ ನಿವಾಸಿ ಕೆ.ಟಿ. ಬೇಬಿ ಮ್ಯಾಥ್ಯು ಪಲ್ಲವಿಯ ಪಾಲಿಗೆ ಅವರೇ ಪಾಲಕರಾಗಿ, ಮಾರ್ಗದರ್ಶಕರಾಗಿ ಆಕೆಯ ಬದುಕಿಗೆ ಆಸರೆಯಾದರು. ಬೇಬಿ ಮ್ಯಾಥ್ಯು ಅವರ ಇಡೀ ಕುಟುಂಬವೇ ಪಲ್ಲವಿಯ ನೆರವಿಗೆ ನಿಂತಿತ್ತು. ತನ್ನ ಮಾವ ಮೂರ್ನಾಡಿನ ಸುಂದರ ಎಂಬುವರ ಮನೆಯಲ್ಲಿ ಆಶ್ರಯ ಪಡೆದ ಪಲ್ಲವಿ ಮೂರ್ನಾಡಿನ ಪ್ರೌಢಶಾಲೆಯಲ್ಲಿ ವ್ಯಾಸಂಗ ಮುಂದುವರೆಸಿ ದ್ವಿತೀಯ ಪಿಯುಸಿಯಲ್ಲಿ ಉನ್ನತ ಮಟ್ಟದಲ್ಲಿ ತೇರ್ಗಡೆಯಾಗಿದ್ದಳು. ಮಡಿಕೇರಿಯ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನಲ್ಲಿ ಪದವಿ ಶಿಕ್ಷಣವನ್ನು ಉತ್ತಮ ಅಂಕಗಳಿಂದ ಪೂರೈಸಿದ್ದಳು. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿ ಶಿಕ್ಷಣ ಪಡೆದ ನಂತರ ಬೆಂಗಳೂರಿನ ಜೈನ್ ಕಾಲೇಜಿಗೆ ಉಪನ್ಯಾಸಕಿಯಾಗಿ ಸೇರಿದ ಪಲ್ಲವಿ ಕೆಲ ವರ್ಷಗಳಿಂದ ಆ ಕಾಲೇಜಿನ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗದಲ್ಲಿ ಸಹಾಯಕ ಪ್ರೊಫೆಸರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇದೀಗ 'ಡಾ.ಪಲ್ಲವಿ': ಹೆತ್ತ ತಾಯಿ, ತಮ್ಮ, ತಂಗಿಯನ್ನು ಬಾಲ್ಯದಲ್ಲಿಯೇ ಕಳೆದುಕೊಂಡಿದ್ದರೂ ಶಿಕ್ಷಣದ ಬಗೆಗಿನ ಒಲವು ಮತ್ತು ಹೆತ್ತಾಕೆಯ ಕನಸನ್ನು ನನಸಾಗಿಸಲು ಪಿಎಚ್‌ಡಿ ಪಡೆಯಬೇಕೆಂಬ ಛಲದಿಂದ ಪಲ್ಲವಿ ಅವರು ಡಾ.ಅನಸೂಯ ರೈ ಅವರ ಮಾರ್ಗದರ್ಶನದಲ್ಲಿ 'ಭಾರತೀಯ ದೃಷ್ಟಿಕೋನದಿಂದ ಬ್ಯಾಂಕಿಂಗ್ ಇನ್ಸೂರೆನ್ಸ್' ಎಂಬ ವಿಷಯದ ಬಗ್ಗೆ ಅಧ್ಯಯನ ಮಾಡಿದ್ದರು. ಜೂ.15ರಂದು ಈ ವಿಷಯಕ್ಕಾಗಿ ಮಂಗಳೂರು ವಿವಿಯಲ್ಲಿ ನಡೆದ ಸಮಾರಂಭದಲ್ಲಿ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ ಆ ಮೂಲಕ ಮಡಿಕೇರಿ ಜನರು ಹಾಗೂ ಕೊಡಗು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಪಲ್ಲವಿ ಮಡಿಕೇರಿ ಮಗಳು: ಪಲ್ಲವಿಗೆ ಪ್ರಾರಂಭದಿಂದಲೂ ತನ್ನ ಕುಟುಂಬ ಎಲ್ಲಾ ರೀತಿಯ ಮಾರ್ಗದರ್ಶನ ನೀಡಿತ್ತು. ಮಡಿಕೇರಿಯ ಜನರು ಆಕೆಯನ್ನು ತಮ್ಮ ಮನೆ ಮಗಳು ಎಂಬಂತೆ ಸ್ವೀಕರಿಸಿದ್ದಾರೆ. ಆಕೆ ಎಂದಿಗೂ ಮಡಿಕೇರಿ ಮಗಳಾಗಿಯೇ ಇರುತ್ತಾಳೆ. ಇದೀಗ ಆಕೆ ಡಾಕ್ಟರೇಟ್ ಪಡೆದಿರುವುದು ನನ್ನ ಜೀವನದ ಬಹಳ ದೊಡ್ಡ ಸಂತೋಷಕ್ಕೆ ಕಾರಣವಾಗಿದೆ. 18 ವರ್ಷಗಳ ಹಿಂದೆ ವಿಧಿ ಆಕೆಯ ಪ್ರಾಣ ಉಳಿಸಿತ್ತು. ಈಗ ಈಕೆ ಡಾಕ್ಟ್ ಎನಿಸಿಕೊಂಡ ಸಾಧನೆ ತೋರಿದ್ದಾಳೆ. ಛಲ ಮತ್ತು ಆತ್ಮ ವಿಶ್ವಾಸವಿದ್ದರೆ ಜೀವನದಲ್ಲಿ ಏನನ್ನೂ ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಪಲ್ಲವಿ ಈ ಸಮಾಜಕ್ಕೆ ಬಹಳ ದೊಡ್ಡ ಉದಾಹರಣೆಯಾಗಿದ್ದಾಳೆ ಎಂದು ಮಡಿಕೇರಿಯ ಸಮಾಜ ಸೇವಕ ಬೇಬಿ ಮ್ಯಾಥ್ಯು ಹೆಮ್ಮೆ ವ್ಯಕ್ತಪಡಿಸಿದರು.

ಪ್ರವಾಸಿಗರ ಮೇಲೆ ಪುಂಡರ ಹಲ್ಲೆ

ಸೋ.ಪೇಟೆಯ ಕೋಟೆಬೆಟ್ಟದಲ್ಲಿ ಕ್ಷುಲ್ಲಕ ವಿಚಾರವಾಗಿ ದೌರ್ಜನ್ಯ

ಮಡಿಕೇರಿ, ಜೂ.23– ಕೊಡಗು ಜಿಲ್ಲೆಗೆ ಪ್ರವಾಸಕ್ಕೆ ಬಂದಿದ್ದ ಪ್ರವಾಸಿಗರ ಮೇಲೆ ಇಬ್ಬರು ಪುಂಡರು ಹಲ್ಲೆ ನಡೆಸಿರುವ ಘಟನೆ ಸೋಮವಾರಪೇಟೆ ತಾಲೂಕಿನ ಕೋಟೆಬೆಟ್ಟದಲ್ಲಿ ಭಾನುವಾರ ನಡೆದಿದೆ.

ಮಕ್ಕಳು ಹಾಗೂ ಮಹಿಳೆಯರು ಸೇರಿದಂತೆ ಕುಟುಂಬವೊಂದು ಪುತ್ತೂರಿನಿಂದ ಸೋಮವಾರಪೇಟೆಯ ಕೋಟೆಬೆಟ್ಟ ತಾಣಕ್ಕೆ ಆಗಮಿಸಿತ್ತು. ಈ ವೇಳೆ ಬೈಕ್‌ನಲ್ಲಿ ಬಂದ ಇಬ್ಬರು ಪುಂಡರು ಕ್ಷುಲ್ಲಕ ವಿಚಾರವಾಗಿ ಪ್ರವಾಸಿ ಕುಟಂಬದವರೊಂದಿಗೆ ಜಗಳವಾಡಿ ಅವರ ಮೇಲೆ ಹಲ್ಲೆ ನಡೆಸಿ, ಸ್ಥಳದಿಂದ ಪರಾರಿಯಾಗಿದ್ದಾರೆ.



ಸೋಮವಾರಪೇಟೆ ತಾಲೂಕಿನ ಕೋಟೆಬೆಟ್ಟದಲ್ಲಿ ಪ್ರವಾಸಿಗರ ಮೇಲೆ ಹಲ್ಲೆ ನಡೆಸಿರುವ ಪುಂಡರು.

ಹಲ್ಲೆಯಿಂದ ಮಕ್ಕಳು, ಮಹಿಳೆಯರು ಭಯಭೀತರಾಗಿದ್ದು, ದೌರ್ಜನ್ಯಕ್ಕೆ ಒಳಗಾದ ಕುಟುಂಬದವರು ಮಾದಾಪುರ ಉಪಠಾಣೆ ಪೊಲೀಸರಿಗೆ ಮಾಹಿತಿ ನೀಡಿದರು. ಗಲಾಟೆ ನಡೆಯುವಾಗ ಸ್ಥಳದಲ್ಲಿದ್ದವರು ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದು, ಇದೀಗ ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಹಲ್ಲೆ ಸಂಬಂಧ ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಘಟನೆ ವೇಳೆ ಪುಂಡರು ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಕ್ರಮಕ್ಕೆ ಒತ್ತಾಯ: ಜಿಲ್ಲೆಗೆ ಪ್ರವಾಸಕ್ಕೆ ಆಗಮಿಸುವ ಪ್ರವಾಸಿಗರ ಮೇಲೆ ದೌರ್ಜನ್ಯ ನಡೆಸುತ್ತಿರುವ ಘಟನೆಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ವರದಿಯಾಗುತ್ತಿವೆ. ಪ್ರವಾಸಿಗರಿಗೆ ಸೂಕ್ತ ರಕ್ಷಣೆ ನೀಡಲು ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.

ಹಾಡಹಗಲೇ ಮಕ್ಕಳು ಹಾಗೂ ಮಹಿಳೆಯರ ಮೇಲೆ ದೌರ್ಜನ್ಯ ಎಸಗಿರುವ ಪುಂಡರ ವಿರುದ್ಧ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಪ್ರಜಾಪ್ರಭುತ್ವಕ್ಕೆ ನಿಜವಾದ ಅರ್ಥ ಬರುವ ಹಾಗೆ ವ್ಯವಸ್ಥೆ ಬದಲಾಗಬೇಕು


ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರಯ್ಯ ಆಶಯ

ಮಂಡ್ಯ,ಜೂ.23– ಹೆಚ್.ವಿ.ವೀರೇಗೌಡರು ಒಂದು ಬಾರಿ ವಿಧಾನಸಭಾ ಸದಸ್ಯರಾಗಿದ್ದರೂ ಅವರನ್ನು ರಾಜಕಾರಣಿ ಎನ್ನಲು ಸಾಧ್ಯವಿಲ್ಲ. ಕಾರಣ ಅವರು ಸಮಾಜ ಸುಧಾರಕರಾಗಿದ್ದರು. ಸಾಮಾಜಿಕವಾಗಿ ಹೋರಾಡಿದವರು. ಇಂತಹ ಪರಿಸ್ಥಿತಿಯಲ್ಲಿ ವೀರೇಗೌಡರಂತವರು ಮತ್ತೆ ಹುಟ್ಟಿ ಬರಬೇಕು. ಪ್ರಜಾಪ್ರಭುತ್ವಕ್ಕೆ ನಿಜವಾದ ಅರ್ಥ ಬರುವ ಹಾಗೆ ರಾಜಕೀಯ ವ್ಯವಸ್ಥೆ ಬದಲಾಗಬೇಕು ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರಯ್ಯ ಆಶಯ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಸಂಘ, ಮಂಡ್ಯ ಮತ್ತು ಹೆಚ್.ವಿ.ವೀರೇಗೌಡ ಕುಟುಂಬ ವರ್ಗ ನಗರದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಹಮ್ಮಿಕೊಂಡಿದ್ದ ಮಂಡ್ಯ ಜಿಲ್ಲೆಯ ಹಿರಿಯ ರಾಜಕಾರಣಿ ಮಳವಳ್ಳಿಯ ಎಚ್.ವಿ.ವೀರೇಗೌಡರ ಜೀವನಾಧಾರಿತ 'ಹಳ್ಳಿಗಾಡಿನ ರೂವಾರಿ' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ವೀರೇಗೌಡರು ಅಂದು ತಮ್ಮ ಚುನಾವಣೆಗೆ 12 ಸಾವಿರ ರೂ. ಖರ್ಚು ಮಾಡಿದ್ದರು. ಆದರೆ ಇಂದು 12 ಕೋಟಿ ಬೇಕು. ಇಂತಹ ವ್ಯವಸ್ಥೆಯಲ್ಲಿ ಜನರು ತಮ್ಮ ಮತವನ್ನು ಮಾರಿಕೊಳ್ಳಬಾರದು. ಯಾವುದಾದರೂ ಕೆಲಸ ಕೊಡಬೇಕಾದರೆ ಅದನ್ನು ಮಾರಿಕೊಳ್ಳಬೇಡಿ. ಲಂಚ ತೆಗೆದುಕೊಳ್ಳುವವನು ಸತ್ಯವಾಗಿರಲು ಸಾಧ್ಯವಾ? ಅವನು ತೆಗೆದುಕೊಂಡಿರುವ ಹಣದ 100 ರಷ್ಟು ಮತ್ತೆ ಸಂಪಾದನೆ ಮಾಡುತ್ತಾನೆ ಎಂದು ಎಚ್ಚರಿಸಿದರು.

ಅದರಲ್ಲೂ ಸಹಕಾರ ಸಂಘದ ವಿಚಾ



'ಹಳ್ಳಿಗಾಡಿನ ರೂವಾರಿ' ಕೃತಿಯನ್ನು ಬಿಡುಗಡೆ ಮಾಡುತ್ತಿರುವ ಗಣ್ಯರು.

ರದಲ್ಲಿ ಬಹಳ ಚೆನ್ನಾಗಿ ತಿಳಿದುಕೊಂಡಿದ್ದ ಮಹಾ ವ್ಯಕ್ತಿ. ಈಗ ಪ್ರಜಾಪ್ರಭುತ್ವದ ರಾಜಕೀಯ ವ್ಯವಸ್ಥೆಯಲ್ಲಿ ನಾವಿದ್ದೇವೆ. ಪ್ರಜೆಗಳೇ ರಾಜರು. ಆದರೆ ಪರಿಸ್ಥಿತಿ ಹೇಗಾಗಿದೆ ಎಂದರೆ ಮರಿತಿಬ್ಬೇಗೌಡರು ಅವರ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದರೂ ಸೋಲಬೇಕಾಯಿತು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ ಮಾತನಾಡಿ, 'ಯಾರು ಜನರಿಗಾಗಿ ಬದುಕುತ್ತಾರೋ ಅವರೇ ನಿಜವಾದ ಶ್ರೇಷ್ಠ ಸೇವಕರು' ಎನ್ನುವ ಸ್ವಾಮಿ ವಿವೇಕಾನಂದರ ವಾಣಿಯಂತೆ 1957ರಲ್ಲಿ ಶಾಸಕರಾಗಿ ವೀರೇಗೌಡರು ಅಂದಿನ ಆರ್ಥಿಕ ಪರಿಸ್ಥಿತಿ, ನಾಡಿನ ಜನಜೀವನ ವ್ಯವಸ್ಥೆಗೆ ಹೊಂದಿಕೊಂಡು ತನ್ನ ಕುಟುಂಬವನ್ನೇ ಒಂದು ಕಡೆ ಇಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದವರು ಎಂದರು.

ಮಹಾತ್ಮ ಗಾಂಧೀಜಿಯವರ ತತ್ವಗಳನ್ನೇ ಬದುಕನ್ನಾಗಿ ಆಧರಿಸಿ ಸಹಕಾರಿ ಆಂದೋಲನವನ್ನು ಪ್ರಾರಂಭ ಮಾಡಿ ಅಂದು ಎಷ್ಟೇ ಕಷ್ಟಗಳು ಬಂದರೂ ಕೂಡ ಬದುಕಿನಲ್ಲಿ ಸಮಾಜಕ್ಕಾಗಿ ತಮ್ಮನ್ನೇ ತಾವು ಅರ್ಪಿಸಿಕೊಂಡ ದೊಡ್ಡ ವ್ಯಕ್ತಿತ್ವದವರಾಗಿದ್ದರು. ಅಂದಿನ ದಿನಮಾನಗಳಲ್ಲಿ ತಮ್ಮ ಸ್ವಾರ್ಥತೆ ಮರೆತು ನಮ್ಮ ನಾಯಕರಾದಂತಹ ಈ ಜಿಲ್ಲೆಯ ಜಿ.ಮಾದೇಗೌಡರಿಗೆ ಶಾಸಕರಾಗುವಂತ ಅವಕಾಶ ಕಲ್ಪಿಸಿದವರು ವೀರೇಗೌಡರ ತ್ಯಾಗವನ್ನು ಮರಿತಿಬ್ಬೇಗೌಡ ಸ್ಮರಿಸಿದರು.

ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಮಾತನಾಡಿ, ಕೃತಿ ರಚಿಸುವ ಉದ್ದೇಶವೆಂದರೆ ನಮ್ಮನ್ನಗಲಿದ ನಾಯಕರು ಹಿರಿಯರ ಬಗ್ಗೆ ಗೌರವ ಸಲ್ಲಿಸುವುದರ ಜೊತೆಗೆ ಇದನ್ನು ಮುಂದಿನ ತಲೆಮಾರಿನವರು ಓದಿ ಇವರ ಸೇವೆಯನ್ನು ಅರಿತುಕೊಳ್ಳಲಿ. ಯುವ ಜನಾಂಗಕ್ಕೆ ಮಾರ್ಗದರ್ಶಕವಾಗಲಿ ಎನ್ನುವ ದೃಷ್ಟಿಯಿಂದ ಮಾಡುತ್ತೇವೆ ಎಂದರು.

ದೇವಿಕಾ ಅವರು ವೀರೇಗೌಡರ ಸೇವೆಯ ಮಹತ್ವವನ್ನು ಹೆಕ್ಕಿ ತೆಗೆದು ಅದಕ್ಕೆ ಹೊಳಪು ನೀಡಿ ಪ್ರಕಾಶಮಾನವಾಗಿ ಮಾಡಿದ್ದಾರೆ. ಇದರ ಉದ್ದೇಶ ಮುಂದಿನ ತಲೆಮಾರಿನವರು ನಮ್ಮ ಹಿರಿಯರ ಕೊಡುಗೆ ಏನಿದೆ? ಇವರು ಇಷ್ಟು ಮಾಡಿದ್ದಾರೆ ಮುಂದೆ ನಮ್ಮ ಕೊಡುಗೆ ಏನು ಎಂಬುದನ್ನು ಅರಿತುಕೊಳ್ಳುತ್ತಾರೆ ಎಂಬ ಉದ್ದೇಶವಿದೆ ಎಂದರು.

ಕೊಮ್ಮೇರಹಳ್ಳಿ ವಿಶ್ವಮಾನವ ಕ್ಷೇತ್ರದ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ ಸಮಾರಂಭದ ಸಾನಿಧ್ಯ ವಹಿಸಿದ್ದರು. ಎಚ್.ವಿ. ವೀರೇಗೌಡ ಹಾಗೂ ಹಳ್ಳಿಗಾಡಿನ ರೂವಾರಿ ಕೃತಿ ಕುರಿತು ಲೋಕೇಶ್ ಚಂದಗಾಲು, ಕೃತಿಕರ್ತೃ ಡಾ.ಎನ್.ಎಸ್.ದೇವಿಕಾ ಮಾತನಾಡಿದರು.

ಸಮಾರಂಭದಲ್ಲಿ ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ವೀರೇಗೌಡರ ಹಿರಿಯ ಪುತ್ರ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಚ್.ವಿ.ಜಯರಾಮ್, ಕರ್ನಾಟಕ ಸಂಘದ ಅಧ್ಯಕ್ಷ ಬಿ.ಜಯ ಪ್ರಕಾಶಗೌಡ, ಅನಿತಾ, ಮಂಜುಳಾ ಉದಯಶಂಕರ್, ಡಾ.ಕೆಂಪಮ್ಮ ಹಾಗೂ ಎಚ್.ವಿ.ವೀರೇ ಗೌಡ ಕುಟುಂಬ ವರ್ಗದವರು ಹಾಜರಿದ್ದರು.

ಕಮಲಾ ಹಂಪನಾ ನಿಧನಕ್ಕೆ ಸಂತಾಪ

ಭಾರತೀನಗರ,ಜೂ.23–ಹಿರಿಯ ಸಾಹಿತಿ, ಕನ್ನಡದ ಖ್ಯಾತ ಲೇಖಕಿ ಡಾ.ಕಮಲಾ ಹಂಪನಾ ನಿಧನಕ್ಕೆ ಮಾಜಿ ಸಚಿವ ಡಿ.ಸಿ. ತಮ್ಮಣ್ಣ ಸಂತಾಪ ಸೂಚಿಸಿದ್ದಾರೆ.

ಕಮಲಾ ಹಂಪನಾ ಅವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅಪಾರ. ಮಂಡ್ಯ ಪದವಿ ಪೂರ್ವ ಕಾಲೇಜಿನಲ್ಲಿ ನಾನು ಓದುತ್ತಿದ್ದಾಗ ಡಾ.ಕಮಲಾ ಅವರ ಪತಿ ಹಂ.ಪ.ನಾಗರಾಜಯ್ಯ ಅವರು ಕನ್ನಡ ಪ್ರಾಧ್ಯಾಪಕರಾಗಿದ್ದರು. ಆಗಿನಿಂದಲೂ ಕಮಲಾ ಹಂಪನಾ ಅವರ ಪರಿಚಯವಿತ್ತು. ಡಾ.ಕಮಲಾ ಅವರ ನಿಧನದಿಂದ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ನಷ್ಟ ಉಂಟಾಗಿದೆ. ಹಂಪನಾ ಕುಟುಂಬಕ್ಕೆ ದೇವರು ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುವೆ ಎಂದರು.

ನಾಲ್ವಡಿಯವರ ಆಳ್ವಿಕೆ ಅವಿಸ್ಮರಣೀಯ

ಪಾಂಡವಪುರ: ದೇಶದಲ್ಲಿ ಮೊದಲ ಬಾರಿಗೆ ಮೈಸೂರು ಇನ್ಸೂರೆನ್ಸ್ ಎಂಬ ಜೀವ ವಿಮೆ ತಂದ ಹೆಗ್ಗಳಿಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗಿದೆ ಎಂದು ಇತಿಹಾಸ ತಜ್ಞ ಧರ್ಮೇಂದ್ರ ಕುಮಾರ್ ತಿಳಿಸಿದ್ದಾರೆ.

ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

ಮೈಸೂರು ಸಂಸ್ಥಾನ ಆಳಿದ 10ನೇ ಚಾಮರಾಜ ಒಡೆಯರ್, 3ನೇ ಕೃಷ್ಣರಾಜ ಒಡೆಯರ್ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಈ ಭಾಗದ ಜನತೆ ಸದಾ ನೆನಪು ಮಾಡಿಕೊಳ್ಳಬೇಕು. ಅದರಲ್ಲೂ ನಾಲ್ವಡಿ ಕೃಷ್ಣರಾಜ ಒಡೆಯರ್ ಆಳ್ವಿಕೆ ಕಾಲ ಅವಿಸ್ಮರಣೀಯ ಕಾಲ ಘಟ್ಟವಾಗಿತ್ತು. ನಾಲ್ವಡಿಯವರು ಆಡಳಿತ, ಕೃಷಿ, ಶಿಕ್ಷಣ, ಮೀಸಲಾತಿ ಸೇರಿದಂತೆ ಹಲವಾರು ಕ್ಷೇತ್ರದಲ್ಲಿ ಸುಧಾರಣೆ ತಂದು ಈ ಭಾಗದ ಜನರು ನೆಮ್ಮದಿಯಿಂದ ಜೀವನ ನಡೆಸುವಂತೆ ಮಾಡಿದರು. ನಾಲ್ವಡಿಯವರು ಎಲ್ಲಿಗೆ ಹೋದರು ಸದಾ ಮೈಸೂರು ಜನರ ನೆಮ್ಮದಿಯನ್ನೇ ಬಯಸುತ್ತಿದ್ದರು ಎಂದರು.

ಬಿಜಿಎಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ.ಜೆ.ಎನ್.ರಾಮಕೃಷ್ಣೇಗೌಡ, ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿದರು. ಇದೇ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ಅಂಕಗಳಿಸಿದ ಶಾಲೆಗಳಿಗೆ, ಕನ್ನಡದಲ್ಲಿ 125ಕ್ಕೆ ಅಂಕಗಳಿಸಿದ ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅಧಿಕ ಅಂಕಗಳಿಸಿದ 50 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಾಹಿತಿ ಹಿರೇಮರಳಿ ಗ್ರಾಮದ ಶಂಕರಾನಂದ ಅವರು ಬರೆದ 'ದೇವರು ಕಾಣೆಯಾದನು' ಎಂಬ ಕವನ ಸಂಕಲನ ಬಿಡುಗಡೆ ಮಾಡಲಾಯಿತು.



ಪ್ರತಿಭಾ ಪುರಸ್ಕಾರ ಪುರಸ್ಕೃತರೊಂದಿಗೆ ಗಣ್ಯರು.

ಸಮಾರಂಭದಲ್ಲಿ ಕಸಾಪ ಅಧ್ಯಕ್ಷ ಮೇನಾಗರ ಪ್ರಕಾಶ್, ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ನಿವೃತ್ತ ಶಿಕ್ಷಕ ಚಂದ್ರಶೇಖರಯ್ಯ, ಉಪ ತಹಸೀಲ್ದಾರ್ ಸಂತೋಷ್, ಬಿಆರ್‌ಸಿ ಪ್ರಕಾಶ್, ಬಿಸಿಓ ಅನಿತ, ಪ್ರೌಢಶಾಲೆ ಸಹ ಶಿಕ್ಷಕ ಸಂಘದ ಅಧ್ಯಕ್ಷ ಕೇಶವಮೂರ್ತಿ, ಶಿಕ್ಷಕರ ಸಂಘದ ರಾಜ್ಯ ಸಂಘಟಕ ಕಾರ್ಯದರ್ಶಿ ಜಯರಾಮು, ಜೆಡಿಎಸ್ ತಾಲೂಕು ಅಧ್ಯಕ್ಷ ಎಸ್.ಎ.ಮಲ್ಲೇಶ್ ಹಾಜರಿದ್ದರು.

ಮಾನವೀಯತೆ ಮೆರೆದ ಸಮಾಜ ಸೇವಕ

ಹೃದಯಾಘಾತದಿಂದ ಸಾವನ್ನಪ್ಪಿದ ಚಾಲಕನ ಮೃತದೇಹ ಮಹಾರಾಷ್ಟ್ರದ ಪುಣೆಗೆ ಕೊಂಡೊಯ್ಯಲು ಆರ್ಥಿಕ ನೆರವು

ಕೆ.ಆರ್.ಪೇಟೆ,ಜೂ.23– ಮಹಾರಾಷ್ಟ್ರ ಮುಂಬೈ ಬಳಿಯ ಪುಣೆ ನಿವಾಸಿ ಎಳನೀರು ವಾಹನ ಚಾಲಕ ಪ್ರಭಾಕರ್ ಚೌದರಿ ಅವರು ಹೃದಯಾಘಾತದಿಂದ ನಿಧನರಾಗಿದ್ದರು. ಅವರ ಮೃತ ದೇಹವನ್ನು ಸ್ವಗ್ರಾಮಕ್ಕೆ ಕೊಂಡೊಯ್ಯುವ ವಾಹನಕ್ಕೆ ತಗುಲುವ ವೆಚ್ಚವನ್ನು ಸಮಾಜ ಸೇವಕರು ಹಾಗೂ ಆರ್‌ಟಿಓ ಅಧಿಕಾರಿ ಮಲ್ಲಿಕಾರ್ಜುನ್ ಅವರು ಉದಾರವಾಗಿ ಆರ್ಥಿಕ ನೆರವು ನೀಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಉತ್ತಮ ಎಳನೀರು ಮಾರುಕಟ್ಟೆಗೆ ಹೆಸರು ವಾಸಿಯಾಗಿರುವ ಕೆ.ಆರ್.ಪೇಟೆ ಎಳನೀರು ಮಾರುಕಟ್ಟೆಗೆ ಎಳನೀರು ವಾಹನವನ್ನು ಚಲಾಯಿಸಿಕೊಂಡು ಬಂದಿದ್ದ ಪ್ರಭಾಕರ್ ಚೌಧರಿ ಮಾರುಕಟ್ಟೆಯಲ್ಲೇ ಹೃದಯಾಘಾತಕ್ಕೆ ಒಳಗಾಗಿ ಅಸ್ವಸ್ಥಗೊಂಡಿದ್ದರು. ಆದರೆ ಆಸ್ಪತ್ರೆಗೆ ಸೇರಿಸುವಷ್ಟರಲ್ಲಿ ಮೃತಪಟ್ಟಿದ್ದರು. ಈ ಸಂದರ್ಭ ಮೃತ ಚಾಲಕನ ದೇಹವನ್ನು ಆತನ ಸ್ವಗ್ರಾಮಕ್ಕೆ ಕೊಂಡೊಯ್ಯಲು ಹಣಕಾಸಿನ ತೊಂದರೆಯಾಗಿತ್ತು.

ಈ ವಿಷಯವನ್ನು ತಾಲೂಕು ಎಳನೀರು ವರ್ತಕರ ಸಂಘದ ಪದಾಧಿಕಾರಿಗಳು ಆರ್‌ಟಿಓ ಮಲ್ಲಿಕಾರ್ಜುನ್ ಅವರ ಗಮನಕ್ಕೆ ತಂದರು. ತಕ್ಷಣ ಎಳನೀರು ವರ್ತಕರ ಮನವಿಗೆ ಸ್ಪಂದಿಸಿದ ಮಲ್ಲಿಕಾರ್ಜುನ್ ಅವರು ಉದಾರವಾಗಿ ಆರ್ಥಿಕ ನೆರವು ನೀಡುವ ಮೂಲಕ ಮಾನವೀಯತೆ ಮೆರೆದರಲ್ಲದೇ, ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಮೃತ ಚಾಲಕನ ಪಾರ್ಥೀವ ಶರೀರಕ್ಕೆ ಗೌರವ ಸಲ್ಲಿಸಿ ಕಂಬನಿ ಮಿಡಿದರು.

ಅತಿಕ್ರಮ ತೆರವುಗೊಳಿಸಲು ಸೂಚನೆ

ಸತ್ತೇಗಾಲ ಕಡೆಗದ್ದೆಕೆರೆ ಪರಿಶೀಲಿಸಿದ ಶಾಸಕ ಎಂ.ಆರ್. ಮಂಜುನಾಥ್

ಕೊಳ್ಳೇಗಾಲ, ಜೂ.23–ಗುಂಡಾಲ್ ಜಲಾಶಯ ವ್ಯಾಪ್ತಿಯ ಸತ್ತೇಗಾಲ ಕಡೆಗದ್ದೆಕೆರೆ ಒತ್ತುವರಿಯನ್ನು ತೆರವುಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಶಾಸಕ ಎಂ.ಆರ್. ಮಂಜುನಾಥ್ ಸೂಚನೆ ನೀಡಿದರು.

ತಾಲೂಕಿನ ಕಾಮಗೆರೆ ಸಮೀಪದ ಗುಂಡಾಲ್ ಜಲಾಶಯದ ಕಾಲುವೆಗಳನ್ನು ಪರಿಶೀಲಿಸಿ ಮಾತನಾಡಿದ ಅವರು, ಕಡೆಗದ್ದೆಕೆರೆಯನ್ನು ಸರ್ವೇ ಮಾಡಿ ಒತ್ತುವರಿ ಆಗಿರುವುದನ್ನು ತೆರವುಗೊಳಿಸಬೇಕು. ರೈತರಿಗೆ ಅನುಕೂಲವಾಗುವಂತೆ ಗುಂಡಾಲ್ ಜಲಾಶಯದ ಬಲ ಹಾಗೂ ಎಡದಂಡೆ ಕಾಲುವೆಗಳನ್ನು ನರೇಗಾ ಯೋಜನೆಯಡಿ ಹೂಳು ತೆಗೆದು ಸಂಪೂರ್ಣವಾಗಿ ಸ್ವಚ್ಛಗೊಳಿಸಬೇಕು ಎಂದು ತಿಳಿಸಿದರು.

ಮಳೆ ಬಂದಾಗ ಜಲಾಶಯದಲ್ಲಿ ನೀರು ಶೇಖರಣೆಯಾಗುವಂತೆ ಕ್ರಮ ವಹಿಸಬೇಕು. ನೀರನ್ನು ಹರಿಬಿಟ್ಟಾಗ ಜಮೀನುಗಳಿಗೆ ನೀರು ಸರಾಗವಾಗಿ ಹರಿಯುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಇದೇ ವೇಳೆ ತಾಲೂಕಿನ ಕಡೆಗದ್ದೆ ಬಯಲು, ಧನಗೆರೆ ಜಾಗೀರ್‌ದಾರರ ಅಣೆಕಟ್ಟೆ, ಸತ್ತೇಗಾಲ ಏತ ನೀರಾವರಿ, ಕಬಿನಿ



ಕಾಮಗೆರೆ ಸಮೀಪದ ಗುಂಡಾಲ್ ಜಲಾಶಯ ಕಾಲುವೆಗಳನ್ನು ಶಾಸಕ ಎಂ.ಆರ್.ಮಂಜುನಾಥ್ ಅಧಿಕಾರಿಗಳೊಂದಿಗೆ ಪರಿಶೀಲಿಸಿದರು.

ಬಲದಂಡೆ ನಾಲೆ, ತೆಳ್ಳನೂರು ವಿತರಣಾ ನಾಲೆಗಳಿಗೆ ಭೇಟಿ ನೀಡಿದ ಶಾಸಕರು, ಕಾಲುವೆಗಳಲ್ಲಿ ಹೂಳು ತುಂಬಿರುವುದನ್ನು ಕಂಡು ಅಧಿಕಾರಿಗಳ ವಿರುದ್ಧ ಗರಂ ಆದರು. ಬಳಿಕ ಅಧಿಕಾರಿಗಳೊಂಗೆ ಜಲಾಶಯದ ಬಲ ಹಾಗೂ ಎಡದಂಡೆ ಕಾಲುವೆಗಳ ಅಭಿವೃದ್ಧಿ ಬಗ್ಗೆ ಚರ್ಚಿಸಿ, ಮಾಹಿತಿ ಪಡೆದರು.

ಇದೇ ವೇಳೆ ನೀರಾವರಿ ಕಾರ್ಯಪಾಲಕ ಇಂಜಿನಿಯರ್ ರಮೇಶ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಾದ ರಾಮಕೃಷ್ಣ, ಕರುಣಾಮಯಿ, ಸಹಾಯಕ ಇಂಜಿನಿಯರ್ ನವೀನ್, ಬಸವೇಶ್, ಜೆಡಿಎಸ್ ಜಿಲ್ಲಾ ವಕ್ತಾರ ಸೈಯದ್ ಅಕ್ರಂ, ಸತ್ತೇಗಾಲ ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆಂಪರಾಜು, ಮಾಜಿ ಸದಸ್ಯರಾದ ಪ್ರಭು, ಮುಖಂಡರಾದ ಚಿನ್ನ ವೆಂಕಟ್, ಮಂಜೇಶ್‌ಗೌಡ, ಗೋಪಾಲ್ ನಾಯಕ, ಡಿ.ಕೆ.ರಾಜು, ಎಸ್.ಆರ್.ಮಹಾದೇವ್, ಜಿ.ಮಹಾದೇವ್, ಅರುಲ್‌ಸ್ವಾಮಿ ಪನ್ನಾಡಿ ನಾಯಕ್, ಸೋಮಣ್ಣ ಇನ್ನಿತರಿದ್ದರು.

ಸರ್ಕಾರಗಳು ಉದ್ಯೋಗ ಸೃಷ್ಟಿಸಬೇಕು

● ಶಾಸಕ ಸಿ.ಪುಟ್ಟರಂಗಶೆಟ್ಟಿ ● 523 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಚಾಮರಾಜನಗರ, ಜೂ.23–ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಗುಣವಾಗಿ ಸರ್ಕಾರಗಳು ಉದ್ಯೋಗ ಸೃಷ್ಟಿಸಬೇಕು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ, ಎನ್‌ಎಸ್‌ಯುಐನ ಜಿಲ್ಲಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಳೆದ ಬಾರಿ ಜಿಲ್ಲೆ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶದಲ್ಲಿ 12ನೇ ಸ್ಥಾನದಲ್ಲಿದ್ದು, ಈ ಬಾರಿ 8ನೇ ಸ್ಥಾನಕ್ಕೆ ಬಂದಿದೆ. ಆದರೆ, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಕಳೆದ ಬಾರಿ 9ನೇ ಸ್ಥಾನದಲ್ಲಿದ್ದು, ಈ ಬಾರಿ 24ನೇ ಸ್ಥಾನಕ್ಕೆ ಕುಸಿದಿದೆ. ಇದರ ಬಗ್ಗೆ ಚಿಂತಿಸಬೇಕಿದೆ. ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಕಡಿಮೆ ಬರಲು ಕಾರಣ ಏನು ಎಂಬುವುದನ್ನು ಚಿಂತಿಸಬೇಕು. ಕೆಲ ಮಕ್ಕಳು 80, 90 ಅಂಕ ಪಡೆದರೆ ಸಾಲದು ಎಂದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಬಾಬಾ ಸಾಹೇಬ್ ಡಾ.ಬಿ.ಆರ್.



ಚಾ.ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಅಂಬೇಡ್ಕರ್ ಅವರು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ ಪರಿಣಾಮ ದೇಶದಲ್ಲಿ ಕೆಲವರಿಗೆ ಮೀಸಲಾಗಿದ್ದ ಶಿಕ್ಷಣ ಸರ್ವರಿಗೂ ದೊರೆಯುತ್ತಿದೆ ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.80 ಮತ್ತು ದ್ವಿತೀಯ ಪಿಯುಸಿ ಶೇ.85 ಕ್ಕಿಂತ ಹೆಚ್ಚು ಅಂಕ ಪಡೆದ 523 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಸಿಮ್ಸ್ ಆಸ್ಪತ್ರೆ ವೈದ್ಯ ಡಾ.ಮಹೇಶ್, ಸರ್ಕಾರಿ ವಕೀಲರಾದ ಅರುಣ್ ಕುಮಾರ್, ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಶಾಸಕ ಗಣೇಶಪ್ರಸಾದ್, ನಳಂದ ವಿಶ್ವವಿದ್ಯಾಲಯದ ಕಾರ್ಯದರ್ಶಿ ಭಂತೆ ಬೋಧಿರತ್ನ ಬಂತೇಜಿ, ಕಾಡಾಧ್ಯಕ್ಷ ಪಿ.ಮರಿಸ್ವಾಮಿ, ಎನ್‌ಎಸ್‌ಯುಐ ರಾಜ್ಯಾಧ್ಯಕ್ಷ ಕೀರ್ತಿ ಗಣೇಶ್, ಜಿಲ್ಲಾಧ್ಯಕ್ಷ ಮೋಹನ್ ನಗು, ಚೂಡ ಅಧ್ಯಕ್ಷ ಮಹಮ್ಮದ್ ಅಸ್ಗರ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ರವಿಕುಮಾರ್, ಮಹಿಳಾಧ್ಯಕ್ಷೆ ಲತಾಜತ್ತಿ, ಎಪಿಎಂಸಿ ನಿರ್ದೇಶಕ ಆಲೂರು ಪ್ರದೀಪ್, ಜಿಪಂ ಮಾಜಿ ಸದಸ್ಯ ಎ.ಆರ್.ಬಾಲರಾಜು, ಯುವ ಕಾಂಗ್ರೆಸ್ ಜಿಲ್ಲಾ ಕಾರ್ಯಾಧ್ಯಕ್ಷ ಮಧುಸೂದನ್, ಎನ್‌ಎಸ್‌ಯುಐ ಪ್ರಧಾನ ಕಾರ್ಯದರ್ಶಿ ಉಮಾಶ್ರೀ, ಕಾರ್ಯದರ್ಶಿ ಜಿ.ಎನ್.ಲೋಕೇಶ್, ಸ್ವಾಮಿ, ಉಪಾಧ್ಯಕ್ಷ ರಫೀಕ್ ಅಲಿ, ಸಾಮಾಜಿಕ ಜಾಲತಾಣ ಅಧ್ಯಕ್ಷ ಸೈಯದ್ ಮುಸಾಯಿಬ್ ಮತ್ತಿತರರು ಇದ್ದರು.

ಬಿಸಲವಾಡಿ ಪಿಎಸಿಎಸ್ ಅಧ್ಯಕ್ಷರಾಗಿ ಶಿವಕುಮಾರ್ ಅವಿರೋಧ ಆಯ್ಕೆ



ಚಾಮರಾಜನಗರ: ತಾಲೂಕಿನ ಬಿಸಲವಾಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಸ್.ಶಿವಕುಮಾರ್, ಉಪಾಧ್ಯಕ್ಷೆಯಾಗಿ ರಾಜಮ್ಮ ಅವಿರೋಧವಾಗಿ ಆಯ್ಕೆಯಾದರು.

ತೆರವಾಗಿದ್ದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸಂಘದ ಕಚೇರಿಯಲ್ಲಿ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಎಸ್.ಶಿವಕುಮಾರ್, ಉಪಾಧ್ಯಕ್ಷ ಸ್ಥಾನಕ್ಕೆ ರಾಜಮ್ಮ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿಯಾಗಿದ್ದ ಸಹಕಾರ ಇಲಾಖೆ ಅಧಿಕಾರಿ ತ್ಯಾಗರಾಜು ಅವಿರೋಧ ಆಯ್ಕೆ ಘೋಷಿಸಿದರು.

ಸಂಘದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಸಿದ್ದನಾಯಕ, ಎಸ್.ಮಂಜುನಾಥ, ಸಿದ್ದಮಲ್ಲಪ್ಪ, ಎಲ್.ಶಿವಕುಮಾರ್, ಶಿವಸ್ವಾಮಿ, ಎಸ್.ಸಿದ್ದೇಗೌಡ, ಸಿದ್ದಶೆಟ್ಟಿ, ಸಿಇಓ ಅಶೋಕ್, ಸಿಬ್ಬಂದಿ ಪ್ರಸನ್ನ, ನಾಗರಾಜು, ಗ್ರಾಪಂ ಮಾಜಿ ಅಧ್ಯಕ್ಷ ಬಿ.ಶಾಂತಮಲ್ಲಪ್ಪ, ಸದಸ್ಯ ಸಿ.ಮಹದೇವಪ್ಪ ಮುಖಂಡರಾದ ಎಸ್.ಗಿರೀಶ, ಎಸ್.ಉಮೇಶ್, ಗ್ರಾಪಂ ಅಧ್ಯಕ್ಷೆ ರಮ್ಯ ನಾಗರಾಜು, ಸದಸ್ಯರಾದ ನಾಗರತ್ನಮ್ಮ ನಾರಾಯಣ ನಾಯಕ, ಗೀತಾ ಚನ್ನಬಸಪ್ಪ, ಡೇರಿ ಬಸವಣ್ಣ, ಷಡಕ್ಷರಿ, ಬಿ.ಎಂ.ಶಿವಾನಂದ, ಎಂ.ರವಿಬಿಸಲವಾಡಿ ಇದ್ದರು.



ಯೋಗ ದಿನಾಚರಣೆ....

ಯಳಂದೂರಿನ ಎಸ್‌ಡಿವಿಎಸ್ ವಿದ್ಯಾ ಸಂಸ್ಥೆ ಆವರಣದಲ್ಲಿ ಯೋಗ ದಿನಾಚರಣೆ ನಡೆಯಿತು. ತಾಲೂಕು ಆರೋಗ್ಯಾಧಿಕಾರಿ ಡಾ.ತನುಜಾ, ಗುಂಬಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯಾಧಿಕಾರಿ ಪ್ರಿಯದರ್ಶಿನಿ, ಸಂಸ್ಥೆಯ ಸಂಸ್ಥಾಪಕ ವೀರಭದ್ರಪ್ಪ, ಪ್ರಾಂಶುಪಾಲ ವಿಖ್ಯಾತ್, ಮುಖ್ಯ ಶಿಕ್ಷಕ ಕೆ.ವಿ.ವೀರಭದ್ರಸ್ವಾಮಿ ಇದ್ದರು.

ಮೂರನೇ ಪುಟದಿಂದ

ಸೂರಜ್ ರೇವಣ್ಣ ಜೈಲಿಗೆ

ಸಲ್ಲಿಸುವುದಾಗಿ ಬ್ಲಾಕ್‌ಮೇಲ್ ಮಾಡಿದ್ದಾನೆ ಎಂದು ಹೊಳೆನರಸೀಪುರ ಟೌನ್ ಠಾಣೆಯಲ್ಲಿ ಜೂ.21ರಂದು ಪ್ರಕರಣ ದಾಖಲಿಸಿದ್ದಾರೆ. ಅದೇ ವೇಳೆ ಜೂ.22ರಂದು (ಶನಿವಾರ) ಸಂಜೆ ಸೂರಜ್ ರೇವಣ್ಣ ವಿರುದ್ಧ ಸಂತ್ರಸ್ತ ನೀಡಿದ್ದ ದೂರು ಹೊಳೆನರಸೀಪುರ ಗ್ರಾಮಾಂತರ ಠಾಣೆಯಲ್ಲಿ ದಾಖಲಾಗಿತ್ತು. ಅದೇ ವೇಳೆ ಸೂರಜ್ ರೇವಣ್ಣ ತನ್ನ ಪರವಾಗಿ ಶಿವಕುಮಾರ್ ನೀಡಿರುವ ದೂರಿಗೆ ಸಂಬಂಧಿಸಿದಂತೆ ಹೇಳಿಕೆ ನೀಡಲಿರುವುದಾಗಿ ಪೊಲೀಸರಿಗೆ ತಿಳಿಸಿದ ಹಿನ್ನೆಲೆಯಲ್ಲಿ ಅವರನ್ನು ಶನಿವಾರ ಸಂಜೆ ಹಾಸನ ಜಿಲ್ಲಾ ಸೆನ್ ಠಾಣೆಗೆ ಕರೆಸಿಕೊಳ್ಳಲಾಯಿತು. ಈ ವೇಳೆ ಹಾಸನ ಜಿಲ್ಲಾ ಎಸ್ಪಿ ಮಹಮ್ಮದ್ ಸುಜೀತಾ ಅವರು ಪ್ರಕರಣದ ತನಿಖಾಧಿಕಾರಿಯಾಗಿ ಸಕಲೇಶಪುರ ಡಿವೈಎಸ್‌ಪಿ ಪ್ರಮೋದ್ ಕುಮಾರ್ ಅವರನ್ನು ನೇಮಕ ಮಾಡಿದ್ದರು.

ಈ ವೇಳೆ ಪೊಲೀಸರು ಹೊಳೆನರಸೀಪುರ ಗ್ರಾಮಾಂತರ ಠಾಣೆಯಲ್ಲಿ ಸೂರಜ್ ವಿರುದ್ಧ ದಾಖಲಾಗಿದ್ದ ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಪ್ರಮೋದ್ ಕುಮಾರ್ ಅವರು ಸೂರಜ್ ರೇವಣ್ಣ ಅವರನ್ನು ರಾತ್ರಿಯಿಡೀ ಸುದೀರ್ಘವಾಗಿ ವಿಚಾರಣೆಗೊಳಪಡಿಸಿ ಭಾನುವಾರ ಮುಂಜಾನೆ 4 ಗಂಟೆಗೆ ಅವರನ್ನು ಅಧಿಕೃತವಾಗಿ ಬಂಧಿಸಿದ್ದಾರೆ. ನಂತರ ಸೂರಜ್ ರೇವಣ್ಣ ಅವರನ್ನು ಬೆಂಗಳೂರಿಗೆ ಕರೆದೊಯ್ದ ಹೊಳೆನರಸೀಪುರ ಗ್ರಾಮಾಂತರ ಠಾಣೆ ಪೊಲೀಸರು ಬೌರಿಂಗ್ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆಗೊಳಪಡಿಸಿದ ನಂತರ ಕೋರಮಂಗಲದಲ್ಲಿರುವ 42ನೇ ಎಸಿಎಂ ನ್ಯಾಯಾಧೀಶರಾದ ಶಿವಕುಮಾರ್ ಮುಂದೆ ಹಾಜರುಪಡಿಸಿದರು. ಈ ವೇಳೆ ನ್ಯಾಯಾಧೀಶರು ಸೂರಜ್ ರೇವಣ್ಣ ಅವರನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದು, ಪೊಲೀಸರು ಸೂರಜ್‌ನನ್ನು ಪರಪ್ಪನ ಅಗ್ರಹಾರ ಜೈಲಿಗೆ ಕರೆದೊಯ್ದು ಬಿಟ್ಟರು.

ಲೈಂಗಿಕ ದೌರ್ಜನ್ಯ ಆರೋಪ ಎದುರಿಸುತ್ತಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಹಾಗೂ ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿಯಾಗಿರುವ ಅವರ ಸಹೋದರ ಸೂರಜ್ ರೇವಣ್ಣ ಇಬ್ಬರೂ ಪರಪ್ಪನ ಅಗ್ರಹಾರ ಜೈಲು ಸೇರಿದಂತಾಗಿದೆ. ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯದ ಸಂತ್ರಸ್ತೆಯ ಅಪಹರಣ ಪ್ರಕರಣದಲ್ಲಿ ಈ ಸಹೋದರರ ತಂದೆ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಮತ್ತು ತಾಯಿ ಭವಾನಿ ರೇವಣ್ಣ ಜಾಮೀನಿನ ಮೇಲಿದ್ದಾರೆ. ಒಟ್ಟಾರೆ ಹೆಚ್.ಡಿ.ರೇವಣ್ಣ ಕುಟುಂಬ ಲೈಂಗಿಕ ಪ್ರಕರಣದಲ್ಲಿ ಮತ್ತಷ್ಟು ಸಂಕಷ್ಟಕ್ಕೆ ಒಳಗಾಗಿದೆ.

ನಿರ್ಧಾರಕ್ಕೆ ರಾಜ್ಯ ಸರ್ಕಾರ ಆಕ್ಷೇಪ

ಈಶ್ವರ ಖಂಡ್ರೆ ಹೇಳಿದ್ದಾರೆ. ದಟ್ಟ ಕಾಡು ನಾಶವಾದರೆ ಮಣ್ಣಿನ ಸವಕಳಿ ಪ್ರವಾಹದ ಸಮಸ್ಯೆ ಕಾಡಲಿದೆ. ಇನ್ನು ಅರಣ್ಯ ಪ್ರದೇಶದಲ್ಲಿ ಹೊಸ ಗಣಿ ಗುತ್ತಿಗೆಗೆ ಅನುಮತಿ ನೀಡದಂತೆ ಈ ಹಿಂದೆ, ಅಂದರೆ 2016ರ ಮಾರ್ಚ್ 28ರಂದು ಅರಣ್ಯ ಇಲಾಖೆಯ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಅಧ್ಯಕ್ಷತೆಯಲ್ಲಿ ನಿರ್ಣಯಿಸಲಾಗಿದೆ. ಗಣಿಗಾರಿಕೆ ನಡೆಯಲಿರುವ ಜಾಗ ದರೋಜಿ ಕರಡಿ ಧಾಮದಿಂದ ಕೇವಲ 19 ಕಿಲೋಮೀಟರ್ ದೂರದಲ್ಲಿದೆ. ಶ್ರೀಗಂಧ, ತೇಗ, ಬಿದಿರು, ದಿಂಡಾಲ, ಹೊನ್ನೆ, ರಕ್ತ ಭೂತಾಳ, ಅಂಟುವಾಳ, ಬಿಲ್ವ, ಕಲ್ಲು, ಮಾವು, ಅರಳಿ, ಕಾಡುಬನ್ನಿ ಸೇರಿದಂತೆ ಸಾವಿರಾರು ಮರಗಳಿಗೆ ಕುತ್ತು ಬರಲಿದೆ. ಹೀಗಾಗಿ ಗಣಿಗಾರಿಕೆಗೆ ಅನುಮತಿ ನೀಡದಂತೆ ಸಾಮಾಜಿಕ ಹೋರಾಟಗಾರರು ಪರಿಸರ ಹೋರಾಟಗಾರರ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಗಣಿಗಾರಿಕೆ ನಡೆಸಲು ಹೊರಟ ಕಂಪನಿಯ ವಿರುದ್ಧವು ಸಾಕಷ್ಟು ಲೋಪದೋಷಗಳ ಆರೋಪವಿದೆ. ಅರಣ್ಯ ನಿಯಮಗಳನ್ನು ಈ ಹಿಂದೆ ಉಲ್ಲಂಘನೆ ಮಾಡಿ ಈ ಕಂಪನಿ ಇಕ್ಕಟ್ಟಿಗೆ ಸಿಲುಕಿತ್ತು. ಈ ಎಲ್ಲಾ ದೃಷ್ಟಿಯಿಂದ ಸದ್ಯ ಅರಣ್ಯ ತಿರುವಳಿ ಗುತ್ತಿಗೆಗೆ ಸಹಿ ಹಾಕದಂತೆ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆಂದು ತಿಳಿದುಬಂದಿದೆ.

ಸಿಬಿಐ ತನಿಖೆಗೆ: ಎಫ್‌ಐಆರ್ ದಾಖಲು

ಹಾಕುವಿಕೆ ಪ್ರಕರಣಗಳು ವರದಿಯಾಗಿವೆ ಎಂದು ಶಿಕ್ಷಣ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪರೀಕ್ಷಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆಗಾಗಿ, ಸಮಗ್ರ ತನಿಖೆಗಾಗಿ ಪ್ರಕರಣವನ್ನು ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ಹಸ್ತಾಂತರಿಸಲು ಪರಿಶೀಲನೆಯ ನಂತರ ನಿರ್ಧರಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

'ಪುಷ್ಪಕ್' ಸುರಕ್ಷಿತ ಲ್ಯಾಂಡಿಂಗ್

ಭಾರತೀಯ ವಾಯುಪಡೆಯ ಚಿನೂಕ್ ಹೆಲಿಕಾಪ್ಟರ್ ನಿಂದ 'ಪುಷ್ಪಕ್'ನ್ನು ಬಿಡುಗಡೆ ಮಾಡಲಾ ಗಿದೆ ಎಂದು ಇಸ್ರೋ ಹೇಳಿಕೆ ತಿಳಿಸಿದೆ. ರನ್ ವೇಯಿಂದ 4.5 ಕಿಮೀ ದೂರದ ಬಿಡುಗಡೆಯ ಸ್ಥಳದಿಂದ, ಪುಷ್ಪಕ್ ಸ್ವಾಯತ್ತವಾಗಿ ಅಡ್ಡ-ಶ್ರೇಣಿಯ ತಿದ್ದುಪಡಿ ತಂತ್ರಗಳನ್ನು ನಿರ್ವಹಿಸಿದ್ದು, ರನ್‌ವೇ ಸೆಂಟರ್‌ಲೈನ್‌ನಲ್ಲಿ ನಿಖರವಾದ ಸಮತಲ ಲ್ಯಾಂಡಿಂಗ್ ಮಾಡಿದರು. ಮರುಬಳಕೆ ಮಾಡಬಹುದಾದ ಲಾಂಚ್ ವೆಹಿಕಲ್ ಅಭಿವೃದ್ಧಿಗೆ ಅಗತ್ಯವಾದ ಅತ್ಯಂತ ನಿರ್ಣಾಯಕ ತಂತ್ರಜ್ಞಾನಗಳನ್ನು ಪಡೆದುಕೊಳ್ಳುವಲ್ಲಿ ಇಸ್ರೊ ಮಹತ್ವದ್ದಾಗಿದೆ. ಈ ಕಾರ್ಯಾಚರಣೆಯ ಮೂಲಕ, ಭವಿಷ್ಯದ ಕಕ್ಷೀಯ ಮರು-ಪ್ರವೇಶ ಮಿಷನ್‌ಗೆ ಅತ್ಯಗತ್ಯವಾದ ರೇಖಾಂಶ ಮತ್ತು ಲ್ಯಾಟರಲ್ ಪ್ಲೇನ್ ದೋಷ ತಿದ್ದುಪಡಿಗಳನ್ನು ಪೂರೈಸುವ ಸುಧಾರಿತ ಮಾರ್ಗದರ್ಶಿ ಅಲ್ಗಾರಿದಮ್‌ನ್ನು ಮೌಲ್ಯೀಕರಿಸಲಾಗಿದೆ ಎಂದು ಇಸ್ರೊ ಹೇಳಿದೆ.

ಸ್ಮಾರಕ ಸೆಪ್ಟೆಂಬರ್ ವೇಳೆಗೆ ಪೂರ್ಣ

ಪಾರಂಪರಿಕ ಶೈಲಿಯಲ್ಲಿ ಚೌಕಾಕಾರದಲ್ಲಿ ಸ್ಮಾರಕ ನಿರ್ಮಿಸಲಾಗುತ್ತದೆ. ಇದಕ್ಕಾಗಿ ಈ ಹಿಂದೆಯೇ ಚಾಮರಾಜನಗರದಿಂದ ಚಾಮರಾಜನಗರ ಜಿಲ್ಲೆಯ ಕ್ವಾರಿ ಮಾಲೀಕರಾದ ಹೆಚ್.ಎಂ.ಪುಟ್ಟಮಾದಯ್ಯ ಬಿನ್ ಪಟೇಲ್ ಮಾದಪ್ಪ ಎಂಬುವರು 33 ಕ್ಯೂಬಿಕ್ ಮೀಟರ್ ಕಪ್ಪು ಶಿಲೆ(ಉತ್ಕೃಷ್ಟ ಕಲ್ಲು)ಯನ್ನು ಸರ್ಕಾರಕ್ಕೆ ರಾಜದನ ಹಾಗೂ ವಿವಿಧ ಶುಲ್ಕ ತಾವೇ ಪಾವತಿಸಿ ಉಚಿತವಾಗಿ ಸ್ಮಾರಕ ನಿರ್ಮಾಣಕ್ಕೆ ಕೊಡುಗೆ ನೀಡಿದ್ದರು. ಅಲ್ಲದೆ ಕ್ವಾರಿಯಿಂದ 300 ಟನ್ ತೂಕದ ಕಚ್ಚಾಶಿಲೆಯನ್ನು ಚಾಮರಾಜನಗರದ ಎಸ್‌ವಿಜಿ ಗ್ರಾನೈಟ್ಸ್ ಮಾಲೀಕ ಎ.ಶ್ರೀನಾಥ್ ಬಿನ್ ಶಿವಶಂಕರ್‌ರೆಡ್ಡಿ ಯಾವುದೇ ಶುಲ್ಕ ಪಡೆಯದೇ ಸ್ಮಾರಕ ನಿರ್ಮಾಣಕ್ಕೆ ಅನುಗುಣವಾಗಿ ಬೇಕಾದ ಆಕಾರದಲ್ಲಿ ಕತ್ತರಿಸಿಕೊಟ್ಟಿದ್ದರು. ಅಲ್ಲದೆ, ಹಾಸನದಿಂದ ಹಸಿರು ಗ್ರಾನೈಟ್ ಅನ್ನು ತಂದು ಸುರಕ್ಷಿತವಾಗಿಡಲಾಗಿತ್ತು. ಒಂದರ ಮೇಲೊಂದರಂತೆ ಜೋಡಣೆ ಮಾಡಬೇಕಾಗಿರುವುದರಿಂದ ಬೃಹತ್ ಗಾತ್ರದ ಕಲ್ಲನ್ನು ಅಗತ್ಯಕ್ಕೆ ಅನುಗುಣವಾಗಿ ಕೆತ್ತನೆ ಮಾಡಲಾಗುತ್ತಿದೆ.

ಪುಣೆ ಕಮಾಂಡರ್‌ಗೆ ಪತ್ರ: ಮೈಸೂರಲ್ಲಿ ನಿರ್ಮಾಣವಾಗುತ್ತಿರುವ ಯುದ್ಧಸ್ಮಾರಕದಲ್ಲಿಡಲು ಬಳಸಿದ ಯುದ್ಧ ಟ್ಯಾಂಕರ್, ಗನ್ ಸೇರಿದಂತೆ ಇನ್ನಿತರ ಯುದ್ಧಪರಿಕರ ನೀಡುವಂತೆ ಈ ಹಿಂದೆಯೇ ಜಿಲ್ಲಾಧಿಕಾರಿಗಳ ಮೂಲಕ ಪುಣೆಯಲ್ಲಿರುವ ಸದರನ್ ಕಮಾಂಡರ್‌ಗೆ ಸ್ಟೇಟ್‌ಮೆಂಟ್ ಆಫ್ ಕೇಸ್ ಪತ್ರ ಬರೆಯಲಾಗಿದ್ದು, ಇದಕ್ಕೆ ಈ ಹಿಂದೆ ರಕ್ಷಣಾ ಸಚಿವರಾಗಿದ್ದ ರಾಜನಾಥ್‌ಸಿಂಗ್ ಅವರು ಒಪ್ಪಿಗೆ ನೀಡಿದ್ದಾರೆ. ಸ್ಮಾರಕ ನಿರ್ಮಾಣವಾಗುತ್ತಿದ್ದಂತೆಯೇ ಟ್ಯಾಂಕರ್ ಹಾಗೂ ಗನ್‌ಗಳು ಮೈಸೂರಿಗೆ ತರಲಾಗುತ್ತದೆ. ಸ್ಮಾರಕದಲ್ಲಿ ಒಂದು ಭಾಗದಲ್ಲಿ ಮೂರು ವಿಭಾಗದ ಸೈನ್ಯದ ಸಂಕೇತ, ಉಳಿದ ಮೂರು ಬದಿಯಲ್ಲಿ ಭೂ ಸೇನೆ, ವಾಯು ಸೇನೆ, ನೌಕಾದಳದ ಮಹತ್ವ ಸಾರುವ ಯುದ್ಧ ಟ್ಯಾಂಕರ್‌ಗಳು, ಯುದ್ಧ ವಿಮಾನಗಳು, ನೌಕೆ, ಗನ್ ಸೇರಿದಂತೆ ಯುದ್ಧದಲ್ಲಿ ಬಳಸುವ ಪರಿಕರಗಳನ್ನು ಪ್ರದರ್ಶನಕ್ಕಿಡಲು ಉದ್ದೇಶಿಸಲಾಗಿದೆ.

24 ವರ್ಷದ ಪ್ರಯತ್ನ: ಮಾಜಿ ಸೈನಿಕರ ಸಂಘದ ಸದಸ್ಯರು ಮೈಸೂರಲ್ಲಿ ಯುದ್ಧ ಸ್ಮಾರಕ ನಿರ್ಮಾಣಕ್ಕೆ ಸಂಬಂಧಿಸಿದಂತೆ 2010ರಲ್ಲಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದರು. ಆದರೆ 2012ರಲ್ಲಿ ಮತ್ತೆ ಸ್ಮಾರಕ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಕ್ರಿಯೆ ಆರಂಭವಾಗಿತ್ತು. ಉಪ ವಿಭಾಗಾಧಿಕಾರಿಯಾಗಿದ್ದ ಸಿ.ಎಲ್.ಆನಂದ್ ಅವರು ಯುದ್ಧ ಸ್ಮಾರಕ ನಿರ್ಮಾಣಕ್ಕೆ ಅಗತ್ಯವಾದ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ್ದು, ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಇದಕ್ಕೆ ಸರ್ಕಾರ ಅನುಮತಿ ನೀಡಿತ್ತು. ಇದೀಗ 24 ವರ್ಷಗಳ ಸುದೀರ್ಘ ಅವಧಿ ನಂತರ ಸ್ಮಾರಕ ನಿರ್ಮಾಣ ಕಾರ್ಯ ಅಂತಿಮ ಹಂತಕ್ಕೆ ಬಂದಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 2496522/23

FOR RENT
3000 sft for Office, Pharmacy, Physiotherapy, Diagnostics, Companies, showroom, Godown."Prime location, jxn. of Ring road & KRS road. Next to Pollution Control Office, Sapient College & opp. Royal Inn, Mysore.
9880007900

ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಆಫೀಸ್ ಸೇಲ್ಸ್ ಎಕ್ಸಿಕ್ಯೂಟಿವ್ SSLC-PUC ವಿಶ್ವೇಶ್ವರನಗರ, ಸ್ಟರ್ಲಿಂಗ್ ಥಿಯೇಟರ್ ಹತ್ತಿರ, ಮೈಸೂರು
Salary 10,000 Work time 10 am to 7 pm
8095149172

HOME APPLIANCES SERVICE
ಫ್ರಿಡ್ಜ್, ವಾಶಿಂಗ್‌ಮೇಶೀನ್, ಮೈಕ್ರೋ ವೋವನ್, ಎಲ್‌ಸಿಡಿ, ಸೋಲಾರ್, ಯುಪಿಎಸ್, ಗೀಸರ್, ಸೇಲ್ಸ್ ಅಂಡ್ ಸರ್ವೀಸ್, ನಿಮ್ಮ ಮನೆಯ ಹತ್ತಿರ ದೊರೆಯುತ್ತದೆ.
Contact: Srinivas
9379699229

HOUSE FOR RENT
4 BHK / 2BHK
GF, Heart of the city
Basaveswara Road
9845293278

ಉಚಿತ ಕುಡಿತ ಬಿಡಿಸುವ ಶಿಬಿರ
ಮೈಸೂರಿನ ಮನೋಶ್ರೇಷ್ಠ ಪುನರ್ವಸತಿ ಕೇಂದ್ರದಲ್ಲಿ ಜೂನ್ 25 ರಿಂದ 21 ದಿನಗಳ ಕಾಲ ವ್ಯಸನಮುಕ್ತ ಶಿಬಿರವನ್ನು ಏರ್ಪಡಿಸಲಾಗಿದೆ. ಊಟ ವಸತಿ ಮತ್ತು ಇನ್ನಿತರ ಸೌಲಭ್ಯಗಳು ಉಚಿತ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
7019073118
8123297920

WALK IN INTERVIEW
ಶಾಲೆಯಲ್ಲಿ ಕೆಲಸ ಮಾಡಲು ಬಸ್ ಡ್ರೈವರ್ ಮತ್ತು ಸೆಕ್ಯೂರಿಟಿ ಕುಟುಂಬ ಬೇಕಾಗಿದ್ದಾರೆ
ಉಚಿತ ವಸತಿ ಸೌಲಭ್ಯವಿದೆ.
ಸಂಬಳ:15,000 to 20,000
9538787037
9535332633

WANTED
For an Industry in Mysore @ Metagalli Technicians; ITI Electrical / Electronics/ Fitters
Contact between 10.00 am to 5.00 pm
9901178588

MUDA APPROVED
30x40 N/F ಸೈಟು
ಬ್ಯಾಂಕ್ ಲೋನ್ ಲಭ್ಯ
ಚಾಮುಂಡಿ ಬೆಟ್ಟದ ಹಿಂಭಾಗ LBS ಲೇಔಟ್ ನಂತರ
Call: 8050653124

DTCP Approved Layout
21x40 E/F ಸೈಟು @ Rs. 11.20 ಲಕ್ಷ
ಚಾಮುಂಡಿ ಬೆಟ್ಟದ ಹಿಂಭಾಗ ಮಾರಶೆಟ್ಟಿಹಳ್ಳಿ ನಂತರ.
Call: 9538583377

SITE FOR SALE
1330 sq.ft. E/F, Gokulam 3rd Stage, Mysore.
Mob: 9844964458

ಸೈಟ್ ಫಾರ್ ಸೇಲ್
ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್ 8.7 ಮೀ x 12 ಮೀ.
ಮುಡಾ ಖಾತೆ.
ಬೆಲೆ: 35 ಲಕ್ಷ.
Mob: 93421 23373

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್ & ಸರ್ವೀಸ್
10 years Guarantee
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145


ಪಿಜಿ ಬಾಡಿಗೆಗೆ ಇದೆ
ರೂಮುಗಳು (ಅಟ್ಯಾಚ್ಡ್ ಬಾತ್) ಹಾಗೂ ದೊಡ್ಡ ಡೈನಿಂಗ್ ಹಾಲ್ ಇರುವ ಪಿಜಿ
ವಿಳಾಸ : ಸುಯೋಗ್ ಆಸ್ಪತ್ರೆ ಹತ್ತಿರ, ಸಾಯಿಬಾಬಾ ದೇವಸ್ಥಾನ, ರಾಮಕೃಷ್ಣ ನಗರ, ಮೈಸೂರು.
Call : 8867150636 / 94488 90254

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಕೇರಳ ಕೊಳ್ಳೇಗಾಲದ ಶ್ರೀ ಜ್ಯೋತಿಷ್ಯರು
ಪಂ॥ ರಾಜು ಗುರೂಜಿ
Mob: 99022 39655
ಸತತವಾಗಿ 12 ವರ್ಷ ಕೇರಳ ಕೊಳ್ಳೇಗಾಲದ ವಿದ್ಯೆಯನ್ನು ಸಿದ್ಧಿ ಮಾಡಿಕೊಂಡಿರುವ ದಿವ್ಯ ಜ್ಞಾನಿ ರಾಜು ಗುರೂಜಿಯವರು ಸ್ತ್ರೀ-ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ಭಾಧೆ, ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಭೇಟಿಯಾಗಿ ಖಾಯಂ ವಿಳಾಸ ರೂಂ ನಂ. 9, 2ನೇ ಮಹಡಿ, ಸಿಟಿ ಬಸ್ ಸ್ಟಾಂಡ್ ಬಿಲ್ಡಿಂಗ್, ಕೆ.ಆರ್. ಸರ್ಕಲ್, ಮೈಸೂರು-1

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 – 86,000.
8147560344, 7892046990

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಶ್ರೀ ಸ್ವರ್ಣ ಬೋರ್‌ವೆಲ್ಸ್
ಮೈಸೂರು ತಾಲ್ಲೋಕಿಗೆ ಮಾತ್ರ ಅನ್ವಯ

6 1/2 ಮತ್ತು 4 1/2 ಡ್ರಿಲ್ಲಿಂಗ್ ಮಾಡಿಕೊಡಲಾಗುತ್ತದೆ.
ಡ್ರಿಲ್ಲಿಂಗ್ ದರ 80 ರೂ. ಒಂದು ಅಡಿಗೆ
9945743473
9740843473, 9880943473

ADMISSION OPEN
Govt.of Karnataka Dept. of Tourism
FOOD CRAFT INSTITUTE-MYSURU
EXHIBITION GROUND. ITTEGEGUDU
HOTEL MANAGEMENT
100% Job Placements | Govt. College | 80% Practical Classes
www.fcimysuru.com
6362018821

ಸೈಟುಗಳು ಮಾರಾಟಕ್ಕಿದೆ
ಶ್ರೀರಾಂಪುರ ರಿಂಗ್ ರೋಡ್ ಹಾಗೂ ಶ್ರೀನಗರ ಹಿಂಭಾಗ, ಮೈಸೂರು
9945321020

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

100% TEAK WOOD
FACTORY FINISH DOORS & FRAMES
@ FACTORY DEPOT RATES

10 YEARS WARRANTY*
9901291267
9731591267

DOCUMENT LOST
Rajendra Prasad S., #22, MMG Gardenia, 1st Cross, Aditya Circle, Somanathanagar, Dattagalli 3rd Stage, Dattagalli, Mysuru-570 033, lost house khatha and kandaya original certificate (Document No. / Identification: Site No. 22). Finders please contact:
Mob: 7022218593

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

V.K.Gold
V.K.Gold Companyಯಲ್ಲಿ ಕೆಲಸ ಮಾಡಲು ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ.
9845028614

ವಿವಾಹ ಭಾಗ್ಯ
ಎಲ್ಲಾ ಧರ್ಮದ ಭಾಷೆಯ ಹಾಗೂ ಜಾತಿಯ ವಧು ವರರಿಗಾಗಿ ಸಂಪರ್ಕಿಸಿ
1. ಮೊದಲನೇ ಮದುವೆ
2. ಎರಡನೇ ಮದುವೆ
3. ವಿಧವೆ/ವಿಧುರರು
MRJ Matrimony
8904890413
8904890419

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡಿ ಪ್ರತಿ ತಿಂಗಳಿಗೆ ರೂ. 15,000 ಸಂಪಾದಿಸಿ.
Mob: 9731891409

ಪ್ರಸಿದ್ಧ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂ॥ ಕುಮಾರ್ ಪ್ರಸಾದ್ ಗುರೂಜಿ
Mob: 9731839596
ಸ್ತ್ರೀ-ಪುರುಷಪ್ರೇಮ, ಸಂತಾನ, ದಾಂಪತ್ಯ, ಸಮಸ್ಯೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ, ಅಷ್ಟಮಂಗಳ ಪ್ರಶ್ನೆಯಿಂದ, ನೇರ ಉತ್ತರ ಹಾಗೂ ಶಾಶ್ವತ ಪರಿಹಾರಕ್ಕಾಗಿ, ಚೋಟನಿಕರ, ಭಗವತಿ ತಾಯಿ, ರಾಜರಾಜೇಶ್ವರಿ, ಕುಟ್ಟಿಚಾತನ್, ಕೇರಳದ, ಮಾಂತ್ರಿಕ ಶಕ್ತಿಯಿಂದ, 2 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ಮನೆ ವಿಳಾಸ: ಲಕ್ಷ್ಮಿ ನಿವಾಸ ನಂ.19/D2, ಬುದ್ಧ ಮಾರ್ಗ, ಹೋಟೆಲ್ ದೋಸೆ ಕಾರ್ನರ್ ಪಕ್ಕ, ಹೊಸ DC ಆಫೀಸ್ ಎದುರು, ಸಿದ್ಧಾರ್ಥ ಲೇಔಟ್, ಮೈಸೂರು

EAST FACE
MUDA APPROVED
40X60
SITE FOR SALE
NITYANANDASAGARA HUILALU MYSORE
8217851695

ಶ್ರೀ ಸಿದ್ದೇಶ್ವರ ಟೂರಿಸ್ಟ್ & ಟ್ರಾವೆಲ್ಸ್
ಗಾಂಧಿ ಚೌಕ್, ಮೈಸೂರು
ಉತ್ತರ ಭಾರತದ 12 ದಿನಗಳ ಪ್ರವಾಸ ರೈಲು ಮತ್ತು ಬಸ್ಸಿನಲ್ಲಿ ಪ್ರಯಾಣ
ದಿನಾಂಕ: 19-7-2024
ಕ್ಷೇತ್ರಗಳ ದರ್ಶನ: ದೆಹಲಿ, ಮಥುರಾ, ಆಗ್ರಾ, ಅಲಹಾಬಾದ್, ಕಾಶಿ, ಅಯೋಧ್ಯ, ಹರಿದ್ವಾರ್, ಋಷಿಕೇಶ್ ಇತ್ಯಾದಿ
ವ್ಯವಸ್ಥಾಪಕರು : ರಾಜಣ್ಣ
9343288718, 8296956718

FOR SALE
1. 20x30, 30x40, Sites @ Bogadi, Rainbow School
2. 18x40 Site in Kuvempu Ngr
3. 2&3 BHK Flats at RK Nagar
4. 70x140 Farm House Plots @ KRS Back Water Attach 20L
5. 50x30 Site@Saraswathi Puram
6. 20x30, Sites For Sale At Yelwala
30x40 Sites attached to Brahmins Lyt
PRAKRUTHI PROPERTIES
95386 90359, 90359 90359

ಸೈಟ್ ಮಾರಾಟಕ್ಕಿದೆ
ಮೂಡಾ ಅಪ್ರೂವ್ಡ್
40X60
ಪೂರ್ವ ದಿಕ್ಕು, ನಿತ್ಯಾನಂದಸಾಗರ ಹುಯಿಲಾಳು ಮೈಸೂರು
8217851695

SAM READY MIX CONCRETE
(At Durga RMC Premises)
REQUIRES
1) MARKETING OFFICER - 4Nos.
2) Q.C. OFFICE - 2 Nos.
Contact:
9902954721

REQUIRED IMMEDIATELY
FIELD COLLECTION EXECUTIVES
EXPERIENCED OR FRESHER
Two Wheeler must with DL
Location: Mysore, Madikeri, Chamarajanagar, Mandya Tumkur all Taluks
7996048668
8861501856

2.5 BHK HOME INTERIORS @ ₹ 2.5 Lakh*
Home Space Mart
*T&C Apply
91089 23123

ಈ ತಕ್ಷಣ ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳಿನ ಕಂಪನಿಗಳಲ್ಲಿ ಕೆಲಸ ಮಾಡಲು ಸ್ಟೋರ್ ಇನ್‌ಚಾರ್ಜ್ (Store Incharg) ಟೈಲರುಗಳು, ಹೆಲ್ಪರಾಗಿ ಕೆಲಸ ಮಾಡಲು ಹುಡುಗರು, ಹುಡುಗಿಯರು, ಹೆಂಗಸರು ಗಂಡಸರು ಬೇಕಾಗಿದ್ದಾರೆ. ವಾರದ ರಜೆ ESI & PF ಬೋನಸ್ ಇರುತ್ತದೆ
8105249880
7795285485

SITE FOR SALE
40X60 North Facing 80 Feet Road University Layout Entrance, Dattagalli,
Price : 1.65 Cr Negptiable
Broker Execuse
8197707001

COUNSELLING
ಆಪ್ತ ಸಮಾಲೋಚನೆ
Family Counselling, Divorce Counselling, Children Counselling, Depression, Stress Disorder, Behaviour Disorday
ಹಾಗೂ ಇನ್ನಿತರ ಎಲ್ಲಾ ಸಮಸ್ಯೆಗಳಿಗೆ ಕೌನ್ಸಿಲಿಂಗ್ ಕೊಡಲಾಗುವುದು.
7022470930
(Home Visit available)

ತಕ್ಷಣ ಬೇಕಾಗಿದ್ದಾರೆ
CCTV ಆಪರೇಟರ್ ಕಮ್ ಸೆಕ್ಯೂರಿಟಿ ಗಾರ್ಡ್‌ಗಳು ಹೂಟಗಳ್ಳಿ ಇಂಡಸ್ಟ್ರೀಲ್ ಏರಿಯಾದಲ್ಲಿ ಇರುವ ಒಂದು ಕಂಪನಿ ಗೇ ತಕ್ಷಣ ಬೇಕಾಗಿದ್ದಾರೆ. 8 ಗಂಟೆ ಪಾಳಿ, 26 ದಿನಕ್ಕೆ ಆಕರ್ಷಕ ಸಂಬಳ ದೊರೆಯುತ್ತದೆ, ESIC, EPF ಮತ್ತು ಉಚಿತ ಊಟ ತಿಂಡಿ ಸೌಲಭ್ಯ ವಿರುತ್ತದೆ. ಮತ್ತು ಬನ್ನೂರಿನ ಸಮೀಪ ವಿರುವ ಒಂದು ದೊಡ್ಡ ಕಂಪನಿಗೆ ಅನುಭವಿರುವ ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಈ ನಂಬರ್‌ಗೆ ಸಂಪರ್ಕಿಸಿ.
9900066284, 9900066478

ಹೊಸ ಮನೆ ಮಾರಾಟಕ್ಕಿದೆ
ಮೈಸೂರು ನಗರದ ಅಶೋಕಪುರಂ 4ನೇ ಕ್ರಾಸ್ ಬಡಾವಣೆಯಲ್ಲಿರುವ 18x55 ಅಡಿಯಲ್ಲಿ ಕಟ್ಟಿರುವ 2BHKಯ 2 ಇಂಡಿಪೆಂಡೆಂಟ್ ಆಗಿ ಸಪರೇಟ್ ಪ್ರೊವಿಸನ್ ಆಗಿರುವ ಹಾಗೂ ಕಾರ್ಪೋರೇಷನ್ ಖಾತೆ ಹಾಗೂ ಕ್ಲಿಯರ್ ಡಾಕ್ಯುಮೆಂಟ್ ಹೊಂದಿರುವಂತ ಮನೆ ರೂ.50,00000 ಲಕ್ಷಕ್ಕೆ ಮಾರಾಟಕ್ಕಿದೆ ಈ ಮನೆಗೆ ಬ್ಯಾಂಕ್ ಸಾಲ ಸೌಲಭ್ಯ ಕೂಡ ಲಭ್ಯವಿದೆ.
9019484156, 9739780095

ಮನೆ ಮಾರಾಟಕ್ಕಿದೆ
20x30 ರಲ್ಲಿ ಎರಡು ಫ್ಲೋರ್ ಮನೆ
ನಂ. 2654 ನೇತಾಜಿ ಸರ್ಕಲ್ ಹತ್ತಿರ, ದಟ್ಟಗಳ್ಳಿ, 3ನೇ ಕ್ರಾಸ್, ಮೆಡ್‌ಪ್ಲಸ್ ಹಿಂಭಾಗ, ಮೈಸೂರು
7899488518

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಚಾಮುಂಡೇಶ್ವರಿ ಮ್ಯಾರೇಜ್ ಬ್ಯೂರೊ
ಒಕ್ಕಲಿಗ, ಕುರುಬ, ಲಿಂಗಾಯತ, ದೇವಾಂಗ, ರೆಡ್ಡಿ, ಬಲಿಜ ನಾಯ್ಡು, ನಾಯಕ, ಆದಿಕರ್ನಾಟಕ SC, ಮೊದಲಿಯಾರ್, ಬ್ರಾಹ್ಮಣ, BSC, B.Com, MA, M.Com, MSC, MBA, MBBS, BE, MTech, B.Ed, Doctors, Engineer ಮೊದಲನೇ ಹಾಗೂ 2ನೇ ಮದುವೆಯಾಗುವ ವಿಚ್ಛೇದಿತರು, ವಿಧುರರು, ವಿಧವೆಯರು ನೇರವಾಗಿ ಸಂಪರ್ಕಿಸಿ: ವಾಟ್ಸಾಪ್
8951241381
9945622601

ಶ್ರೀ ಗೌರಿಶಂಕರ ಟ್ರಾವೆಲ್ಸ್
27-7-24 (4 ದಿನ) – ಭೀಮಶಂಕರ, ಶಿರಡಿ, ಎಲ್ಲೋರ, ಘೃಷ್ಣೇಶ್ವರ, ತ್ರಯಂಬಕೇಶ್ವರ
24-8-24 (6ದಿನ) – ಅಯೋಧ್ಯ, ಪ್ರಯಾಗ್‌ರಾಜ್, ಕಾಶಿ,ಗಯಾ
14-9-24 (4 ದಿನ) – ಉಜ್ಜಯಿನಿ, ಓಂಕಾರೇಶ್ವರ, ಇಂದೋರ್ (ವಿಮಾನ, AC ಬಸ್, ಊಟ, ರೂಂ)
9620002114

INDUSTRIAL SITE FOR SALE
Double Corner Flot
14,850 Sqft. 410/413-18, Hebbal Industrial Area. Opp. Infosys behind HUL, KRS Road, Mysore-570018
9886412655

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್
ಸಂಬಳ: 11000 ರಿಂದ 12000
ಸ್ಥಳ: ಬೋಗಾದಿ, ವಂಟಿಕ್ಯಾತನಹಳ್ಳಿ, ಬನ್ನಿಮಂಟಪ
9019586857
9741513227

LAND FOR SALE
0.30 Gunte (3/4 acre)
0.20 Gunte (1/2 acre)
Near to Ring Road
R.T.Nagara, Mysuru
Contact
9611254874

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಸೂಪರ್‌ವೈಸರ್
2) ಸೆಕ್ಯೂರಿಟಿ ಗಾರ್ಡ್ಸ್
ಸ್ಥಳ: ಕೆ.ಆರ್.ಎಸ್. ರಸ್ತೆ, ಮೈಸೂರು
SSLC ಪಾಸಾಗಿರಬೇಕು, ವಯಸ್ಸು 50 ವರ್ಷದೊಳಗಿರಬೇಕು.
ಆಕರ್ಷಕ ವೇತನ ESI, PF ಸೌಲಭ್ಯವಿರುತ್ತದೆ.
ಮೂಲ ದಾಖಲಾತಿಗಳೊಂದಿಗೆ ಸಂಪರ್ಕಿಸಿ
ಕರ್ನಾಟಕ ಸೆಕ್ಯೂರಿಟಿ ಏಜೆನ್ಸಿ
ನಂ.513, ಕೆ.ಎನ್.ಅಗ್ರಹಾರ, ಮೈಸೂರು
0821-4247385

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

COMMERCIAL SITE FOR SALE
60X90
DATTAGALLI
9844998724
(BROKER EXCUSE)

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರೋಡ್ – ಜಯಲಕ್ಷ್ಮೀಪುರಂದಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್ ಗೆ ಅನುಭವವುಳ್ಳ, (1) ಅಡುಗೆ ಭಟ್ಟು South Cook (2) ಅಸಿಸ್ಟೆಂಟ್ ಕುಕ್ Cutting , Grinding(3) Indian All rounder (hindi) ಮಾಡುವ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ , ವಸತಿ ಹಾಗು ಉತ್ತಮ ಸೌಲಭ್ಯ ಗಳನ್ನೂ ನೀಡಲಾಗುತ್ತದೆ.
7899028086

MUDA SITE ಮಾರಾಟಕ್ಕಿದೆ
30x40 ದಕ್ಷಿಣ ದಿಕ್ಕು ಹೆಚ್.ಡಿ.ಕೋಟೆ ಮುಖ್ಯರಸ್ತೆ, ಶ್ರೀ ಚಕ್ರ ಲೇಔಟ್, ಮೈಸೂರು
9901228279

SITE FOR SALE
ಬನ್ನೂರು ರಸ್ತೆ ಮತ್ತು ಮಾನಸಿ ನಗರದಲ್ಲಿ 30x40, 30x50, 40x60 ನಿವೇಶನಗಳು ಲಭ್ಯವಿದೆ.
9448447035

WANTED
B.Sc, B.Ed. Social Science Teacher (ARTS)
Apply to :
THE HEAD MASTER
St. Philomena's High School
N.R.Mohalla, Mysore
7406860694

WANTED
Branded factory outlet. Men wear showroom Xavain looking for a Sales person for Mysore Location
1) Sales Executive
Position attracts the best salary in Industry
9742076736
9886262620

ಬೇಕಾಗಿದ್ದಾರೆ
ಪ್ರತಿಷ್ಠಿತ ಲಾಡ್ಜ್‌ನಲ್ಲಿ ರಾತ್ರಿ ಮತ್ತು ಹಗಲು ಕೆಲಸ ಮಾಡಲು ಹೌಸ್ ಕೀಪಿಂಗ್ ಹುಡುಗರು ಅಗತ್ಯವಿರುತ್ತದೆ.
9901700044
8884681428


ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಸೋಮವಾರ 24 ಜೂನ್ 2024

ಹಾಡಹಗಲೇ ವ್ಯಕ್ತಿ ಗಾಯಗೊಳಿಸಿದ ಚಿರತೆ ಸೆರೆ

ನಂಜನಗೂಡು/ಮಲ್ಕುಂಡಿ, ಜೂ.23– ಹಾಡಹಗಲೇ ವ್ಯಕ್ತಿ ಮೇಲೆ ದಾಳಿ ನಡೆಸಿ ಗಾಯಗೊಳಿಸಿದ ಚಿರತೆ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.



ತಾಲೂಕಿನ ಯಾಲಹಳ್ಳಿ ಗ್ರಾಮದ ನಿವಾಸಿ ಜಯಕುಮಾರ್ (39) ಗಾಯಗೊಂಡವರು.

ವಿವರ: ಭಾನುವಾರ ಮಧ್ಯಾಹ್ನ ಸುಮಾರು 2 ಗಂಟೆ ವೇಳೆ ತಾಲೂಕಿನ ಹುಲ್ಲಹಳ್ಳಿ ಹೋಬಳಿ ಯಾಲಹಳ್ಳಿ ಗ್ರಾಮದಲ್ಲಿ ಪ್ರತ್ಯಕ್ಷವಾದ ಚಿರತೆ ಗ್ರಾಮದ ನಿವಾಸಿ ಜಯಕುಮಾರ್ ಮೇಲೆ ದಾಳಿ ನಡೆಸಿ ಗಂಭೀರವಾಗಿ ಗಾಯಗೊಳಿಸಿದೆ. ಈ ವೇಳೆ ಗ್ರಾಮಸ್ಥರು ಚಿರತೆ ಮೇಲೆ ಕಲ್ಲು ಹಾಗೂ ದೊಣ್ಣೆಯನ್ನು ಬೀಸಿ ಓಡಿಸುವಲ್ಲಿ ಯಶಸ್ವಿಯಾಗಿದ್ದು, ಜನರು ಮುಗಿಬೀಳುತ್ತಿದ್ದಂತೆ ಗಾಬರಿಗೊಂಡ ಚಿರತೆ ಗ್ರಾಮದ ಪಾಳು ಮನೆಯೊಂದಕ್ಕೆ ನುಗ್ಗಿದೆ. ತಕ್ಷಣ ಗ್ರಾಮಸ್ಥರು ಅರಣ್ಯ ಇಲಾಖೆ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ.

ಈ ವೇಳೆ ಸ್ಥಳಕ್ಕಾಗಮಿಸಿದ ವಲಯ ಅರಣ್ಯಾಧಿಕಾರಿ ನಿತೀನ್ ಕುಮಾರ್, ಚಿರತೆ ಕಾರ್ಯಪಡೆಯ ಸಂತೋಷ್ ಹೂಗಾರ್ ನೇತೃತ್ವದ ಸಿಬ್ಬಂದಿ ಮನೆಯೊಳಗೆ ಅವಿತಿದ್ದ ಚಿರತೆಯನ್ನು ಪತ್ತೆ ಹಚ್ಚಿದ್ದಾರೆ. ನಂತರ ಪಶು ವೈದ್ಯಾಧಿಕಾರಿ ಡಾ.ರೋಷನ್ ಚಿರತೆಗೆ ಅರವಳಿಕೆ ಮದ್ದು ನೀಡಿದ ಬಳಿಕ ಅರಣ್ಯ ಇಲಾಖೆ ಸಿಬ್ಬಂದಿ ಬಲೆಹಾಕಿ ಚಿರತೆ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಆರ್‌ಎಫ್‌ಓ ನಿತೀನ್ ಕುಮಾರ್ ಮಾತನಾಡಿ, ಸೆರೆ ಹಿಡಿಯಲಾದ ಚಿರತೆ ಸುಮಾರು 7ವರ್ಷದ ಗಂಡು ಚಿರತೆಯಾಗಿದ್ದು, ಸದ್ಯ ಮೈಸೂರಿನ ಕೂರ್ಗಳ್ಳಿಯಲ್ಲಿರುವ ವನ್ಯಧಾಮಕ್ಕೆ ಕಳುಹಿಸಿಕೊಡಲಾಗಿದೆ ಎಂದರು.

ಅಪ್ರತಿಮ ದೇಶಪ್ರೇಮಿ ಡಾ.ಶ್ಯಾಮ್‌ಪ್ರಸಾದ್ ಮುಖರ್ಜಿ

ಬಿಜೆಪಿ ಜಿಲ್ಲಾ ಗ್ರಾಮಾಂತರ ಮಾಜಿ ಅಧ್ಯಕ್ಷೆ ಮಂಗಳಾ ಸೋಮಶೇಖರ್

ತಿ.ನರಸೀಪುರ, ಜೂ.23– ಆದರ್ಶ ರಾಷ್ಟ್ರ ಸೇವಕರಾಗಿ ತಮ್ಮ ಸರ್ವಸ್ವವನ್ನು ದೇಶಕ್ಕೆ ಮುಡಿಪಾಗಿಟ್ಟ ಭಾರತೀಯ ಜನಸಂಘದ ಸ್ಥಾಪಕ ಶ್ಯಾಂ ಪ್ರಸಾದ್ ಮುಖರ್ಜಿ ಅವರ ಆದರ್ಶಗಳನ್ನು ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕು ಎಂದು ಬಿಜೆಪಿ ಜಿಲ್ಲಾ ಗ್ರಾಮಾಂತರ ಮಾಜಿ ಅಧ್ಯಕ್ಷೆ ಮಂಗಳಾ ಸೋಮಶೇಖರ್ ತಿಳಿಸಿದರು.

ಪಟ್ಟಣದ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ಬಿಜೆಪಿ ವರುಣ ಮಂಡಲದ ವತಿಯಿಂದ ಡಾ.ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಸಂಸ್ಮರಣಾ ದಿನದ ಅಂಗವಾಗಿ ಭಾನುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮುಖರ್ಜಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಶ್ಯಾಮ್ ಪ್ರಸಾದ್ ಮುಖರ್ಜಿ ಅವರೊಬ್ಬ ಅಪ್ರತಿಮ ದೇಶಪ್ರೇಮಿ. ಕಾಶ್ಮೀರದ 370ನೇ ವಿಧಿ ರದ್ದಿಗೆ ಹೋರಾಟ ಮಾಡಿದರು. ಕಾಂಗ್ರೆಸ್‌ನಲ್ಲಿದ್ದರೂ ಅವರನ್ನು ಅಂದಿನ ಕಾಂಗ್ರೆಸ್ ನಾಯಕರು ಸರಿಯಾಗಿ ನಡೆಸಿಕೊಳ್ಳಲಿಲ್ಲ. ಇದರಿಂದ ನೊಂದ ಅವರು ಅಲ್ಲಿಂದ ಹೊರ ಬಂದು ಜನಸಂಘ ಕಟ್ಟಿದರು ಎಂದರು.

ನೆಹರು ಅವರಿಗೆ ಪರ್ಯಾಯ ನಾಯಕರಾಗಿ ಶ್ಯಾಮ್ ಪ್ರಸಾದ್ ಹೊರ ಹೊಮ್ಮಿದರು. ಭಾರತದ ಅಖಂಡತೆಗೆ ದುಡಿದಿದ್ದ ಅವರು ಬಿಜೆಪಿಗೆ ದಾರಿದೀಪವಾಗಿದ್ದರು. ಅವರ ಆಶಯ ಈಡೇರಿಸಲು ನಾವೆಲ್ಲರೂ ಶ್ರಮಿಸಬೇಕಿದೆ. ಅವರ ಚಿಂತನೆ, ರಾಷ್ಟ್ರೀಯತೆ ಬಗ್ಗೆ ಎಲ್ಲರೂ ಅರಿಯಬೇಕಿದೆ. ಕಾಶ್ಮೀರದಲ್ಲಿನ ಭಯೋತ್ಪಾದನೆ ಭಾರತದ ಸಾರ್ವಭೌಮತ್ವಕ್ಕೆ ಸವಾಲು ಒಡ್ಡಿದೆ. ಈ ಸನ್ನಿವೇಶದಲ್ಲಿ ಶ್ಯಾಮಪ್ರಸಾದ್ ರವರ ಆದರ್ಶಗಳು ಪ್ರಸ್ತುತ ಎಂದರು.



ತಿ.ನರಸೀಪುರದಲ್ಲಿ ಶ್ಯಾಂಪ್ರಸಾದ್ ಮುಖರ್ಜಿಯವರ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

> ಮುಖರ್ಜಿಯವರು ಸ್ವಾತಂತ್ರ್ಯ ಪೂರ್ವದಲ್ಲಿ ಹಿಂದೂಗಳ ಮೇಲಿನ ಶೋಷಣೆ ವಿರುದ್ಧ ಪ್ರಮುಖ ಧ್ವನಿಯಾಗಿದ್ದರು. ಜನಸಂಘ ಕಟ್ಟಿ ಜಮ್ಮು–ಕಾಶ್ಮೀರದ ಹಿಂದೂಗಳಿಗಾಗಿ ತಮ್ಮ ಜೀವವನ್ನೇ ತ್ಯಾಗ ಮಾಡಿದ ಮಹಾನ್ ನಾಯಕರು. ಮುಖರ್ಜಿಯವರ ಪ್ರತಿ ಕಾರ್ಯ, ಮಾತಿನಲ್ಲೂ ದೇಶಾಭಿಮಾನ ಎದ್ದು ಕಾಣುತ್ತಿತ್ತು. ದುಷ್ಟ ಶಕ್ತಿಗಳಿಂದ ದೇಶ ವಿಭಜಿಸುವ ಹುನ್ನಾರ ನಡೆದಾಗ ಪ್ರತಿ ಹಂತದಲ್ಲಿಯೂ ಪ್ರಬಲವಾಗಿ ವಿರೋಧಿಸುತ್ತಾ ಬಂದರು. ದೇಶದ ಏಕತೆ, ಅಖಂಡತೆಗೆ ಅವರಿಗಿದ್ದ ಪ್ರೇಮ, ಕಾಳಜಿ, ಪ್ರತಿಯೊಬ್ಬ ಭಾರತೀಯನಿಗೆ ಅವರ ಮೇಲೆ ಅಪಾರ ಗೌರವ ಮೂಡಿಸುತ್ತದೆ.
>
> **- ಹದಿನಾರು ಸತೀಶ್, ಬಿಜೆಪಿ ವರುಣ ಮಂಡಲ ಅಧ್ಯಕ್ಷ.**

ಈ ಹಿಂದೆಯೇ ಕಾಶ್ಮೀರಕ್ಕೆ ಪ್ರತ್ಯೇಕ ಸಂವಿಧಾನ ಬೇಡ ಎಂದು ಜನ ಸಂಘದ ಸಂಸ್ಥಾಪಕ ಶ್ಯಾಂ ಪ್ರಸಾದ್ ಮುಖರ್ಜಿ ಅವರು ನೀಡಿದ್ದ ಸಲಹೆಯನ್ನು ಕಾಂಗ್ರೆಸ್ ಸರ್ಕಾರ ತಿರಸ್ಕರಿಸಿದ ಫಲವಾಗಿ ಇಂದು ಕಾಶ್ಮೀರ ಭಾರತಕ್ಕೆ ಮಡಿಲಿನ ಕೆಂಡವಾಗಿ, ನಮ್ಮ ಸೈನಿಕರನ್ನು ಬಲಿ ತೆಗೆದುಕೊಳ್ಳುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ದೂರದೃಷ್ಟಿಯ ನೇತಾರರಾಗಿದ್ದ ಶ್ಯಾಮ್ ಪ್ರಸಾದ್ ಅವರು 1951ರಲ್ಲಿ ಪ್ರಧಾನಿ ನೆಹರು ಅವರ ಕಾಶ್ಮೀರ ಸ್ವಾಯತ್ತತೆ ವಿಚಾರಧಾರೆಗಳಿಗೆ ವಿರೋಧ ವ್ಯಕ್ತಪಡಿಸಿ, ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರ ಬಂದಿದ್ದರು. ಬಳಿಕ ಜನಸಂಘ ಹುಟ್ಟುಹಾಕಿ, ಕಾಶ್ಮೀರ ವಿಮೋಚನಾ ಚಳವಳಿಯ ನೇತೃತ್ವ ವಹಿಸಿದ್ದರು.

ನಿರ್ಬಂಧ ಧಿಕ್ಕರಿಸಿ ಕಾಶ್ಮೀರ ಪ್ರವೇಶಿಸಿದ ಅವರನ್ನು ಶೇಖ್ ಅಬ್ದುಲ್ಲಾ ಅವರ ಸರ್ಕಾರ ಶ್ರೀನಗರದಲ್ಲಿ ಬಂಧಿಸಿ, ಕಾರಾಗೃಹಕ್ಕೆ ಕಳುಹಿಸಿತು. ಅಲ್ಲಿಯೇ ಅವರು ನಿಗೂಢ ಸಾವನ್ನಪ್ಪಿದರು ಎಂದರು.

ನೆಹರು ಅವರು ಮುಖರ್ಜಿ ಅವರ ಮಾತನ್ನು ಗೌರವಿಸಿ, ಕಾಶ್ಮೀರಕ್ಕೆ ಪ್ರತ್ಯೇಕ ಸಂವಿಧಾನ ಜಾರಿಗೆ ತರದಿದ್ದರೆ ಇಂದು ದೇಶವನ್ನು ಕಾಡುತ್ತಿರುವ ಅನೇಕ ಸಮಸ್ಯೆಗಳು ಇರುತ್ತಿರಲಿಲ್ಲ. ನೆಹರು ಮಾಡಿದ ತಪ್ಪಿಗೆ ಇಂದಿಗೂ ಕಾಶ್ಮೀರದಲ್ಲಿ ಯೋಧರು ಸೇರಿದಂತೆ ಅಮಾಯಕರು ಪ್ರಾಣ ಕಳೆದುಕೊಳ್ಳುಮತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಪ್ರಧಾನ ಕಾರ್ಯದರ್ಶಿ ಆಲಗೂಡು ವೆಂಕಟರಮಶೆಟ್ಟಿ, ಬಿದರಗೂಡು ಕುಮಾರ್, ಮಾಜಿ ಅಧ್ಯಕ್ಷ ಎನ್.ಶಿವಯ್ಯ, ಡೈರಿ ಅಧ್ಯಕ್ಷ ಡಿ.ಎಲ್. ಮಹದೇವಪ್ಪ, ಪ್ರಭುಸ್ವಾಮಿ, ಮಹಿಳಾ ಮೋರ್ಚಾ ಅಧ್ಯಕ್ಷೆ ಲಕ್ಷ್ಮಿ, ಗೀತಾ, ಲೀಲಾವತಿ, ರಾಜೇಶ್ವರಿ, ಹುಳಿಮಾವು ಶಿವು, ತುಂಬಲ ಪ್ರಭುಸ್ವಾಮಿ, ಹೋಟೆಲ್ ಕೀರ್ತಿ, ಕೃಷ್ಣ, ನಾಗರಾಜು, ಮಲ್ಲೇಶ್, ಮಂಜು, ಶಂಕರ್, ರಾಜು, ಆನಂದ್ ಮತ್ತಿತರಿದ್ದರು.

ಮುಗುತನಮೂಲೆಯಲ್ಲಿ ಮದರಸ ಉದ್ಘಾಟನೆ



ಮುಗುತನಮೂಲೆ ಗ್ರಾಮದಲ್ಲಿ ಮದರಸವನ್ನು ಶಾಸಕ ತನ್ವೀರ್ ಸೇಠ್ ಉದ್ಘಾಟಿಸಿದರು.

ಸರಗೂರು, ಜೂ.23– ಮುಸ್ಲಿಂ ಸಮುದಾಯದರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಮುಂದಾಗಬೇಕು ಎಂದು ಶಾಸಕರೂ ಆದ ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಸಲಹೆ ನೀಡಿದರು.

ತಾಲೂಕಿನ ಮುಗುತನಮೂಲೆ ಗ್ರಾಮದ ಜಾಮೀಯಾ ಮಸೀದಿ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಮದರಸ(ಮಕ್ಕಳ ಕಲಿಕಾ ಕೊಠಡಿ) ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಂದು ಸಮಾಜವೂ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು. ಅದರಲ್ಲೂ ಮುಸ್ಲಿಂ ಸಮುದಾಯ ಶಿಕ್ಷಣದಲ್ಲಿ ಹಿಂದುಳಿದಿದ್ದು ಪೋಷಕರು ನಿಮ್ಮ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಶಿಕ್ಷಣ ಕೊಡಿಸಲು ಮುಂದಾಗಬೇಕು. ಶಾಸಕ ಅನಿಲ್ ಕಿರಿಯ ಶಾಸಕರಾದರೂ, ಕ್ಷೇತ್ರದ ಅಭಿವೃದ್ಧಿಯಲ್ಲಿ ಹಿರಿಯ ಶಾಸಕರಂತೆ ತೊಡಗಿಸಿಕೊಂಡಿರುವುದು ಶ್ಲಾಘನೀಯ ಎಂದರು.

ಶಾಸಕ ಅನಿಲ್ ಮಾತನಾಡಿ, ಯಾವುದೇ ತಾರತಮ್ಯ ಮಾಡದೇ ಎರಡೂ ತಾಲೂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದೇನೆ. ಗ್ರಾಮದ ಮುಸ್ಲಿಂ ಬಾಂಧವರ ಬೇಡಿಕೆಯಂತೆ ಮದರಸಕ್ಕಾಗಿ 5 ಲಕ್ಷ ಅನುದಾನ ನೀಡಲಾಗುವುದು. ಅಲ್ಲದೇ ಗ್ರಾಮಕ್ಕೆ ಮೂಲಸೌಕರ್ಯ ಒದಗಿಸಲಾಗುವುದು ಎಂದರು.

ಇದೇ ವೇಳೆ ಸರಗೂರಲ್ಲಿ ಶಾದಿ ಮಹಲ್ ನಿರ್ಮಿಸಿ ಕೊಡುವಂತೆ ಸಮುದಾಯದ ಮುಖಂಡರು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಕೋಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಮುಗುತನಮೂಲೆ ಗ್ರಾಮದ ಯಜಮಾನರಾದ ಅಶ್ರಫ್ ಆಲಿ, ಮೈಸೂರು ಮಾಜಿ ಮೇಯರ್ ಅಯೂಬ್ ಖಾನ್, ಶಬ್ಬೀರ್ ಖಾನ್, ಅಕ್ರಂ ಪಾಷ, ಎಂ.ಕೆ.ಮಹಮದ್ ಆಲಿ, ನಗರಪಾಲಿಕೆ ಮಾಜಿ ಸದಸ್ಯ ಕಂಬ್ರುದ್ದೀನ್, ಯೂಸುಫ್ ಸಾಬ್, ಫಾರುಕ್ ಆಲಿ, ಬಾಬು, ಮಹಮದ್ ಅನೀಫ್, ಅಲ್ಪ ಸಂಖ್ಯಾ ತರ ಸಮಿತಿ ಅಧ್ಯಕ್ಷ ಕೋಟೆ ಶಫಿ, ಸರಗೂರು ತಾಲೂಕು ಅಧ್ಯಕ್ಷ ಅಮೀರ್ ಸುಹೇಲ್, ಹಿದಾಯತ್ ಮಹಮದ್ ಆಲಿ, ಅನ್ವರ್, ಕಾಂಗ್ರೆಸ್ ಪ್ರತಿನಿಧಿ ಅಧ್ಯಕ್ಷ ಜಯಕುಮಾರ್, ಎಂ.ಸಿ.ತಳಲು ಗ್ರಾಪಂ ಅಧ್ಯಕ್ಷೆ ಲಕ್ಷ್ಮಿ, ಸದಸ್ಯರಾದ ಪ್ರಕಾಶ್, ಚಂದ್ರು, ಕೆಂಡನಾಯಕ, ಪ್ರಭುಸ್ವಾಮಿ, ಪುಟ್ಟೇತ್ತಪ್ಪ, ನೂರ್ ಸಾಬ್, ಪರಶಿವಮೂರ್ತಿ, ಉಮೇಶ್ ಸೇರಿದಂತೆ ಇನ್ನಿತರರಿದ್ದರು.

ಹ್ಯಾಂಡ್‌ಪೋಸ್ಟ್‌ನಲ್ಲಿ ಮಕ್ಕಳಿಗೆ ಬ್ಯಾಗ್, ಪುಸ್ತಕ ವಿತರಣೆ

ಹೆಚ್.ಡಿ.ಕೋಟೆ, ಜೂ.23– ಶಿಕ್ಷಣ ನಮಗೆ ಗೌರವ ಮತ್ತು ಘನತೆಯನ್ನು ತಂದು ಕೊಡುತ್ತದೆ. ಹೀಗಾಗಿ ಪ್ರತಿಯೊಂದು ಮಗುವು ಶಿಕ್ಷಣದಿಂದ ವಂಚಿತರಾಗಬಾರದು ಎಂದು ತಹಸೀಲ್ದಾರ್ ಶ್ರೀನಿವಾಸ್ ತಿಳಿಸಿದರು.

ತಾಲೂಕಿನ ಹ್ಯಾಂಡ್‌ಪೋಸ್ಟ್ ಜೀವಿಕ ತರಬೇತಿ ಕೇಂದ್ರದಲ್ಲಿ ಜೀವಿಕ ಸಂಘಟನೆ ಮತ್ತು ಸುಭಾಷ್ ಪವರ್ ಕಾರ್ಪೊರೇಷನ್ ಲಿ. ವತಿಯಿಂದ ಆಯೋಜಿಸಿದ್ದ ಮಕ್ಕಳಿಗೆ ಉಚಿತ ಬ್ಯಾಗ್ ಮತ್ತು ಪುಸ್ತಕ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಬಾಲ್ಯ ನೆನೆಸಿಕೊಂಡರೆ ನಿಜವಾಗಿಯೂ ನಮಗೆ ನೋವಾಗುತ್ತದೆ. ಕಾರಣ ನಮ್ಮ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವವರು ಇರಲಿಲ್ಲ. ಆದರೆ ಈಗ ನೂರಾರು ದಾನಿಗಳು ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುತ್ತಿದ್ದಾರೆ. ಮತ್ತೆ ಮಕ್ಕಳಿಗೆ ನೀಡಿರುವ ವಸ್ತುಗಳು ಅತ್ಯಂತ ಗುಣಮಟ್ಟದಿಂದ ಕೂಡಿವೆ. ಈ ಅವಕಾಶ ಬಳಸಿಕೊಂಡು ಪ್ರತಿಯೊಂದು ಮಗುವು ಉತ್ತಮ ವ್ಯಾಸಂಗ ಮಾಡಿ ಉನ್ನತ ಹುದ್ದೆ ಅಲಂಕರಿಸಬೇಕು. ಮಕ್ಕಳು ತಮ್ಮ ಬಿಡುವಿನ ಸಮಯದಲ್ಲಿ ದೊಡ್ಡ ದೊಡ್ಡ ಲೇಖಕರ, ಸಾಹಿತಿಗಳ, ದಾರ್ಶನಿಕರ ಅತ್ಯುತ್ತಮ ಪುಸ್ತಕಗಳನ್ನು ಓದಿ ಎಂದು ಹೇಳುವ ಮೂಲಕ ತಮ್ಮ ಬಾಲ್ಯಜೀವನದ ಪುಟಗಳನ್ನು ಮಕ್ಕಳ ಮುಂದೆ ಬಿಚ್ಚಿಟ್ಟರು.



ಹೆಚ್.ಡಿ.ಕೋಟೆ ತಾಲೂಕಿನ ಹ್ಯಾಂಡ್‌ಪೋಸ್ಟ್ ಜೀವಿಕ ತರಬೇತಿ ಕೇಂದ್ರದಲ್ಲಿ ಮಕ್ಕಳಿಗೆ ಉಚಿತವಾಗಿ ಬ್ಯಾಗ್ ಮತ್ತು ಪುಸ್ತಕ ವಿತರಿಸಲಾಯಿತು.

ಕಬಿನಿ ಸುಭಾಷ್ ಪವರ್ ಪ್ರಾಜೆಕ್ಟ್‌ನ ಹಿರಿಯ ಮ್ಯಾನೇಜರ್ ಸೆಂದಿಲ್ ಕುಮಾರ್ ಮಾತನಾಡಿ, ನಾನು ಬಾಲ್ಯದಲ್ಲಿ ಅನುಭವಿಸಿದ ಕಹಿ ಘಟನೆಗಳನ್ನು ನೆನೆಪಿಸಿಕೊಂಡು ಮುಂದೆ ನಮ್ಮ ಮಕ್ಕಳ ಜೀವನದಲ್ಲಿ ಇಂತಹ ಯಾವುದೇ ಸಮಸ್ಯೆಗಳು ಬರಬಾರದು ಎಂದು ಮಕ್ಕಳ ವಿದ್ಯಾಭ್ಯಾಸಕ್ಕೆ ಕೈ ಜೋಡಿಸುತ್ತಿದ್ದೇವೆ.

ತಂದೆ ತಾಯಿಗಳು ಸಹ ಧಾರಾವಾಹಿ ಮತ್ತು ಸಿನಿಮಾಗಳಿಗೆ ಗಮನ ಕೊಡದೆ ಮಕ್ಕಳ ಚಲನವಲನದ ಬಗ್ಗೆ ಗಮನ ಹರಿಸಿ ಮತ್ತೆ ಯಾವ ಮಗುವೂ ಕೂಡ ಬಟ್ಟೆಯಿಲ್ಲ, ಪುಸ್ತಕವಿಲ್ಲ. ನನಗೆ ಬಡತನ ಎಂದು ಕೈಕಟ್ಟಿ ಕುಳಿತುಕೊಳ್ಳಬಾರದು. ಓದುವ ಪ್ರಯತ್ನ ಬಿಡಬಾರದು ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜೀವಿಕ ಬಸವರಾಜ್, ಜೀವಿಕ ರಾಜ್ಯ ಸಂಚಾಲಕ ಉಮೇಶ್, ಪ್ರಗತಿಪರ ಮುಖಂಡ ಅಕ್ಬರ್ ಪಾಷ, ಶಿವಕುಮಾರ್, ಅಧ್ಯಕ್ಷ ಮಹದೇವ, ಮಾಜಿ ಅಧ್ಯಕ್ಷೆ ಮಲ್ಲಿಗಮ್ಮ, ಪೀಪಲ್ ಟ್ರೀ ಜವರೇಗೌಡ, ಇಂಜಿನಿಯರ್ ನಿರಂಜನ್, ಮಹೇಶ್ ಕುಮಾರ್, ಭಾಸ್ಕರ್, ಲಕ್ಷ್ಮಮ್ಮ, ಸಂಚಾಲಕ ಚಂದ್ರಶೇಖರಮೂರ್ತಿ, ಶಿವರಾಜ್, ವೆಂಕಟೇಶ್, ನಟರಾಜ್, ಶ್ರೀನಿವಾಸ್, ನಾಗಮ್ಮ, ಮಲ್ಲಿಗಮ್ಮ, ಗೋಪಾಲ್ ಮತ್ತು ಪೋಷಕರು ಹಾಜರಿದ್ದರು.

ಫ್ಯಾಷನ್ ಡಿಸೈನಿಂಗ್ ತರಬೇತಿ ಪಡೆದವರಿಗೆ ಪ್ರಮಾಣ ಪತ್ರ ವಿತರಣೆ



ಹುಣಸೂರಿನಲ್ಲಿ ಬ್ಯೂಟಿಷಿಯನ್ ಹಾಗೂ ಫ್ಯಾಷನ್ ಡಿಸೈನಿಂಗ್ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಹುಣಸೂರು, ಜೂ.23– ನಗರದ ತಾಲೂಕು ಪಂಚಾಯಿತಿ ಆವರಣದಲ್ಲಿರುವ ಸಾಮರ್ಥ್ಯ ಸೌಧದಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಅಂಗ ಸಂಸ್ಥೆಯಾದ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದ ವತಿಯಿಂದ ಬ್ಯೂಟಿಷಿಯನ್ ಹಾಗೂ ಫ್ಯಾಷನ್ ಡಿಸೈನಿಂಗ್ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ ಕಾರ್ಯಕ್ರಮ ನಡೆಯಿತು.

ತಾಪಂ ಇಓ ಮನು ಮಾತನಾಡಿ, ಕೌಶಲ್ಯ ತರಬೇತಿಗಳಿಂದ ಮಹಿಳೆಯರಿಗೆ ಸಾಕಷ್ಟು ಪ್ರಯೋಜನವಾಗಿದ್ದು, ತರಬೇತಿ ನಂತರ ತಾವೇ ಸ್ವತಃ ಉದ್ಯೋಗಗಳನ್ನು ಪ್ರಾರಂಭಿಸಿ ಆರ್ಥಿಕವಾಗಿ ಸಬಲರಾಗಬಹುದು ಎಂದರು. ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ರೇವಣ್ಣ ಮಾತನಾಡಿ, ಈ ರೀತಿಯ ಕೌಶಲ್ಯ ತರಬೇತಿಗಳು ಮಹಿಳೆಯರಿಗೆ ಶಕ್ತಿ, ಆತ್ಮವಿಶ್ವಾಸ ತುಂಬುವ ಕೆಲಸವನ್ನು ಮಾಡುತ್ತಿದೆ ಎಂದರು.

ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದ ಹಿರಿಯ ಕಾರ್ಯಕ್ರಮ ವ್ಯವಸ್ಥಾಪಕ ಪಿ.ಡಿ.ನಾಯಕ್ ಮಾತನಾಡಿ, ಈ ರೀತಿಯ ಕೌಶಲ್ಯ ತರಬೇತಿ ಪಡೆಯುವುದರಿಂದ ಮಹಿಳೆಯರು ನಾವು ಸ್ವಾವಲಂಬಿಗಳಾಗಿ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ವಿವೇಕ ಗ್ರಾಮೀಣ ಸಂಸ್ಥೆ ಸಿಬ್ಬಂದಿಗಳು, ಕಾರ್ಯಕ್ರಮ ವ್ಯವಸ್ಥಾಪಕ ರವಿಕುಮಾರ್, ತರಬೇತಿ ಸಂಯೋಜಕ ರಾಜು, ಕ್ಷೇತ್ರ ಮಾರ್ಗದರ್ಶಕ ಚಂದ್ರೇಶ್, ಮಂಜುನಾಥ್, ಮಂಜುನಾಥ, ಪಲ್ಲವಿ ಮತ್ತು ಗೀತಾ ಉಪಸ್ಥಿತರಿದ್ದರು.



ಕಾರ್ಯಕ್ರಮ ಉದ್ಘಾಟನೆ ನಂಜನಗೂಡು ತಾಲೂಕಿನ ದೇವನೂರು ಗ್ರಾಮದಲ್ಲಿ ನಡೆದ ಶ್ರೀಮನ್ನಿರಂಜನ ಗುರುಮಲ್ಲೇಶ್ವರರ 125ನೇ ಸಂಸ್ಮರಣಾ ಆರಾಧನಾ ಮಹೋತ್ಸವ, ರಥೋತ್ಸವ ಹಾಗೂ ರಾಜಗೋಪುರ ಲೋಕಾರ್ಪಣೆ ಕಾರ್ಯಕ್ರಮವನ್ನು ತುಮಕೂರು ಸಿದ್ಧಗಂಗಾ ಮಠದ ಶ್ರೀಸಿದ್ಧಲಿಂಗ ಸ್ವಾಮೀಜಿ ಉದ್ಘಾಟಿಸಿದರು.

ಚಾಮರಾಜನಗರ ಲೋಕಸಭಾ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ

ಸಂಸದ ಸುನೀಲ್ ಬೋಸ್

ತಿ.ನರಸೀಪುರ, ಜೂ.23– ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಮತದಾರರ ಋಣ ತೀರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ಪುರಸಭೆ ಮಾಜಿ ಅಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ ಹಾಗೂ ಇತರರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನುಡಿದಂತೆ ನಡೆಯಲು ಕಾಂಗ್ರೆಸ್ ಸರ್ಕಾರ ಸದಾ ಬದ್ಧವಾಗಿದೆ. 5 ವರ್ಷ ಗ್ಯಾರಂಟಿ ಕಾರ್ಯಕ್ರಮಗಳನ್ನು ನಿಲ್ಲಿಸುವ ಪ್ರಶ್ನೆ ಇಲ್ಲ. ಚುನಾವಣೆಯಲ್ಲಿ ಸೋಲನ್ನು ಅನುಭವಿಸಿರುವ ಬಿಜೆಪಿ ನಾಯಕರು ಹತಾಶರಾಗಿ ಗೊಂದಲ ಸೃಷ್ಟಿಸಲು ಸಂಚು ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.



ಸಂಸದ ಸುನೀಲ್ ಬೋಸ್, ಎಂಎಲ್‌ಸಿ ಡಾ. ಯತೀಂದ್ರ ಅವರನ್ನು ಮುಖಂಡರು ಆತ್ಮೀಯವಾಗಿ ಸನ್ಮಾನಿಸಿದರು.

ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತೇನೆ. ಪ್ರತಿಯೊಂದು ಕ್ಷೇತ್ರಗಳಿಗೂ ಭೇಟಿ ನೀಡಿ ಸಮಸ್ಯೆಗಳನ್ನು ಆಲಿಸಿ ಹಂತ ಹಂತವಾಗಿ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು. ಈ ವೇಳೆ ಪುರಸಭೆ ಸದಸ್ಯರಾದ ತುಂಬಲ ಸಿ.ಪ್ರಕಾಶ್, ನಾಗರತ್ನ ಮಾದೇಶ್, ಬೇಬಿ ಹೇಮಂತ್ ಕುಮಾರ್, ಮುಖಂಡರಾದ ಸ್ವಾಮಿ, ದಿವಾಕರ್, ಟ್ರಾಕ್ಟರ್ ರಾಜು ಹಾಜರಿದ್ದರು.

ಜ್ಞಾನ, ಸಂಸ್ಕೃತಿಯಿಂದ ಮಾತ್ರ ಉನ್ನತಿ ಸಾಧ್ಯ

ಎಡೆಯೂರು ಮಠಾಧ್ಯಕ್ಷ ಶ್ರೀತೋಂಟದ ಸಿದ್ದರಾಮ ಸ್ವಾಮೀಜಿ

ಬೆಟ್ಟದಪುರ, ಜೂ.23– ಮನುಷ್ಯನಿಗೆ ಜೀವನ ತುಂಬಾ ಮುಖ್ಯವಾಗಿದ್ದು, ಜ್ಞಾನ ಹಾಗೂ ಸಂಸ್ಕೃತಿಯಿಂದ ಮಾತ್ರ ಉನ್ನತಿ ಸಾಧ್ಯ ಎಂದು ಜಗದ್ಗುರು ತೋಂಟದಾರ್ಯ ಮಹಾಸಂಸ್ಥಾನ ಮಠ ಎಡೆಯೂರು ಮಠಾಧ್ಯಕ್ಷ ಶ್ರೀತೋಂಟದ ಸಿದ್ದರಾಮ ಸ್ವಾಮೀಜಿ ತಿಳಿಸಿದರು.

ಗ್ರಾಮದ ಹೊರ ವಲಯದಲ್ಲಿರುವ ಸ್ವತಂತ್ರ ಸಲೀಲಾಖ್ಯಾ ವಿರಕ್ತ ಮಠ ಮತ್ತು ಕನ್ನಡ ಮಠದಲ್ಲಿ ಭಾನುವಾರ ನಡೆದ ಶ್ರೀಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳ 96ನೇ, ಶ್ರೀಚನ್ನವೀರ ದೇಶಿಕೇಂದ್ರ ಸ್ವಾಮಿಗಳ 43ನೇ ಗಣಾರಾಧನೆ ಹಾಗೂ ಕನ್ನಡ ಮಠದ 215ನೇ ಸ್ಥಾಪನಾ ವರ್ಷಾಚರಣೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ಭೂಮಿಯ ಪ್ರತಿಯೊಂದು ಜೀವಿಗೂ ಒಳ್ಳೆಯದನ್ನೇ ಬಯಸುವುದು ಬಸವ ಸಂಸ್ಕೃತಿಯಾಗಿದ್ದು, ಶರಣರ ತತ್ವಗಳನ್ನು ಅಳವಡಿಸಿಕೊಂಡು ಉತ್ತಮ ಜೀವನ ನಡೆಸುವಂತೆ ಸಲಹೆ ನೀಡಿದರು.

ಕನ್ನಡ ಮಠದ ಮಠಾಧ್ಯಕ್ಷ ಶ್ರೀಚನ್ನಬಸವ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಮಠ ಹಾಗೂ ಧಾರ್ಮಿಕ ಕೇಂದ್ರಗಳ ಆಸ್ತಿಗಳನ್ನು ದುರುಪಯೋಗಪಡಿಸಿಕೊಳ್ಳಲು ಅವಕಾಶ ಮಾಡಿಕೊಡದೆ ಸಂರಕ್ಷಿಸಬೇಕು. ಮಠಗಳು ಕೇವಲ ಧರ್ಮ ಪ್ರಚಾರಕ್ಕೆ ಸೀಮಿತವಾಗದೆ ನಿರಂತರ ಜನಸೇವೆ ಮಾಡುವ ಮನೋಭಾವ ರೂಢಿಸಿಕೊಂಡು ಮಠದ ಆಸ್ತಿಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ತಿಳಿಸಿದರು.



ಸ್ವತಂತ್ರ ಸಲೀಲಾಖ್ಯಾ ವಿರಕ್ತ ಮಠ ಮತ್ತು ಕನ್ನಡ ಮಠ ಗಣಾರಾಧನಾ ಮಹೋತ್ಸವವನ್ನು ಶ್ರೀತೋಂಟದ ಸಿದ್ದರಾಮ ಸ್ವಾಮೀಜಿ ಉದ್ಘಾಟಿಸಿದರು.

ಸ್ವಾಮೀಜಿಗಳ ಸೇವೆ ನಾಡಿಗೆ ಅಪಾರವಾದದ್ದು, ನಿತ್ಯ ಸಮಾಜದ ಯಶಸ್ವಿಗಾಗಿ ಮಠಗಳು ಪ್ರಾರ್ಥನೆ ಮಾಡು ತ್ತವೆ. ಹಾಗೆ ನಮ್ಮ ಕನ್ನಡ ಮಠದಲ್ಲಿ ಪ್ರತಿವರ್ಷ ಹೊಸ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸಮಾಜದ ಒಳಿತಿಗೆ ಚಿಂತನೆ ಮಾಡುತ್ತಿದೆ ಎಂದರು.

ನಿವೃತ್ತ ಕೆಎಎಸ್ ಅಧಿಕಾರಿ ಈಶ್ವರ್ ಮಾತನಾಡಿ, ವೀರಶೈವ ಸಮಾಜಕ್ಕೆ ಗುರುಗಳ ಆಶೀರ್ವಾದ ಮುಖ್ಯವಾದದು. ಶ್ರೀಗಳ ಮಾರ್ಗದರ್ಶನದಲ್ಲಿ ನಡೆಯುವುದರಿಂದ ಸಮಾಜಗಳು ಒಳ್ಳೆಯ ಬಾಂಧವ್ಯಗಳನ್ನು ಹೊಂದಲು ಶರಣರ ಆಶೀರ್ವಾದ ಸಮಾಜಕ್ಕೆ ಶ್ರೀರಕ್ಷೆ ಎಂದು ತಿಳಿಸಿದರು.

ಮೈಸೂರು ಜಿಲ್ಲಾ ಬಸವ ಬಳಗದ ಅಧ್ಯಕ್ಷ ಪ್ರದೀಪ್ ಕುಮಾರ್ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನಾ ಬೆಳಗ್ಗೆ 7.30ಕ್ಕೆ ಕಲ್ಲಹಳ್ಳಿ ಗುರುಪೀಠದ ರುದ್ರಮುನಿ ಸ್ವಾಮೀಜಿ ಧ್ವಜಾರೋಹಣ ನೆರವೇರಿಸಿದರು. ಬಳಿಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಶ್ರೀಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳ ಭಾವಚಿತ್ರವನ್ನು ಬೆಳ್ಳಿ ಪಲ್ಲಕ್ಕಿ ಯಲ್ಲಿ ಪ್ರತಿಷ್ಠಾಪಿಸಿ, ವಾದ್ಯ ಮೇಳಗಳೊಂದಿಗೆ ಮೆರವಣಿಗೆ ಮಾಡಲಾಯಿತು. ವೀರ ಗಾಸೆ ನೃತ್ಯ ಎಲ್ಲರ ಗಮನ ಸೆಳೆಯಿತು.

ಕಾರ್ಯಕ್ರಮದಲ್ಲಿ ವಿವಿಧ ಮಠಗಳ ಯುವ ಶ್ರೀಗಳಿಗೆ, ಸಮಾಜ ಸೇವಕರಿಗೆ ಹಾಗೂ ಎಸ್‌ಸಿವಿಡಿಎಸ್ ವಿದ್ಯಾಸಂಸ್ಥೆಗಳಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಭಕ್ತರಿಗೆ ಅನ್ನದಾಸೋಹ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮಲ್ಲನಮೂಲೆ ಮಠದ ಶ್ರೀಚನ್ನಬಸವ ಸ್ವಾಮೀಜಿ, ಪಟ್ಟದ ಶಿವಕುಮಾರ ಸ್ವಾಮೀಜಿ, ಸಿದ್ದಲಿಂಗ ಶಿವಾನಂದ ಸ್ವಾಮೀಜಿ, ಡಾ.ಅಲ್ಲಮ ಪ್ರಭು ಸ್ವಾಮೀಜಿ, ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಜಯದೇವಿತಾಯಿ ಹಾಗೂ ಚಿನ್ಮಯ್, ಅಖಿಲ ಭಾರತ ಶರಣ ಜನ ಸಾಹಿತ್ಯ ತಾಲೂಕು ಅಧ್ಯಕ್ಷ ಶಿವಕುಮಾರ ಸ್ವಾಮಿ ಸೇರಿದಂತೆ ವಿವಿಧ ಮಠಾಧೀಶರು ಹಾಗೂ ಭಕ್ತರು ಇದ್ದರು.

ಬೆಂಬಲ ಬೆಲೆಗೆ ರೈತರು ಬೆಳೆದ ಉತ್ಪನ್ನ ಖರೀದಿಸಲು ಕಾನೂನು ರಚನೆಯಾಗಲಿ

ಜಿಲ್ಲಾ ರೈತ ಸಂಘದ ಅಧ್ಯಕ್ಷ ವಿದ್ಯಾಸಾಗರ್ ಆಗ್ರಹ

ನಂಜನಗೂಡು, ಜೂ.23– ಕೇಂದ್ರ ಸರ್ಕಾರ ರೈತರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ಘೋಷಿಸಿದೆ. ನಿಗದಿತ ಬೆಂಬಲ ಬೆಲೆಗೆ ರೈತರ ಉತ್ಪನ್ನಗಳನ್ನು ಖರೀದಿಸಲು ಕಾನೂನು ರಚಿಸಬೇಕು ಎಂದು ಜಿಲ್ಲಾ ರೈತ ಸಂಘದ ಅಧ್ಯಕ್ಷ ವಿದ್ಯಾಸಾಗರ್ ಆಗ್ರಹಿಸಿದರು.

ತಾಲೂಕಿನ ಹೆಗ್ಗಡಹಳ್ಳಿಯಲ್ಲಿ ಭಾನುವಾರ ರೈತ ಸಂಘದ ಗ್ರಾಮ ಘಟಕ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಭತ್ತಕ್ಕೆ 3800 ರೂ. ಬೆಂಬಲ ಬೆಲೆ ಘೋಷಿಸಿದೆ. ಆದರೆ ರೈತರಿಂದ ದಲ್ಲಾಳಿಗಳು ಕ್ವಿಂಟಾಲ್ ಭತ್ತವನ್ನು 2500 ರೂ.ಗೆ ಖರೀದಿಸುತ್ತಾರೆ. ಕೇಂದ್ರ ಸರ್ಕಾರ ತಾನು ಘೋಷಿಸಿದ ಬೆಂಬಲ ಬೆಲೆಗೆ ರೈತರ ಉತ್ಪನ್ನಗಳನ್ನು ಖರೀದಿಸುವಂತೆ ಕಾನೂನು ರಚನೆ ಮಾಡಬೇಕು. ಇಲ್ಲದಿದ್ದರೆ ಸರ್ಕಾರದ ನೀತಿಗೆ ಬೆಲೆ ಇರುವುದಿಲ್ಲ. ರೈತರ ಸಂಕಷ್ಟಕ್ಕೆ ಪರಿಹಾರ ಲಭಿಸುವುದಿಲ್ಲ ಎಂದರು.

ರೈತ ಸಂಘ ರೈತರ ಸಮಸ್ಯೆಗಳಿಗೆ ಸ್ಪಂದಿಸಿ ಹೋರಾಟ ನಡೆಸುತ್ತಿದೆ. ಹಂಡುವಿನಹಳ್ಳಿ–ದೇಬೂರು ಕೆರೆಗೆ ಸೇರಿದ 27 ಎಕರೆ ಪ್ರದೇಶವನ್ನು ನಗರದ ಪ್ರಭಾವಿಯೊಬ್ಬ ನಕಲಿ ದಾಖಲೆ ಸೃಷ್ಟಿಸಿಕೊಂಡು ಲಪಟಾಯಿಸಿದ್ದ. ರೈತಸಂಘ ಹೋರಾಟ ನಡೆಸಿ ಕೆರೆಗೆ ಸೇರಿದ ಜಮೀನನ್ನು ಉಳಿಸಿದೆ. ಜಮೀನು ಲಪಟಾಸಿದ್ದ ಪ್ರಭಾವಿ ವ್ಯಕ್ತಿ ಹೋರಾಟಗಾರರ ಮೇಲೆ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾನೆ. ಇಂತಹ ಎಷ್ಟೇ ಕೇಸುಗಳನ್ನು ಹಾಕಿದರೂ ರೈತ ಸಂಘ ಹೋರಾಟದಿಂದ ಹಿಂದೆ ಸರಿಯುವುದಿಲ್ಲ. ರೈತ ಸಂಘದ ಹೋರಾಟದ ಫಲವಾಗಿ ಬೆಳಲೆ–ಶಿರಮಳ್ಳಿ ಭಾಗದ ರೈತರ 150 ಎಕರೆ ಜಮೀನಿಗೆ ನೀರು ಹರಿಯುತ್ತಿದೆ. ಗೋಮಾಳಗಳನ್ನು ಪ್ರಬಲರ ಕಪಿಮುಷ್ಠಿಯಿಂದ ಬಿಡಿಸಿದ್ದೇವೆ ಎಂದರು.



ಕಾರ್ಯಕ್ರಮದಲ್ಲಿ ಜಿಲ್ಲಾ ರೈತ ಸಂಘದ ಅಧ್ಯಕ್ಷ ವಿದ್ಯಾಸಾಗರ್ ಮಾತನಾಡಿದರು.

ನೀರಾವರಿ ಇಲಾಖೆ ಕಬಿನಿ ಬಲದಂಡೆ, ಹುಲ್ಲಹಳ್ಳಿ, ರಾಂಪುರ ನಾಲೆಗಳ ಮೂಲಕ ಗ್ರಾಮಗಳ ಕೆರೆಗಳನ್ನು ತುಂಬಿಸಬೇಕು. ರೈತರ ಜಮೀನುಗಳಿಗೆ ನೀರು ಹರಿಸುವ ಮುನ್ನಾ ನಾಲೆಗಳಲ್ಲಿ ತುಂಬಿರುವ ಹೂಳನ್ನು ತೆಗೆಸಬೇಕು. ಸ್ಥಳೀಯ ಶಾಸಕರು ನೆನೆಗುದಿಗೆ ಬಿದ್ದಿರುವ ನುಗು ಏತ ನೀರಾವರಿ ಯೋಜನೆ ಪೂರ್ಣಗೊಳಿಸಬೇಕು. ಜು.1ರೊಳಗೆ ನೀರಾವರಿ ಇಲಾಖೆ ನಾಲೆಗಳಲ್ಲಿ ತುಂಬಿರುವ ಹೂಳನ್ನು ತೆಗೆಸದಿದ್ದರೆ ತೀವ್ರ ಹೋರಾಟ ರೂಪಿಸಲಾಗುವುದು. ಕಾವೇರಿ ನೀರಾವರಿ ಇಲಾಖೆ ಕಚೇರಿಗೆ ರೈತರು ಮುತ್ತಿಗೆ ಹಾಕಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಗ್ರಾಮದ ನೂರಾರು ರೈತರಿಗೆ ಹಸಿರು ಶಾಲು ತೊಡಿಸಿ ರೈತ ಸಂಘಕ್ಕೆ ಸ್ವಾಗತಿಸಲಾಯಿತು. ರೈತ ಸಂಘದ ತಾಲೂಕು ಅಧ್ಯಕ್ಷ ಸತೀಶ್ ರಾವ್, ಮುಖಂಡರಾದ ಮಂಜು, ಕಿರಣ್, ರಘು, ಕೆಂಪಣ್ಣ, ಶ್ವೇತಾ, ಶೈಲಜಾ, ಮಹದೇವಸ್ವಾಮಿ, ಶಂಕರ್, ತಿಮ್ಮಣ್ಣ, ನಾಗರಾಜು, ರಂಗಸ್ವಾಮಿ ನಾಯಕ, ವೆಂಕಟೇಗೌಡ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಸೋಮವಾರ 24 ಜೂನ್ 2024

ಗ್ಯಾರಂಟಿ ಯೋಜನೆ ಕೊಟ್ಟು, ಬೆಲೆ ಏರಿಕೆ ಮೂಲಕ ಜನರ ಜೇಬಿಗೆ ಕತ್ತರಿ ಹಾಕುತ್ತಿರುವ ರಾಜ್ಯ ಸರ್ಕಾರ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಕಿಡಿನುಡಿ

ಮೈಸೂರು, ಜೂ.23(ಬಿಎಲ್‌ಯು)– ಭಿಕ್ಷುಕನ ತಟ್ಟೆಗೆ ಶಬ್ದ ಬರುವಂತೆ ಚಿಲ್ಲರೆ ನಾಣ್ಯ ಹಾಕಿ, ಶಬ್ದ ಆಗದಂತೆ ನೋಟು ಎತ್ತಿಕೊಂಡಂತೆ ರಾಜ್ಯ ಕಾಂಗ್ರೆಸ್ ಸರ್ಕಾರ ಒಂದು ಕಡೆ ಗ್ಯಾರಂಟಿ ಯೋಜನೆ ನೀಡಿ, ಮತ್ತೊಂದು ಕಡೆ ಅಗತ್ಯ ವಸ್ತುಗಳ ಬೆಲೆ ಹೆಚ್ಚಳದ ಮೂಲಕ ಜನರ ಹಣ ಸುಲಿಗೆ ಮಾಡುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಪಾದಿಸಿದರು.

ಮೈಸೂರಿನ ಆಲನಹಳ್ಳಿ ಬಡಾವಣೆಯ ಕುದೇರು ಮಠದಲ್ಲಿ ಇಂದು ನಡೆದ ಶ್ರೀ ಗುರು ಮಲ್ಲೇಶ್ವರರ 123 ನೇ ಪ್ರಮಥ ಗಣಾರಾಧನೆ ಸಮಾರಂಭದಲ್ಲಿ ಮಾತನಾಡಿದ ಅವರು, ಒಂದು ಕಡೆ ಗ್ಯಾರಂಟಿ ಯೋಜನೆಯಲ್ಲಿ ಸೌಲಭ್ಯ ನೀಡಿ, ಮತ್ತೊಂದು ಕಡೆ ಬೆಲೆ ಹೆಚ್ಚಳ ಮಾಡುವ ಮೂಲಕ ಸರ್ಕಾರ ಜನರ ಜೇಬಿಗೆ ಕತ್ತರಿ ಹಾಕುತ್ತಿದೆ ಎಂದು ಆರೋಪಿಸಿದರು.

ಕಳೆದ ವರ್ಷದ ಭೀಕರ ಬರಗಾಲದಿಂದ ರೈತರು ತತ್ತರಿಸಿದ್ದಾರೆ. ಜನರು ಸಂಕಷ್ಟದ ಪರಿಸ್ಥಿತಿಯಲ್ಲಿರುವ ಈ ಸಮಯದಲ್ಲಿ ರಾಜ್ಯ ಸರ್ಕಾರ ಬೆಲೆ ಹೆಚ್ಚಳ ಮಾಡಿ ಗಾಯದ ಮೇಲೆ ಬರೆ ಎಳೆಯುತ್ತಿದೆ. ಒಂದಾದ ಮೇಲೆ ಒಂದರಂತೆ ಬೆಲೆ ಹೆಚ್ಚಳ ಮಾಡಿದರೆ ಗ್ಯಾರಂಟಿ ಯೋಜನೆ ಕೊಟ್ಟು ಏನು ಪ್ರಯೋಜನ? ಎಂದು ಪ್ರಶ್ನಿಸಿದರು.

ತ್ರಿವಿಧ ದಾಸೋಹದ ಮೂಲಕ ನಾಡಿಗೆ ಶಕ್ತಿ ತುಂಬಿದ ಕೀರ್ತಿ ವೀರಶೈವ ಮಠಗಳಿಗೆ ಸಲ್ಲುತ್ತದೆ. ಇವತ್ತು ಐಎಎಸ್, ಐಪಿಎಸ್ ಸೇರಿದಂತೆ ಉನ್ನತ ಸ್ಥಾನದಲ್ಲಿರುವ ಅಧಿಕಾರಿಗಳಾಗಲಿ, ರಾಜಕಾರಣಿಗಳಾಲಿ ಅಥವಾ ಕೋಟ್ಯಾಧೀಶ್ವರನಾಗಲಿ ಆತ ಸನ್ಮಾರ್ಗದಲ್ಲಿ ಸಾಗಲು ಮಠಮಾನ್ಯಗಳು ದಾರಿ ತೋರಿಸುತ್ತಿವೆ. ಧರ್ಮ ಬೋಧನೆ ಮೂಲಕ ಒಳ್ಳೆತನದ ಮಾರ್ಗದರ್ಶನ ಮಾಡುತ್ತಿವೆ ಎಂದು ವಿಜಯೇಂದ್ರ ಹೇಳಿದರು.



ಮೈಸೂರಿನ ಆಲನಹಳ್ಳಿ ಬಡಾವಣೆಯ ಕುದೇರು ಮಠದಲ್ಲಿ ಭಾನುವಾರ ನಡೆದ ಶ್ರೀ ಗುರು ಮಲ್ಲೇಶ್ವರರ 123 ನೇ ಪ್ರಮಥ ಗಣಾರಾಧನೆ ಸಮಾರಂಭವನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಘಾಟಿಸಿದರು.

ಆದರೆ ಇತ್ತೀಚಿನ ಆಧುನಿಕ ಭರಾಟೆಯಲ್ಲಿ ಮಠ ಮಾನ್ಯಗಳ ಬಗ್ಗೆ ಜನರಿಗೆ ಕಾಳಜಿ ಕಡಿಮೆಯಾಗುತ್ತಿದೆ. ಪ್ರೀತಿ ಹಾಗೂ ಶ್ರದ್ಧೆ ಕಡಿಮೆಯಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತಂದೆ ತಾಯಿ ಮಕ್ಕಳನ್ನು ಕಷ್ಟ ಪಟ್ಟು ಓದಿಸುತ್ತಾರೆ. ಅವರ ತ್ಯಾಗದಿಂದ ಶಿಕ್ಷಣ ಪಡೆದು ಉದ್ಯೋಗಕ್ಕೆ ಸೇರುವ ಮಕ್ಕಳು ಜನ್ಮ ಕೊಟ್ಟವರನ್ನು ದೂರ ತಳ್ಳುತ್ತಾರೆ. ಈ ಹಿನ್ನೆಲೆ ತಂದೆ ತಾಯಿ ಮೊದಲು ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಕೂಡ ನೀಡಬೇಕು. ರಜೆ ಸಮಯದಲ್ಲಿ ಮಕ್ಕಳನ್ನು ಮಠಗಳಿಗೆ ಕರೆ ತಂದು ಮಠಾಧೀಶರಿಂದ ಮಾರ್ಗದರ್ಶನ ಕೊಡಿಸಬೇಕು ಎಂದು ವಿಜಯೇಂದ್ರ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ, ಬದುಕಿನಲ್ಲಿ ನೈತಿಕ ಮೌಲ್ಯ ಉಳಿಯಲು ಧರ್ಮ ಪಾಲನೆ ಅಗತ್ಯವಿದೆ. ಈ ಹಿನ್ನೆಲೆ ಮಠಾಧೀಶರರು ಹಾಗೂ ಗುರು ಹಿರಿಯರ ಮಾರ್ಗದರ್ಶನ ಬಹಳ ಮುಖ್ಯ ಎಂದು ಹೇಳಿದರು.

ತ್ರಿವಿಧ ದಾಸೋಹದಲ್ಲಿ ವೀರಶೈವ ಪರಂಪರೆ ಎತ್ತಿದ ಕೈಯಾಗಿದೆ. ಹಸಿದವರಿಗೆ ಊಟ, ಸನ್ಮಾರ್ಗದಲ್ಲಿ ನಡೆಯಲು ಜ್ಞಾನ ಹಾಗೂ ಆಧ್ಯಾತ್ಮಿಕ ಬೋಧನೆ ಮಾಡುವ ಮಠಗಳ ಕಾರ್ಯ ಪ್ರಶಂಸನೀಯ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ಆರ್ಥಿಕವಾಗಿ ಹಿಂದುಳಿದ ಹಾಗೂ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಊಟ ಹಾಗೂ ವಸತಿ ಸೌಕರ್ಯದ ಅಗತ್ಯವಿದೆ. ಈ ಹಿನ್ನೆಲೆ ಮಠಗಳು ತ್ರಿವಿಧ ದಾಸೋಹದ ಮೂಲಕ ಬಹಳಷ್ಟು ಜನರ ಬದುಕಿಗೆ ದಾರಿದೀಪವಾಗಿದೆ ಎಂದು ವಿದ್ಯಾವಿಕಾಸ ವಿದ್ಯಾಸಂಸ್ಥೆ ಕಾರ್ಯದರ್ಶಿ ವಿ. ಕವೀಶ್ ಗೌಡ ಅಭಿಪ್ರಾಯಪಟ್ಟರು.

ಶಾಸಕ ಜಿ.ಟಿ.ದೇವೇಗೌಡ, ತುಮಕೂರಿನ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ, ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ, ಕುಂದೂರು ಮಠದ ಡಾ.ಶ್ರೀ ಶರತ್ ಚಂದ್ರ ಸ್ವಾಮೀಜಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜೆಡಿಎಸ್‌ನವರನ್ನು ಕಂಡರೆ ನಮಗೆ ಭಯ!

ಜೆಡಿಎಸ್‌ನವರನ್ನು ಕಂಡರೆ ನಮಗೆ ಒಮ್ಮೊಮ್ಮೆ ಭಯವಾಗುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಚ್ಚರಿ ಮಾತುಗಳನ್ನಾಡಿದರು.

ಶಾಸಕ ಜಿ.ಟಿ.ದೇವೇಗೌಡರು ನಮ್ಮ ಆತ್ಮೀಯರೂ ಹೌದು, ನಾಯಕರೂ ಹೌದು. ಆದರೆ ಒಮ್ಮೊಮ್ಮೆ ಜಾತ್ಯಾತೀತ ಜನತಾ ದಳದವರನ್ನು ಕಂಡರೆ ನಮಗೆ ಭಯ ಆಗುತ್ತದೆ ಎಂದು ಹೇಳಿದರು.

ಏಕೆಂದರೆ ಅದೃಷ್ಟ ಎಂಬುದು ಯಾವ ರೀತಿ ಒಲಿಯುತ್ತದೆ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಜೆಡಿಎಸ್‌ನವರಿಗೆ ನಮ್ಮಿಂದಲೂ ಅಧಿಕಾರ ಸಿಕ್ಕಿದೆ, ಅವರಿಂದಲೂ ನಮಗೆ ಅಧಿಕಾರ ದೊರೆತಿದೆ. ಈ ಮೂಲಕ ಜೆಡಿಎಸ್‌ನವರಿಗೆ ಒಮ್ಮೊಮ್ಮೆ ಅಧಿಕಾರ ಒಲಿಯುತ್ತದೆ. ಒಟ್ಟಾರೆ ಅದೃಷ್ಟ ಯಾವ ರೀತಿ ಒಲಿಯುತ್ತದೆ ಎಂದು ಹೇಳಲು ಸಾಧ್ಯವಿಲ್ಲ ಎಂದರು.

ಲೋಕಸಭಾ ಚುನಾವಣೆಯಲ್ಲಿ ಕೇವಲ ಎರಡು ಸ್ಥಾನ ಪಡೆದಿದ್ದರೂ ಜೆಡಿಎಸ್‌ನ ಹೆಚ್.ಡಿ.ಕುಮಾರಸ್ವಾಮಿ ಕೇಂದ್ರ ಸರ್ಕಾರದಲ್ಲಿ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರಾದ ವಿಚಾರವಾಗಿ ಪರೋಕ್ಷವಾಗಿ ಪ್ರಸ್ತಾಪಿಸಿದ ವಿಜಯೇಂದ್ರ, ಅದೃಷ್ಟದ ಮಹಾತ್ಮೆಯನ್ನು ಹಾಸ್ಯದ ಧಾಟಿಯಲ್ಲಿ ಹೀಗೆ ವಿವರಿಸಿದರು.

ಅಂದು ಮಠಗಳಿಗೆ ಆಸ್ತಿ ದಾನ ಮಾಡಿದರೆ, ಇಂದು ಮಠಗಳ ಆಸ್ತಿಯನ್ನೇ ಕಬಳಿಸುತ್ತಿದ್ದಾರೆ

ಶಾಸಕ ಜಿ.ಟಿ. ದೇವೇಗೌಡರ ವಿಷಾದ

ತ್ರಿವಿಧ ದಾಸೋಹದ ಮೂಲಕ ಜನರ ಬದುಕಿಗೆ ದಾರಿದೀಪವಾಗಿದ್ದ ಮಠಗಳಿಗೆ ಜನರು ಈ ಹಿಂದೆ ತಮ್ಮ ಆಸ್ತಿಗಳನ್ನು ದಾನ ಮಾಡುತ್ತಿದ್ದರು, ಆದರೆ ಈಗ ಮಠಗಳ ಆಸ್ತಿಯನ್ನೇ ಕೆಲವರು ಅತಿಕ್ರಮಣ ಮಾಡುತ್ತಿದ್ದಾರೆ ಎಂದು ಶಾಸಕ ಜಿ.ಟಿ.ದೇವೇಗೌಡರು ಅಸಮಾಧಾನ ವ್ಯಕ್ತಪಡಿಸಿದರು.

ಈಗ ಭೂಮಿ ಬೆಲೆ ಗಗನಕ್ಕೇರಿದೆ, ಒಂದು ಎಕರೆಗೆ ಒಂದು ಕೋಟಿ, ಒಂದು ಗುಂಟೆಗೆ ಹತ್ತು ಲಕ್ಷದ ಆಸ್ತಿ ಸಿಗುತ್ತದೆ ಎಂಬ ದುರಾಸೆಗೆ ಬಿದ್ದು ಈಗ ಮಠಗಳ ಆಸ್ತಿಯನ್ನೇ ಕಬಳಿಸಲು ಕೆಲವರು ಮುಂದಾಗುತ್ತಿದ್ದಾರೆ. ಸಮಾಜ ಈ ದಿಕ್ಕಿನಲ್ಲಿ ಹೋಗುತ್ತಿರುವುದು ಆತಂಕಕಾರಿ ವಿಚಾರ ಎಂದು ಬೇಸರ ವ್ಯಕ್ತಪಡಿಸಿದರು.

ಕಾಯಕವೇ ಕೈಲಾಸ ಎಂದು ಬೋಧಿಸಿದ ಬಸವಣ್ಣನವರು ದುಡಿಮೆ ಮಾಡಿ ಬದುಕುವಂತೆ ಹೇಳಿದರು. ಮಠಗಳು ಕೂಡ ಕಾಯಕ ತತ್ವವನ್ನು ಬೋಧಿಸುತ್ತಿವೆ. ಆದರೆ ರಾಜ್ಯ ಕಾಂಗ್ರೆಸ್ ಸರ್ಕಾರ ಜನರಿಗೆ ಉಚಿತ ಯೋಜನೆಗಳನ್ನು ನೀಡಿ ಕಾಯಕ ತತ್ವಕ್ಕೆ ವಿರುದ್ಧವಾಗಿ ವರ್ತಿಸುತ್ತಿದೆ ಎಂದು ಆರೋಪಿಸಿದರು.

ಆಂಧ್ರಪ್ರದೇಶದಲ್ಲಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಸರ್ಕಾರ ಅಲ್ಲಿನ ಜನರಿಗೆ ಎಲ್ಲಾ ರೀತಿಯ ಉಚಿತ ಯೋಜನೆಗಳನ್ನು ನೀಡಿತು. ಆದರೆ ಸರ್ಕಾರ ನೀಡಿದ ಉಚಿತ ಸೌಲಭ್ಯಕ್ಕೆ ಒಲವು ತೋರದ ಜನರು ಜಗನ್ ಮೋಹನ್ ರೆಡ್ಡಿಯನ್ನು ಮನೆಗೆ ಕಳುಹಿಸಿದರು. ಅದರಂತೆ ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗೆ ಒಲವು ತೋರದ ಜನರು ಲೋಕಸಭಾ ಚುನಾವಣೆಯಲ್ಲಿ ಕೇವಲ 9 ಸ್ಥಾನಗಳನ್ನು ಮಾತ್ರ ನೀಡಿದರು ಎಂದರು

ಈ ಹಿನ್ನೆಲೆ ಜನರು ಕೂಡ ಉಚಿತ ಯೋಜನೆಗಳನ್ನು ಬಯಸುವುದಿಲ್ಲ. ಉಚಿತ ಯೋಜನೆ ಕೊಟ್ಟು ಗೆಲ್ಲುತ್ತೇವೆ ಎಂಬ ರಾಜಕೀಯ ಪಕ್ಷಗಳಿಗೂ ಜನರು ತಕ್ಕಪಾಠ ಕಲಿಸಿದ್ದಾರೆ ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಶಾಸಕ ಎ.ಎಸ್.ಪೊನ್ನಣ್ಣ ಪ್ರತಿಕೃತಿ ದಹನಕ್ಕೆ ಶ್ರೀ ಕಾವೇರಿ ಕೊಡಗು ಮಹಿಳಾ ಸಂಘ ಖಂಡನೆ

ಮೈಸೂರು, ಜೂ.23–ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರ ಪ್ರತಿಕೃತಿಯನ್ನು ದಹಿಸಿರುವ ಕ್ರಮವನ್ನು ಮೈಸೂರಿನ ಶ್ರೀ ಕಾವೇರಿ ಕೊಡಗು ಮಹಿಳಾ ಸಂಘ ತೀವ್ರವಾಗಿ ಖಂಡಿಸಿದೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಸಂಘದ ಅಧ್ಯಕ್ಷೆ ಲವ್ಲಿ ಅಪ್ಪಯ್ಯ ಹಾಗೂ ಆಡಳಿತ ಮಂಡಳಿ ಸದಸ್ಯರು, ಕಳೆದ ಒಂದು ವರ್ಷದಿಂದ ಅನೇಕ ಸಮಾಜಮುಖಿ ಕೆಲಸಗಳನ್ನು ಮಾಡುತ್ತಿರುವ ದಕ್ಷ ಶಾಸಕ ಎ.ಎಸ್.ಪೊನ್ನಣ್ಣ ಪ್ರತಿಕೃತಿಯನ್ನು ದಹಿಸುವ ಮೂಲಕ ವಿಕೃತಿ ಪ್ರದರ್ಶಿಸುವುದನ್ನು ಖಂಡಿಸುವುದಾಗಿ ತಿಳಿಸಿದ್ದಾರೆ.

ಗಿಡ ನೆಟ್ಟು ಶ್ಯಾಮ್ ಪ್ರಸಾದ್ ಸಂಸ್ಮರಣೆ



ಮೈಸೂರಿನ ಕಾಳಿದಾಸ ರಸ್ತೆ, ಬಯಲು ರಂಗ ವೇದಿಕೆ ಬಳಿ ಗಿಡ ನೆಡುವ ಮೂಲಕ ಮಾಜಿ ಕೇಂದ್ರ ಸಚಿವ, ದಿವಂಗತ ಡಾ.ಶ್ಯಾಮ್ ಪ್ರಕಾಶ್ ಮುಖರ್ಜಿಯವರ ಸ್ಮೃತಿ ದಿವಸ ಆಚರಿಸಲಾಯಿತು. ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ, ರಾಜ್ಯ ವಕ್ತಾರ ಮಹೇಶ್, ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್ ಗೌಡ, ಮುಖಂಡರಾದ ರಾಮೇಗೌಡ, ದಾಸ್ ಪ್ರಕಾಶ್, ನಗರಪಾಲಿಕೆ ಮಾಜಿ ಸದಸ್ಯರಾದ ಸುಬ್ಬಯ್ಯ, ರವೀಂದ್ರ, ವೇದಾವತಿ, ರಂಗಸ್ವಾಮಿ, ಪ್ರಮಿಳಾ ಭರತ್, ಶ್ಯಾಮ್, ಸುರೇಶ, ಮಹಿಳಾ ಮೋರ್ಚಾದ ಚಂದ್ರಕಲಾ, ಮಮತಾ ಶೆಟ್ಟಿ ಮಂಜುಳ, ಸುಧಾಮಣಿ, ಶುಭಮಂಗಳ ಮತ್ತಿತರರು ಭಾಗವಹಿಸಿದ್ದರು.

ಎನ್.ಆರ್.ಕ್ಷೇತ್ರದಲ್ಲಿ ಡಾ.ಶ್ಯಾಮಪ್ರಸಾದ್ ಮುಖರ್ಜಿ ಸ್ಮರಣೆ

ಮೈಸೂರು, ಜೂ.23– ಬಿಜೆಪಿ ನರಸಿಂಹ ರಾಜ ಕ್ಷೇತ್ರದ ವತಿಯಿಂದ ಪಕ್ಷದ ಸಂಸ್ಥಾಪಕ ಡಾ.ಶ್ಯಾಮಪ್ರಸಾದ್ ಮುಖರ್ಜಿ ಅವರ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಕ್ಯಾತಮಾರನಹಳ್ಳಿ ಸಮುದಾಯ ಭವನದಲ್ಲಿ ಭಾನುವಾರ ಏರ್ಪಡಿಸಲಾಗಿತ್ತು.



ಬಿಜೆಪಿ ನರಸಿಂಹರಾಜ ಕ್ಷೇತ್ರದ ವತಿಯಿಂದ ಏರ್ಪಡಿಸಿದ್ದ ಡಾ.ಶ್ಯಾಮಪ್ರಸಾದ್ ಮುಖರ್ಜಿ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಕೇಶವ ಪ್ರಸಾದ್ ಮಾತನಾಡಿದರು. ಮಾಜಿ ಮೇಯರ್ ಸಂದೇಶ್ ಸ್ವಾಮಿ ಮತ್ತಿತರರಿದ್ದರು.

ಈ ವೇಳೆ ವಿಧಾನಪರಿಷತ್ ಸದಸ್ಯ ಕೇಶವ ಪ್ರಸಾದ್ ಮಾತನಾಡಿ, 'ಒಂದು ದೇಶ ಒಂದು ಕಾನೂನು' ಕಾಯ್ದೆ ಜಾರಿಗೆ ಆಗ್ರಹಿಸಿದ್ದ ಡಾ.ಶ್ಯಾಮಪ್ರಸಾದ್ ಮುಖರ್ಜಿ ಅವರು, ದೇಶದ ಹಿತಕ್ಕಾಗಿ ಮಂತ್ರಿ ಪದವಿಗೆ ರಾಜೀನಾಮೆ ನೀಡಿದ್ದ ಕಟ್ಟಾ ಹಿಂದುತ್ವವಾದಿ. ಜಮ್ಮು ಕಾಶ್ಮೀರದಲ್ಲಿ ಅವರ ಬಲಿದಾನವಾಯಿತು. ಈ ನಾಯಕನ ಜೀವನ ಚರಿತ್ರೆಯನ್ನು ಸ್ಮರಿಸುವ ಮೂಲಕ ಅವರ ತ್ಯಾಗ ಬಲಿದಾನಕ್ಕೆ ಗೌರವ ಸಲ್ಲಿಸಬೇಕಿದೆ ಎಂದರು.

ಬಿಜೆಪಿ ಮುಖಂಡ, ಮಾಜಿ ಮೇಯರ್ ಸಂದೇಶ್ ಸ್ವಾಮಿ ಮಾತನಾಡಿ, ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನದ ಆಶಯದಂತೆ 'ಒಂದು ದೇಶ ಒಂದು ಕಾನೂನು' ಜಾರಿಗಾಗಿ ಹೋರಾಟ ನಡೆಸಿದ ಶ್ಯಾಮಪ್ರಸಾದ್ ಮುಖರ್ಜಿ ಅವರ ಸ್ಮರಣೆ ನಮ್ಮೆಲ್ಲರಿಗೂ ದಾರಿದೀಪವಾಗಲಿ. ಮುಖರ್ಜಿ ಅವರ ಆಶಯದಂತೆ ಪ್ರಧಾನಿ ಮೋದಿ ಅವರು 370ನೇ ವಿಧಿಯನ್ನು ರದ್ದುಗೊಳಿಸಿ, ಐಕ್ಯತೆ ಹಾಗೂ ಸಮಾನತೆ ಕಲ್ಪಿಸಿರುವುದು ಅಭಿನಂದನೀಯ. ಮೈಸೂರಿನ ನರಸಿಂಹ ರಾಜ ಕ್ಷೇತ್ರವೂ ಕೂಡ ರಾಜಕೀಯ ವಿಚಾರದಲ್ಲಿ ಒಂದು ರೀತಿ ಹಿಂದಿನ ಜಮ್ಮು–ಕಾಶ್ಮೀರದಂತಾಗಿದೆ. ಇಲ್ಲಿಯೂ ಎಲ್ಲಾ ವರ್ಗದವರಿಗೂ ಅವಕಾಶ ಸಿಗುವಂತಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಂಗವಾಗಿ ಆಶಾ ಕಾರ್ಯಕರ್ತೆಯರನ್ನು ಗೌರವಿಸಲಾಯಿತು. ಬಿಜೆಪಿ ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಗಿರಿಧರ್, ಕ್ಷೇತ್ರದ ಅಧ್ಯಕ್ಷ ಮಂಜುನಾಥ್ ಸ್ಮಾರ್ಟ್, ಪ್ರಧಾನ ಕಾರ್ಯದರ್ಶಿಗಳಾದ ಪದ್ಮನಾಭ, ಸಿ.ಮಂಜು, ನಗರಪಾಲಿಕೆ ಸದಸ್ಯ ಸಾತ್ವಿಕ್ ಸಂದೇಶ್‌ಸ್ವಾಮಿ, ನಗರ ಉಪಾಧ್ಯಕ್ಷ ರಮೇಶ್, ಮಹಿಳಾ ಘಟಕದ ಉಷಾ ನಾರಾಯಣಪ್ಪ, ಸ್ಥಳೀಯ ಮುಖಂಡರಾದ ಶಿವಕುಮಾರ್, ನಾರಾಯಣ ಲೋಲಪ್ಪ, ಮಾಲಿನಿ ಪಾಲಾಕ್ಷ, ಕವಿತಾ, ಉಮಾ, ವನಜಾಕ್ಷಮ್ಮ, ಶಾಲಿನಿ, ಸ್ವಾಮಿ, ಶಾಂತರಾಜ್, ಸುಬ್ರಮಣಿ ಕಾರ್ತಿಕ್, ಯಶ್ವಂತ್ ಸಿಂಗ್, ಡಿ.ಕೆ.ಶಿವು, ಶಿವಾನಂದ್ ರಾವ್, ನವೀನ್, ಪರಮೇಶ್, ಜಗದೀಶ್, ಸಂತೋಷ್, ಬಸವರಾಜ್, ಎಸ್ಸಿ, ಎಸ್ಟಿ ಘಟಕದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಯೋಗ ದೇಶದಲ್ಲೇ ಉಳಿದು ಮುಂದಿನ ಪೀಳಿಗೆಗೆ ತಲುಪಲಿ

ಪ್ರಥಮ ಯೋಗ ಸಮ್ಮೇಳನದ ಸರ್ವಾಧ್ಯಕ್ಷ ಡಾ.ಕೆ.ಎಲ್.ಶಂಕರನಾರಾಯಣ ಜೋಯಿಸ್ ಅಭಿಮತ

ಮೈಸೂರು, ಜೂ.23(ಎಂಕೆ)– ಭಾರತೀಯ ಯೋಗ ನಮ್ಮಿಂದಲೇ ಪಾಶ್ಚಿಮಾತ್ಯಗೊಂಡು, ಕಡೆಗೆ ಪಾಶ್ಚಿಮಾತ್ಯರಿಂದ ನಾವು ಕಲಿಯುವಂತಾಗಬಾರದು. ಭಾರತೀಯ ಯೋಗ, ಭಾರತದಲ್ಲಿಯೇ ಉಳಿದು ಸರಳತೆ ಹಾಗೂ ಮೌಲ್ಯದೊಂದಿಗೆ ಮುಂದಿನ ಪೀಳಿಗೆಗೆ ತಲುಪಬೇಕು ಎಂದು ಯೋಗ ವಿದ್ವಾಂಸರೂ ರಾಜ್ಯ ಮಟ್ಟದ ಪ್ರಥಮ ಯೋಗ ಸಮ್ಮೇಳನದ ಸರ್ವಾಧ್ಯಕ್ಷ ಡಾ.ಕೆ.ಎಲ್.ಶಂಕರನಾರಾಯಣ ಜೋಯಿಸ್ ಹೇಳಿದರು.

ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಕರ್ನಾಟಕ ಯೋಗ ಶಿಕ್ಷಕರ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ರಾಜ್ಯಮಟ್ಟದ ಪ್ರಥಮ ಯೋಗ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಯೋಗಾಭ್ಯಾಸದ ಹೆಸರಿನಲ್ಲಿ ಸರ್ಕಸ್ ನಡೆಸಲಾಗುತ್ತಿದೆ. ದೇಹದ ಪ್ರಕೃತಿಗೆ ಅನುಗುಣವಾಗಿ ಮೌಲ್ಯಯುತ ಆಸನಗಳ ಅಭ್ಯಾಸ ಮಾಡುವುದೇ ಯೋಗ ಸಂಸ್ಕೃತಿಯಾಗಿದೆ ಎಂದರು.

ವಿದೇಶಿ ಸಂಸ್ಕೃತಿ ಅಳವಡಿಕೆಯಿಂದ ಭಾರತೀಯ ಹೆಣ್ಣುಮಕ್ಕಳು ಚಿಕ್ಕವಯಸ್ಸಿನಲ್ಲೇ ಋತುಮತಿಯಾಗುತ್ತಿದ್ದಾರೆ. ಮಹಿಳೆಯರು ಮುಟ್ಟಾದ ಸಂದರ್ಭದಲ್ಲಿ ಪ್ರಕೃತಿ ನಿಯಮದಂತೆ ವಿಶ್ರಾಂತಿ ಪಡೆಯಬೇಕು. ಆದರೆ ಆಧುನಿಕ ಜೀವನ ಶೈಲಿ ಅವಲಂಬನೆಯಿಂದಾಗಿ ಪ್ರಕೃತಿ ವಿರುದ್ಧವಾಗಿ ಮುಟ್ಟಾಗಿದ್ದರೂ ವಿಶ್ರಾಂತಿ ಪಡೆಯದೇ ತಮ್ಮ ಕೆಲಸದಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ಇದರಿಂದ ಅವರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ ಎಂದು ಎಚ್ಚರಿಸಿದರು.

ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಆರ್ ಕೌಟಿಲ್ಯ ಮಾತನಾಡಿ, ಆಹಾರವೇ ಆರೋಗ್ಯ, ಯೋಗ ಬಲ್ಲವನಿಗೆ ರೋಗವಿಲ್ಲವೆಂಬಂತೆ ಪ್ರಾಚೀನ ಭಾರತದ ಜೀವನ ಕ್ರಮದಲ್ಲಿಯೇ ಯೋಗವಿತ್ತು. ಆದ್ದರಿಂದ ಭಾರತೀಯರು ಯೋಗವನ್ನು ಹೊಸದಾಗಿ ನೋಡುವ ಅಗತ್ಯವಿಲ್ಲ. ಆದರೆ ಜೀವನ ಕ್ರಮಗಳಲ್ಲಿ ಬದಲಾವಣೆಯಾದಂತೆ ಯೋಗದ ಅವಶ್ಯಕತೆ ಗೊತ್ತಾಗುತ್ತಿದೆ ಯೋಗದ ಮಹತ್ವ ತಿಳಿಸುವ ಇಂತಹ ಸಮ್ಮೇಳನಗಳು ವಿಶ್ವಯೋಗ ದಿನ ಹಾಗೂ ದಸರಾ ಸಂದರ್ಭದಲ್ಲಿ ಆಯೋಜನೆಯಾಗಬೇಕು ಎಂದು ಸಲಹೆ ನೀಡಿದರು.



ಪ್ರಥಮ ಯೋಗ ಸಮ್ಮೇಳನದಲ್ಲಿ ಯೋಗ ಸಾಧಕರಿಗೆ 'ಯೋಗ ರತ್ನಾಕರ ಪ್ರಶಸ್ತಿ ಪ್ರದಾನ' ಮಾಡಲಾಯಿತು.

ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಮೈಸೂರು ಯೋಗಕ್ಕೆ ವಿಶ್ವಮಾನ್ಯತೆ ದೊರೆಯಿತು. ಯೋಗಾಚಾರ್ಯ ಕೃಷ್ಣಮಾಚಾರ್ಯರ ಮೂಲಕ ಯೋಗ ಸಂರಕ್ಷಣೆ ಮಾಡಿದರು. ಹಾಗಾಗಿ ಮೈಸೂರು ಕೇವಲ ಸಂಸ್ಕೃತಿಯ ತವರು ಮಾತ್ರವಲ್ಲದೆ ಹತ್ತು–ಹಲವು ಆಚಾರ–ವಿಚಾರಗಳನ್ನೊಳಗೊಂಡ ಶ್ರೀಮಂತಿಕೆಯ ತವರೂರಾಗಿದೆ ಎಂದರು.

ಯೋಗದಿಂದ ದೈಹಿಕ ತಾಪಮಾನ ಇಳಿಕೆ: ಹೆಚ್ಚುತ್ತಿರುವ ಜಾಗತಿಕ ತಾಪಮಾನ ಕಡಿಮೆಯಾಗಬೇಕಾದರೆ ಮೊದಲು ಮನುಷ್ಯನ ದೈಹಿಕ ತಾಪಮಾನ ಕಡಿಮೆಯಾಗಬೇಕು. ಇದಕ್ಕಿರುವ ಪರಿಹಾರ ಯೋಗ, ಪ್ರಾಣಾಯಾಮ ಮಾತ್ರ ದೈಹಿಕ ತಾಪಮಾನವನ್ನು ಇಳಿಸುವ ವಿಧಾನವೇ ಯೋಗದ ಅನುಸರಣೆ. ಪ್ರಾಣಾಯಾಮ ಮನಸ್ಸನ್ನು ಶಾಂತಚಿತ್ತವನ್ನಾಗಿಸುತ್ತದೆ. ಇದರಿಂದ ಕ್ರೌರ್ಯವೆಂಬುದು ಕಡಿಮೆಯಾಗಿ ಯುದ್ಧಗಳು ನಿಲ್ಲುವ ಮೂಲಕ ಜಾಗತಿಕ ತಾಪಮಾನವೂ ಕಡಿಮೆಯಾಗುತ್ತದೆ ಎಂದು ತಿಳಿಸಿದರು.

ಮನೋಬಲ ವೃದ್ಧಿ: ಸುಯೋಗ್ ಆಸ್ಪತ್ರೆ ಮುಖ್ಯಸ್ಥರೂ ಆದ ವೈದ್ಯ ಸಾಹಿತಿ ಡಾ.ಎಸ್.ಪಿ. ಯೋಗಣ್ಣ ಮಾತನಾಡಿ, ಯೋಗದಿಂದ ಆತ್ಮಬಲ–ಮನೋಬಲ ವೃದ್ಧಿಯಾಗುತ್ತದೆ. ಮನುಷ್ಯನ ರೋಗ ನಿರೋಧಕ ಶಕ್ತಿ ಹೆಚ್ಚಿಸುತ್ತದೆ. ಎಲ್ಲಾ ಕಾಯಿಲೆಗಳಿಗೂ ಮೂಲವಾದ ಮನಸ್ಸನ್ನು ಸದೃಢವನ್ನಾಗಿಸಲು ಯೋಗ ಸಹಕಾರಿ ಎಂದರಲ್ಲದೆ ಪ್ರಥಮ ಯೋಗ ಸಮ್ಮೇಳನದಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ಯೋಗ, ಯೋಗದ ಪ್ರಾಚೀನತೆ, ವೈಜ್ಞಾನಿಕ ಸಂಶೋಧನೆಗಳ ನೋಟ, ಆಧ್ಯಾತ್ಮಿಕ ಸಾಧನೆಗೆ ಯೋಗ, ಚಿಕಿತ್ಸೆಯಾಗಿ ಯೋಗ ಸೇರಿದಂತೆ ಯೋಗದ ಮಹತ್ವ ತಿಳಿಸುವ ಪ್ರಮುಖ ವಿಚಾರಗಳನ್ನು ಚರ್ಚಿಸಲಾಯಿತು ಎಂದು ತಿಳಿಸಿದರು.

ಪ್ರಶಸ್ತಿ ಪ್ರದಾನ, ಪುಸ್ತಕ ಬಿಡುಗಡೆ: ಹಿರಿಯ ಯೋಗ ಶಿಕ್ಷರಾದ ಡಾ.ಎ.ಆರ್.ಸೀತಾರಾಂ, ಎ.ಎನ್.ಮೂರ್ತಿ, ಡಾ.ಸಿ.ರಮೇಶ್ ಶೆಟ್ಟಿ ಎಂ.ಎಸ್.ರಮೇಶ್ ಕುಮಾರ್, ಯೋಗ ಮತ್ತು ಆಯುರ್ವೇದ ತಜ್ಞೆ ಡಾ.ಹೆಚ್.ಎಸ್. ಶಶಿರೇಖಾ ಅವರಿಗೆ 'ಯೋಗ ರತ್ನಾಕರ ಪ್ರಶಸ್ತಿ ಪ್ರದಾನ' ಮಾಡಿ ಗೌರವಿಸಲಾಯಿತು. ಹಾಗೆಯೇ ಎ.ಎನ್.ಮೂರ್ತಿ ರಚಿತ 'ಯೋಗಿರಾಜ ಕೃಷ್ಣಮಾಚಾರ್ಯ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಯೋಗ ನೃತ್ಯ ಪ್ರದರ್ಶನ: ಇದೇ ವೇಳೆ ವಿವಿಧ ಯೋಗ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಆಕರ್ಷಕ ಯೋಗ ನೃತ್ಯ ಪ್ರದರ್ಶನ ನೀಡಿ ಗಮನ ಸೆಳೆದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ, ಉಪಾಧ್ಯಕ್ಷ ರವಿಶಾಸ್ತ್ರಿ, ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ರಾಧಾಕೃಷ್ಣ ರಾಮರಾವ್, ಸಮಾಜ ಸೇವಕ ಶ್ರೀಧರ್ ದೀಕ್ಷಿತ್, ಯೋಗ ಸಮ್ಮೇಳದ ಉಪಾಧ್ಯಕ್ಷ ಡಾ.ಪಿ.ಎನ್.ಗಣೇಶ್‌ಕುಮಾರ್, ಪ್ರಧಾನ ಸಂಚಾಲಕ ಎನ್.ಅನಂತು, ಖಜಾಂಚಿ ಅರವಿಂದ ಶರ್ಮಾ, ಪುರುಷೋತ್ತಮ್ ಮತ್ತಿತರರಿದ್ದರು.

ಸಮ್ಮೇಳನದ ನಿರ್ಣಯಗಳು...

ರಾಜ್ಯ ಮಟ್ಟದ ಪ್ರಥಮ ಯೋಗ ಸಮ್ಮೇಳನದಲ್ಲಿ ಎಲ್ಲಾ ಆಸ್ಪತ್ರೆಗಳಲ್ಲಿ ಯೋಗ ಚಿಕಿತ್ಸಾಲಯವನ್ನು ಸರ್ಕಾರ ಸ್ಥಾಪಿಸಬೇಕು. ಶಾಲೆಗಳಲ್ಲಿ ಯೋಗ ಶಿಕ್ಷಣ ಪ್ರಾರಂಭಿಸಿ, ಪ್ರತ್ಯೇಕ ಯೋಗ ಶಿಕ್ಷಕರನ್ನು ನೇಮಿಸಬೇಕು. ಆಧ್ಯಾತ್ಮಿಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕು. ಯೋಗಾಚಾರ್ಯರಾದ ಕೃಷ್ಣಮಾಚಾರ್ಯರು ಮತ್ತು ಪಟ್ಟಾಭಿ ಜೋಯಿಸರ ಸ್ಮಾರಕ ಸ್ಥಾಪಿಸಬೇಕು ಎಂದು ಮನವಿ ಮಾಡಲಾಯಿತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗುಂಟೂರು ಖಾರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅರನ್‌ಮನೈ–4 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಎ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮಹಾರಾಜ (ತ)	4 ಪ್ರದರ್ಶನಗಳು
ಸಂಗಂ	
ಕೋಟಿ (ಕ)	4 ಪ್ರದರ್ಶನಗಳು
ಲಿಡೋ	
ಕರಟಕ ದಮನಕ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಹದ್ದೂರ್ (ಕ)	4 ಪ್ರದರ್ಶನಗಳು
ಪ್ರಭಾ	
ಬಹದ್ದೂರ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಇನ್‌ಸೈಡ್ ಔಟ್ 2(3ಡಿ) (ಇಂ): ಬೆ.11ಕ್ಕೆ, ಪೋಕಿರಿ (ತ): ಮ.1ಕ್ಕೆ, ಹಮಾರೆ ಬಾರಹ್ (ಹಿಂ): ಸಂ.4.10ಕ್ಕೆ, ರಾ.7.05ಕ್ಕೆ, ಕ್ರಿಯೇಷನ್ಸ್ ಆಫ್ ದಿ ಗಾಡ್ಸ್ 1 (ಚೈ): ರಾ.10ಕ್ಕೆ
ಸ್ಕ್ರೀನ್ 2	ಲವ್ ಲಿ (ಕ): ಬೆ.10.25ಕ್ಕೆ, ರಾ.7.10ಕ್ಕೆ, ಮುಂಜ್ಯಾ (ಹಿಂ): ಮ.1.35ಕ್ಕೆ, ಶಿವಮ್ಮ ಚಂದು ಚಾಂಪಿಯನ್ (ಹಿಂ): ಸಂ.4.10ಕ್ಕೆ, ನಡನ್ನ ಸಂಭವಂ (ಮ): ರಾ.10.15ಕ್ಕೆ.
ಸ್ಕ್ರೀನ್ 3	ಮಹಾರಾಜ (ತ): ಬೆ.10.30ಕ್ಕೆ, ಸಂ.4.15ಕ್ಕೆ, ಸಂಭವಾಮಿ ಯುಗೇ ಯುಗೆ (ಕ): ಮ.1.25ಕ್ಕೆ, ಉಲ್ಲೋಝುಕ್ಕು (ಮ): ರಾ.7.15ಕ್ಕೆ, ಜಹಂಗೀರ್ ನ್ಯಾಷನಲ್ ಯೂನಿವರ್ಸಿಟಿ (ಹಿಂ): ರಾ.9.50ಕ್ಕೆ.
ಸ್ಕ್ರೀನ್ 4	ಚಿಲ್ಲಿ ಚಿಕನ್ (ಕ): ಬೆ.10.50ಕ್ಕೆ, ಕೋಟಿ (ಕ): ಮ.1.25ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಸಂ.4.40ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಇನ್‌ಸೈಡ್ ಔಟ್ (3ಡಿ)(ಹಿಂ): ಬೆ.11ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಮ.1.20ಕ್ಕೆ, ಸಂ.4.20ಕ್ಕೆ, ಸಂ.6.40ಕ್ಕೆ, ಮುಂಜ್ಯಾ (ಹಿಂ): ರಾ.9ಕ್ಕೆ.
ಸ್ಕ್ರೀನ್ 2	ಮುಂಜ್ಯಾ (ಹಿಂ): ಬೆ.10ಕ್ಕೆ, ರಾ.7.35ಕ್ಕೆ, ರಾಕ್‌ಸ್ಟಾರ್ (ಹಿಂ): ಮ.12.45ಕ್ಕೆ, ಕೋಟಿ (ಕ): ಸಂ.4.05ಕ್ಕೆ, ರಾ.10.20ಕ್ಕೆ,
ಸ್ಕ್ರೀನ್ 3	ಚಂದು ಚಾಂಪಿಯನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.05ಕ್ಕೆ, ಮಹಾರಾಜ (ತ): ಮ.1.35ಕ್ಕೆ, ರಾ.7.05ಕ್ಕೆ, ಶಿವಮ್ಮ ಹರೆಹಂಚಿನಾಳ (ಕ): ಸಂ.4.40ಕ್ಕೆ, ಜಿಆರ್‌ಆರ್‌ಆರ್ (ಮ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕೋಟಿ (ಕ): ಮ.1ಕ್ಕೆ, ಸಂಭವಾಮಿ ಯುಗೇ ಯುಗೆ (ಕ): ಸಂ.4.05ಕ್ಕೆ, ಚಿಲ್ಲಿ ಚಿಕನ್ (ಕ): ರಾ.7.05ಕ್ಕೆ, ಮಹಾರಾಜ (ತ): ರಾ.9.30ಕ್ಕೆ.
ಸ್ಕ್ರೀನ್ 2	ದೇಸಾಯಿ (ಕ): ಸಂ.4.15ಕ್ಕೆ, ಕೋಟಿ (ಕ): ರಾ.7.45ಕ್ಕೆ
ಸ್ಕ್ರೀನ್ 3	ಪೋಕಿರಿ (ತ): ಮ.1.15ಕ್ಕೆ, ಲವ್ ಲಿ (ಕ): ಸಂ.4.20ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 4	ಲವ್ ಲಿ (ಕ): ಮ.1.30ಕ್ಕೆ, ಮಹಾರಾಜ (ತ): ಸಂ.6.45ಕ್ಕೆ, ಕೋಟಿ (ಕ): ರಾ.9.25ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪ್ರಶಸ್ತಿ ಪ್ರದಾನ



ಮೈಸೂರು ಪ್ರೆಸ್ ಕ್ಲಬ್ ವತಿಯಿಂದ 2023–2024ನೇ ಸಾಲಿನ 'ಸಮಾಜ ಸೇವಾ ರತ್ನ' ರಾಜ್ಯ ಪ್ರಶಸ್ತಿಯನ್ನು ಉದ್ಯಮಿ ಹಾಗೂ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರಿಗೆ ನೀಡಿ, ಅಭಿನಂದಿಸಲಾಯಿತು. ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಪ್ರೆಸ್ ಕ್ಲಬ್ ಪದಾಧಿಕಾರಿಗಳು ಹಾಗೂ ಸದಸ್ಯರು ಚಿತ್ರದಲ್ಲಿದ್ದಾರೆ.

ಶ್ಯಾಮ್ ಪ್ರಸಾದ್ ಮುಖರ್ಜಿ ಸ್ಮೃತಿ ದಿವಸ



ಮೈಸೂರು ಬಿಜೆಪಿ ಕಚೇರಿಯಲ್ಲಿ ಭಾನುವಾರ ಕೇಂದ್ರ ಸಚಿವರಾಗಿದ್ದ ದಿವಂಗತ ಡಾ.ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಸ್ಮೃತಿ ದಿವಸ ಪ್ರಯುಕ್ತ ಅವರ ಭಾವಚಿತ್ರಕ್ಕೆ ಪಕ್ಷದ ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ನೈರುತ್ಯ ರೈಲ್ವೆ ಸಲಹಾ ಸಮಿತಿ ಸದಸ್ಯ ಶಿವರಾಜ್, ನಗರ ಮಾಧ್ಯಮ ಸಹ ಸಂಚಾಲಕ ಸಂತೋಷ್, ಎಸ್ಸಿ ಮೋರ್ಚಾ ಉಪಾಧ್ಯಕ್ಷ ಸೋಮಶೇಖರ್ ಪುಷ್ಪಾರ್ಚನೆ ಮಾಡಿದರು.

ಯುವಕ ನಾಪತ್ತೆ

ಮೈಸೂರು, ಜೂ.23– ಮೈಸೂರಿನ ಯರಗನಹಳ್ಳಿ ನಿವಾಸಿ ಆರ್.ಎನ್.ರವಿಕುಮಾರ್(24) ಎರಡು ತಿಂಗಳ ಹಿಂದೆ ನಾಪತ್ತೆಯಾಗಿದ್ದು, ಈವರೆಗೂ ಸುಳಿವು ದೊರೆತಿಲ್ಲ.



ಶ್ರೀರಾಂಪುರದಲ್ಲಿ ಸಿಮೆಂಟ್ ಅಂಗಡಿ ಇಟ್ಟುಕೊಂಡಿದ್ದ ರವಿಕುಮಾರ್, ಎಂದಿನಂತೆ ಏ.5ರಂದು ಬೆಳಗ್ಗೆ 8.30ಕ್ಕೆ ಅಂಗಡಿಗೆ ಹೋಗುವುದಾಗಿ ಮನೆಯಲ್ಲಿ ತಿಳಿಸಿ, ಹೊರ ಹೋದವರು ಈವರೆಗೂ ಬಂದಿಲ್ಲ. ಪರಿಚಿತರು, ಸಂಬಂಧಿಕರ ಬಳಿ ವಿಚಾರಿಸಿದ್ದು, ಯಾವುದೇ ಮಾಹಿತಿ ಸಿಕ್ಕಿಲ್ಲ ಎಂದು ರವಿಕುಮಾರ್ ತಾಯಿ ಸವಿತಾ ಅವರು ಆಲನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ರವಿಕುಮಾರ್ ಬಗ್ಗೆ ಮಾಹಿತಿ ತಿಳಿದರೆ ಆಲನಹಳ್ಳಿ ಠಾಣೆ(0821–2418311) ಅಥವಾ ನಗರ ಪೊಲೀಸ್ ಕಂಟ್ರೋಲ್ (2418339/340)ಗೆ ತಿಳಿಸುವಂತೆ ಪೊಲೀಸರು ಮನವಿ ಮಾಡಿದ್ದಾರೆ.

೩೦ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ೩೦ ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಶ್ರೀಮತಿ ನಾಗರತ್ನ, ಮಕ್ಕಳು, ಅಳಿಯಂದಿರು, ಮತ್ತು ಮೊಮ್ಮಕ್ಕಳು

ಆರ್. ರಘುರಾಮ್ (ಮೈದನಹಳ್ಳಿ)

15ನೇ ವರ್ಷದ ಚಿರಸ್ಮರಣೆ



ನಮ್ಮೆಲ್ಲರ ಬಾಳಲ್ಲಿ ಸ್ಫೂರ್ತಿಯ ಚಿಲುಮೆಯಾಗಿ ಬಂದು ನಕ್ಷತ್ರದಂತೆ ಪ್ರಜ್ವಲಿಸಿ ಮರೆಯಾದ ನಿನ್ನ ನೆನಪು ಸದಾ ಹಸಿರಾಗಿರುವ ನಿನ್ನ ಆತ್ಮಕ್ಕೆ ಶಾಂತಿ ಸಿಗಲೆಂದು ಹಾರೈಸುವ,

ದುಃಖತಪ್ತರು: ನಿನ್ನ ಅಮ್ಮ ರತ್ನ, ಅಪ್ಪ ಟಿ.ವಿ.ನಾರಾಯಣ್, ಅಕ್ಕ ನೇತ್ರಾವತಿ, ಬಾವ ಸಂಪತ್, ಅಣ್ಣ ಪ್ರವೀಣ್ ಕುಮಾರ್, ಅತ್ತಿಗೆ ಸುಶ್ಮಾ ಹಾಗೂ ಶ್ರೇಯ, ಹಿಮಾನಿ, ತನಿಷ್ಕ್, ಮುದ್ದು ಪುಟಾಣಿಗಳಾದ ಯುದಿಷ್ಠರ್, ಮೇಘಾನ್ಸ್ ಹಾಗೂ ಕುಟುಂಬವರ್ಗ ಮತ್ತು ಬಂಧು ಮಿತ್ರರು.

ಟಿ.ಎನ್.ಪ್ರದೀಪ್‌ಕುಮಾರ್,ಬಿ.ಇ

2ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದಿದೆ ಸದಾ ನಿಮ್ಮ ನೆನಪಿನಲ್ಲಿರುವ ಪತ್ನಿ ಸುಶೀಲ ಮಕ್ಕಳಾದ ರವಿ.ಮಂಜು ಮತ್ತು ಮನು.

ಕೆ.ಆರ್.ಶ್ರೀನಿವಾಸನ್ IPS ನಗರ, ಲಲಿತಾದ್ರಿಪುರ ಮೈಸೂರು

ಶ್ರೀನಿವಾಸ.ಎಲ್
Rtd. ARSI

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಹಸಿರು ನಮ್ಮ ಉಸಿರು





Specifications / Features	Hyundai Exter SX (O) Connect MT Dual Tone	Tata Punch Creative Flagship MT Dual Tone
Height	1,631mm	1,615mm
Wheelbase	2,450mm	2,445mm
Bootspace (litres)	391	366
Dashcam	Dual View	NO
Airbags	6 Airbags	2 Airbags
Rear Middle Three Point seatbelt	YES	NO
Hill Hold Control	YES	NO
Traction Control System (TC/TCS)	YES	NO
Anti-glare Mirrors (IRVM)	Electronic	Manual
Alexa Compatibility	YES	NO
Shift Indicator	YES	NO
Touchscreen Size (CM)	20.32	17.8
Wireless Charger	YES	NO
Multiple Language UI digital cluster	YES	NO
Offline Navigation in Infotainment	YES	NO
Nature of Sounds	YES	NO
Telematics Connectivity	60+ Connected Features	40 Connected Features
Seat belt reminder in second row	YES	NO

*Terms and conditions apply. Ex showroom price. Features and specifications may vary. Source: From respective manufacturer's product brochures. Finance at the sole discretion of the financer. For more details visit your nearest Advaith Hyundai showroom.

HYUNDAI

Advaith Hyundai

Mysore:
Belwadi - Hunsur road: Chandan: 9538970802, Ranjith: 9945773944;
JLB Road: Rakesh: 9538971141, Arun: 9538971183;
V V Nagar: Ningaraju: 9945773967, Vicky Shekar: 9663376058

Kodagu:
Gonikoppal: Kaushik: 9880577675, Chethan: 9538971188;
Madikeri: Shrinidhi: 9538971151, Pradeep: 6364575893;
Kushalnagara: Roy Ponnappa: 9538971149, Puneeth: 9620002587

Mandya:
Deepak: 9740060075,
Vishwa: 9538970804

Hassan:
Kumaraswamy: 9620004782,
Nandan: 9538971132

ಬೇಕಾಗಿದ್ದಾರೆ
ವಿಶ್ರುತ್ ಆಗ್ರೋ ಇಂಡಸ್ಟ್ರೀಸ್
ಕುಂದಾಪುರ
ಇವರಿಗೆ ಮೀನಿನ ಮೂಲವುಳ್ಳ ಸಾವಯವ ಗೊಬ್ಬರವನ್ನು ಮಾರಾಟ ಮಾಡಲು ವಿತರಕರು ಬೇಕಾಗಿದ್ದಾರೆ ಹಾಗೂ ಪ್ರತಿ ಜಿಲ್ಲೆಗಳಿಗೆ ಅನುಭವವುಳ್ಳ ಡಿಸ್ಟ್ರಿಕ್ಟ್ ಮ್ಯಾನೇಜರ್ ಬೇಕಾಗಿದ್ದಾರೆ
ಆಸಕ್ತರು ಸಂಪರ್ಕಿಸಿ
8050129685

ಜಮೀನು ಮಾರಾಟಕ್ಕಿದೆ
ಒಟ್ಟು ಆರು ಎಕರೆ ಹತ್ತು ಗುಂಟೆ ಜಮೀನು, ಇದು ಗ್ರೀನ್ ಜೋನ್ ಇಂದ ಎಲ್ಲೋ ಜೋನ್ ಗೆ ಪರಿವರ್ತನೆ ಆಗಿ ನಾಲ್ಕು ಎಕರೆ ಜಾಗದಲ್ಲಿ 66000 ಅಡಿ FCI ಕಟ್ಟಡ (ಗೋಡೌನ್)ಇದೆ ಇನ್ನು ಉಳಿಕೆ ಖಾಲಿ ಜಾಗ ಎರಡು ಎಕರೆ ಹತ್ತು ಗುಂಟೆ ಇದೆ. ಇದು ಸಹ ಕನ್ವರ್ಷನ್ ಆಗಿದೆ. ಈ ಜಾಗವು ಚಾಮರಾಜನಗರ ಫ್ಲೈಓವರ್ ಸಮೀಪ ಇರುತ್ತದೆ. ಸಂಪರ್ಕಿಸಿ: **80889 59506 / 9880930881**

HP DTCP APPROVAL
ನಿಸರ್ಗ ಇಕೋ ಪ್ಯಾರಡೈಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
ನಿಮ್ಮ ಕನಸಿನ ನಿವೇಶನ ಮೈಸೂರಿನಲ್ಲಿ
ಸುಲಭ 4 ಕಂತುಗಳ ಸೌಲಭ್ಯವಿದೆ
ಕೇವಲ ₹650/ ಪ್ರತಿ ಚದರ ಅಡಿ
30x40 | 30x50
40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಕೆಲವೇ ಸೈಟ್‌ಗಳು ಮಾತ್ರ ಲಭ್ಯ
ಹೈಲ್ಯಾಂಡ್ ಪ್ರಾಪರ್ಟೀಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
95133 01854
74060 01386

